ಕರ್ನಾಟಕ ಗಾಂಧೀ ಸ್ಮಾರಕ ನಿಧಿ

# ಬಾಪು ಪ್ರಪಂಚ

# BAPU PRAPANCHA

ಕನ್ನಡ - English Monthly

ಸಂಪುಟ – 2 : ಸಂಚಿಕೆ – 3 | ಮಾರ್ಚ್ 2020 | ಮಾಸಿಕ | ₹ 20/-



ಹಿರಿಯ ಗಾಂಧಿ ಅನುಯಾಯಿ ನಾಡಿನ ಸಾಕ್ಷಿ ಪ್ರಜ್ಞೆಯಾದ ಡಾ. ಹೆಚ್.ಎಸ್. ದೊರೆಸ್ವಾಮಿ ಅವರ ವಿರುದ್ಧ ವಿಜಯಪುರ ನಗರದ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರು ನೀಡಿದ ಕ್ಷುಲ್ಲಕ ಹೇಳಿಕೆಯನ್ನು ಖಂಡಿಸಿ ದಿ. 27.2.2020ರಂದು ಗಾಂಧಿ ಭವನದಲ್ಲಿ ಪ್ರತಿಭಟನಾ ಧರಣಿ ಆಯೋಜಿಸಲಾಗಿತ್ತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಮತ್ತು ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮತ್ತು ಎಲ್ಲಾ ಗಣ್ಯರು ಪ್ರತಿಭಟನಾ ಧರಣಿಯಲ್ಲಿ ಪಾಲ್ಗೊಂಡಿದ್ದರು. ಧರಣಿಯ ನಂತರ ಸರ್ಕಾರಕ್ಕೆ 4 ಅಂಶಗಳ ಹಕ್ಕೊತ್ತಾಯದೊಂದಿಗೆ ಮನವಿ ಕಳುಹಿಸಲಾಯಿತು.





ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಕರ್ನಾಟಕದ ಹಿರಿಯ ಸಾಹಿತಿಗಳು, ಹೋರಾಟಗಾರರು, ತಜ್ಞರು, ಗಾಂಧಿ ಅನುಯಾಯಿಗಳು, ಸಂಘ ಸಂಸ್ಥೆಗಳ ಪದಾದಿಕಾರಿಗಳು, ಕಾರ್ಯಕರ್ತರುಗಳ ಹೆಸರನ್ನು ಇಲ್ಲಿ ಕೊಡಲಾಗಿದೆ. ಶ್ರೀಮತಿ ಮತ್ತು ಶ್ರೀಯುತರುಗಳಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಬಿ.ಟಿ. ಲಲಿತಾನಾಯಕ್, ಮಾವಳ್ಳಿ ಶಂಕರ್, ತಿಪ್ಪನಗೌಡ, ಕೋಡಿಹಳ್ಳಿ ಚಂದ್ರಶೇಖರ್, ಡಾ. ಎಂ.ಪಿ. ನಾಡಗೌಡ, ಜಿ.ಎನ್. ನಾಗರಾಜ್, ಬಿ.ಆರ್. ಪಾಟೀಲ್, ಪ್ರಸನ್ನ, ಎನ್. ಎಸ್. ಖೇಡ, ಕನ್ನಡ ಸೋಮು, ಮೈಕೆಲ್ ಬಿ. ಫೆರ್ನಾಂಡೀಸ್, ಮುಖ್ಯಮಂತ್ರಿ ಚಂದ್ರು, ಡಾ. ಎಸ್. (ಸಿಸಿರಾ) ವೇಮಗಲ್ ಸೋಮಶೇಖರ್, ಪ್ರತಾಪ್ ಲಿಂಗಯ್ಯ, ಇ.ಪಿ. ಮೆನನ್, ಪ್ರಕಾಶ್ ಕೆ., ಎನ್ ಹನುಮೇಗೌಡ, ಜಿ.ಕೆ.ಸಿ. ರೆಡ್ಡಿ, ಪ್ರಕಾಶ್‌ಬಾಬು ಬಿ.ಕೆ., ನಿತ್ಯಾನಂದಸ್ವಾಮಿ, ಜಯಶ್ರೀ ಜೆ.ಎನ್., ಎಸ್.ಆರ್. ಮೆಹ್ರೂರ್‍ಖ್ ಖಾನ್, ವಿಮಲಾ ಕೆ.ಎಸ್., ಟಿ ಸುರೇಂದ್ರರಾವ್, ಆರ್ ನಾಗೇಶ್ ಅರಳಕುಪ್ಪೆ, ಉಸ್ಮಾನ್ ಆರ್., ಪಿ. ಪ್ರಕಾಶ್, ಅಂಜದ್ ಪಾಶ, ರಮೇಶ್, ಜಗನ್, ಎಂ.ಎಸ್. ಜಗದೀಶ, ಸಂದೇಶ್ ಕುಂಬಾರ್, ಮೊಹಮ್ಮದ್ ಯೂಸೂಫ್ ಖನ್ನಿ, ಬಾಬು, ಸಿರಿಮನೆ ನಾಗರಾಜ್, ಸಿ.ಕೆ. ರವಿಚಂದ್ರ, ಕೆ.ಸಿ. ಗಂಗಾಧರ್, ಬಿ.ವಿ. ಜೀವೇಶ್ ಕುಮಾರ್, ಬಿ.ವಿ. ಶರತ್‌ಕುಮಾರ್, ಜ್ಯೋತಿ ಷಾ, ಜಿ.ಎಂ. ಶ್ರೀಕಂಠ, ಮಂಜುನಾಥ್ ಬಿ.ಆರ್., ಸುಜಯ್ ಬಿ.ಎಂ., ಹರಿಹರನ್ ಜೆ., ಡಾ ತುಮಕೂರು ಚಂದ್ರಕಾಂತ, ಸಯ್ಯದ್ ಫಜೀದುಲ್ಲಾ, ಕೆ. ಮಹಾಂತೇಶ್, ಅರುಂಧತಿ, ಸಯ್ಯದ್ ಮೆಹಬೂಬ್, ವಿವೇಕ್ ಸುಭಾಶ್, ಕೀರ್ತಿ ತೊಂಡಗೆರೆ, ಶಶಿಧರ, ಎನ್. ಮಂಜುನಾಥರೆಡ್ಡಿ, ಸಿ. ಮಂಜುನಾಥ, ಬೀರೇಶ್, ಡಾ. ಆರ್. ಅಂಬುಜಾಕ್ಷಿ, ಎ. ಸದಾಶಿವರೆಡ್ಡಿ, ಅನು ಎಲಿಜೆಬತ್, ಶಾಲಿನಿ, ಚೈತ್ರ, ಡಾ. ಗುರುರಾಜ್, ಕೆ.ಎಸ್. ಗುರುಮೂರ್ತಿ, ಹರೀಶ್, ಪ್ರದೀಪ್, ನವಾಜ್, ಸಿ. ಪಾರ್ವತಿ, ಡಾ. ಯ.ಚಿ. ದೊಡ್ಡಯ್ಯ, ಎಸ್.ಎಂ. ಚಂದ್ರಶೇಖರ, ಶಿವಶಂಕರಯ್ಯ ಸಿ.ಎಂ., ಇರ್ಫಾನ್, ವೀರಣ್ಣ, ಡಿಸೋಜ, ಅಬ್ದುರ್ ರಹೀಮ್, ಮೊಹಮ್ಮದ್ ರೆಹಾನ್, ಮಂಗಳ ಎನ್., ಮೊಹಮ್ಮದ್ ಜಹೀರ್, ಅಕ್ಬರ್ ಅಲಿ, ಅನ್ವರ್, ಗೀತಾ ಮೆನನ್, ಎಸ್.ವೈ. ಗುರುಶಾಂತ್, ಎಸ್.ಹೆಚ್. ಶಾರದ, ವಸಂತ, ಹೇಮಾ, ಅಪೂರ್ವ ಜಿ.ಎಸ್., ಎಂ.ವಿ. ರಘು, ಅಪ್ಪಾಸಾಹೇಬ್ ಪಾರ್ನೆಲ್, ಕೃಷ್ಣ, ಟಿ. ಶಶಿಧರ ಶಾಪುರ, ಚಂದ್ರಶೇಖರ ಬಾಳ, ಮೊಹಮ್ಮದ್ ಇಬ್ರಾಹಿಂ ಅಮೀನ್, ಗುಲಾಬ್, ಎ.ಬಿ. ಶಿವರಾಜ, ಕೆ. ಪುಟ್ಟಣ್ಣಯ್ಯ, ದೇವೇಂದ್ರ ನಾಯ್ಕ, ನಾಗರಾಜ ಎಸ್, ತಿಲಕ್‌ರಾಜ್ ಎ.ಕೆ., ಸಯ್ಯದ್ ಆಸೀಫ್, ಶ್ರೀನಾಥ ಪೂಜಾರಿ, ರಿಯಾಜ್ ಅಹಮದ್, ಮೊಹಮ್ಮದ್ ನಮ್ಜಾ, ವಿರೂಪಾಕ್ಷಪ್ಪ, ಪಶುಪತಿ ಕೊಪ್ಪ ಸುಬ್ಬಣ್ಣ, ಗೋವಿಂದರಾವ್, ಅಬ್ದುಲ್ ಹಮೀದ್, ಬಾಲಾಜಿ ಕಾಮತ್, ಮಂಜುನಾಥ, ಮಹೇಶ್ ಎಂ., ಅಕ್ಷಯ್ ಕುಮಾರ್, ಜಿ. ಗುರು, ನರೆನದರ ಕೆ., ಶ್ರೀನಿವಾಸ ಟಿ., ಆರ್. ವೆಂಕಟೇಶ, ಯಶೋಧ, ರಾಧ, ಬೃಂದಾ ಅಡಿಗೆ, ಕುಮಾರ್ ಆರ್., ಹೆಚ್. ಶಿವರಾಮೇಗೌಡ, ಸೋಮಶೇಖರ, ರಾಹತ್ ಬೇಗಮ್, ಶೀಲಾ, ಲಕ್ಷ್ಮಿ, ಗಣೇಶ ಪಾಟೀಲ, ಸುನೀಲ್ ಶ್ರೀರಂಗ, ಇಕ್ಬಾಲ್ ಅಹಮದ್ ದೇಸಾಯಿ, ತನ್ವೀರ್ ಅಹ್ಮದ್, ಮೊಹಮ್ಮದ್ ನಯೀಂ, ಟಿ. ರಹಮಾನ್, ತಾಹಿರ್ ಹುಸೇನ್, ಎ.ಎ. ಖಾನ್, ಎಂ. ಗಂಗಾಧರ, ಮೊಹಮ್ಮದ್ ಇಕ್ಬಾಲ್, ಆರ್. ಖಲೀಮುಲ್ಲಾ, ಜಿಯಾ ನೊಮಾನಿ, ಆರ್.ಎ. ಜನಾಬ್, ಮುಜೀದ್ ಎ ಖಾನ್, ಎಸ್. ಆರ್. ಖಮ್ರಾಜ್, ಝೂನ್ಸಿ ಲಕ್ಷ್ಮಿರಾಣಿ ಕೆ., ಅಬ್ಬಾಸ್ ಖಿಗ್ಗಾ, ಪ್ರದೀಪ್ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು.



# ಕರ್ನಾಟಕ ಗಾಂಧೀ ಸ್ಮಾರಕ ನಿಧಿ

**ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ**

**ಬಾ–ಬಾಪು 150 ವಿಶೇಷ ಸಂಚಿಕೆ**

**BAPU PRAPANCHA**

(A Monthly Kannada - English Magazine of Gandhian Thoughts) occasion of 150th Anniversary of Mahatma Gandhi & Kasturba

**ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ**

Chief Editor : **Dr. Wooday P. Krishna**

**ಸಂಪಾದಕರು : ಇಂದಿರಾ ಕೃಷ್ಣಪ್ಪ**

Editor : **Indira Krishnappa**

**ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ**

Advisory Editor : **V.N. Tippana Gouda**

**ಪ್ರಕಾಶಕರು : ಕಾರ್ಯದರ್ಶಿ**

**ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ**
**ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001**

Published by :
**Karnataka Gandhi Smaraka Nidhi**
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

## ಈ ಸಂಚಿಕೆಯಲ್ಲಿ





**ಬೆಸ್ಟ್ ನ್ಯಾಷನಲ್ ಪಾರ್ಕ್‌ನಲ್ಲಿ ಚಿಗುರ ತೇರು**

ಬಂಡೀಪುರಕ್ಕೆ ಬೆಸ್ಟ್ ನ್ಯಾಷನಲ್ ಸಫಾರಿಯಲ್ಲಿ ಹುಲಿ, ಆನೆ, ಚಿರತೆ, ಮೊಸಳೆ ಅಷ್ಟೇ ಅಲ್ಲದೇ ಅಪರೂಪದ ಪಕ್ಷಿಗಳನ್ನು ಇಲ್ಲಿ ವೀಕ್ಷಿಸಬಹುದು. ಸುತ್ತ ಹಬ್ಬಿದ ಹಸಿರು ಮೌಲಂಗಿ ಪಾರ್ಕ್‌ನ ವಿಶೇಷ. ಮೌಲಂಗಿ ಬಹಳ ಹಿತವಾದ ಒನ್ ಡೇ ಪಿಕ್‌ನಿಕ್ ಸ್ಥಳ ಕೂಡಾ ಹೌದು. ಕಡಿದಾದ ಇಳಿಜಾರಲ್ಲಿ ಇಳಿಯುವುದು, ಬಂಡೆಗಳನ್ನು ಹತ್ತಿಳಿಯುವ ಸಾಹಸದ ಆಟಗಳನ್ನು ಇಲ್ಲಿ ಆಡಬಹುದು. ಅಪರೂಪದ ಸಸ್ಯ ಸಂಕುಲಗಳೂ ಇಲ್ಲಿವೆ. ಅಂಬಿಕಾನಗರದಿಂದ ಬೊಮ್ಮನಹಳ್ಳಿಗೆ ಹೋಗುವ ಮಾರ್ಗದಲ್ಲಿ ವೀಕ್ಷಣಾ ಗೋಪುರ ಒಂದಿದೆ. ಇಲ್ಲಿಗೆ ಬೆಳಗ್ಗೆ ಹಾಗೂ ಸಂಜೆ ಹೋದ್ರೆ ಅದ್ಭುತ ಸೂರ್ಯೋದಯ ಹಾಗೂ ಸೂರ್ಯಾಸ್ತವನ್ನು ಸವಿಯಬಹುದು.

ಕೃಪೆ : ಕನ್ನಡಪ್ರಭ - 25.2.2020

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು, ಬಾಪು ಪ್ರಪಂಚದ್ದಲ್ಲ.ಚಿತ್ರಗಳು ಸಾಂದರ್ಭಿಕವಾಗಿರುತ್ತವೆ.

# ಸಂಪಾದಕೀಯ


## ಇಂದಿರಾ ಕೃಷ್ಣಪ್ಪ



ಎಲ್ಲರಿಗೂ ನಮಸ್ಕಾರಗಳು, ಚಿಕ್ಕ ಮಕ್ಕಳಿಗೆ ಪರೀಕ್ಷೆ ಬಂತು, ಅದರ ಹಿಂದೆಯೇ ರಜೆ ಬರುತ್ತೆ; ತಂದೆ ತಾಯಿಯರು, ಮಾಸ್ತರು ಎಲ್ಲಾ ಧಾವಂತಗಳು ಕಡಿಮೆ ಆಗುತ್ತೆ ಅಂತ ಕಾಯುತ್ತಿದ್ದರು. ಯುಗಾದಿ ಬಂತು, ಹೊಸವರುಷಕೆ ಹೊಸತು ಹೊಸತು ತಂದಿದೆ. ಗಿಡಮರಗಳು ಹಸಿರು, ಕೆಂಪು ಚಿಗುರು ಹೊತ್ತು ನಲಿಯುತ್ತಿವೆ. ಮಾವು ಬೇವು ಹೊಂಗೆ ಮರಗಳು ಹೂ ಗೊಂಚಲು ಹೊತ್ತು ಬಾಗಿವೆ. ಮಲ್ಲೆ, ಜಾಜಿ, ಸಂಪಿಗೆ ಹೂವುಗಳ ಸುಗಂಧ ಭರಿತ ತಂಗಾಳಿ ಬೀಸುತ್ತಿವೆ. ಅವುಗಳನ್ನು ಆಸ್ವಾದಿಸುತ್ತಾ ಕಣ್ಣು ತುಂಬಿ, ಮನದುಂಬಿ ಸಂಭ್ರಮ ಪಡುವ ದಿನಗಳಲ್ಲಿ ನಾವಿಲ್ಲ. ಎಲ್ಲರಲ್ಲೂ ಆತಂಕ, ಭಯ, ದುಗುಡ ತುಂಬಿಕೊಂಡಿದೆ.

ಏಕೆ ಹೀಗಾಗುತ್ತಿದೆ? ದೇಶವೆಲ್ಲಾ ಅಷ್ಟೇಕೆ, ಇಡೀ ವಿಶ್ವದಾದ್ಯಂತ ಇರುವ ರಾಷ್ಟ್ರಗಳು ಭೀತಿಯಿಂದ, ಎಲ್ಲಾ ಸಾರ್ವಜನಿಕ ಕೆಲಸ – ಕಾರ್ಯಗಳು, ವ್ಯವಹಾರ, ಸಭೆ ಸಮಾರಂಭ, ತರಬೇತಿ, ಶಾಲೆ ಕಾಲೇಜು ಹೀಗೆ ಎಲ್ಲವನ್ನೂ ಸ್ಥಗಿತಗೊಳಿಸುತ್ತಿವೆ. "ಕರೋನಾ ವೈರಸ್", ಎಂಬ ಸಾವಿನ ಸಾಂಕ್ರಾಮಿಕ, ಅದೃಶ್ಯವಾಗಿ ಎಲ್ಲರನ್ನೂ ಆವರಿಸಿಕೊಳ್ಳುತ್ತಿದೆ ಎಂಬುದನ್ನು ಎಲ್ಲಾ ಮಾಧ್ಯಮಗಳಲ್ಲಿ ಸವಿವರವಾಗಿ ಇಡೀ ದಿನ ಭಿತ್ತರಿಸಿ ಜನರನ್ನು ಜಾಗೃತಗೊಳಿಸುತ್ತಿವೆ. ಕಳೆದ ಒಂದು ತಿಂಗಳಿನಿಂದ ಈ ಭೀತಿಯ ವಾತಾವರಣದ ಬಗ್ಗೆ ಜನಜಾಗೃತಿ, ಆರೋಗ್ಯ ಜಾಗೃತಿಗಳನ್ನು ವಿಶ್ವ ಸಂಸ್ಥೆ ಮತ್ತು ಎಲ್ಲಾ ದೇಶಗಳು ಕೈಗೊಳ್ಳುತ್ತಿವೆ. ಈ ಭೀಕರ ವಾತಾವರಣ ಉಂಟಾಗಲು ಯಾರು ಕಾರಣ? ನಾವೆಷ್ಟು ಭಾದ್ಯಸ್ಥರು? ನಮ್ಮ ಹೊಣೆಗಾರಿಕೆ ಎಷ್ಟು? ನಾವೇನು ಮಾಡಬೇಕು? ಎಂಬ ಬಗ್ಗೆ ಯೋಚಿಸಬೇಕಿದೆ.

ಈಗ್ಗೆ ಒಂದೂವರೆ ವರ್ಷಗಳಿಂದ ಜಗತ್ತಿನ ತಾಪಮಾನದ ಏರಿಕೆ ಪರಿಸರ ವಿನಾಶದ ಬಗ್ಗೆ ಸ್ವೀಡನ್‌ನ ಪುಟ್ಟ ಹೆಣ್ಣು ಮಗಳು "ಗ್ರೇಟಾ ತನ್‌ಬರ್ಗ್", ಜನರನ್ನು ಎಚ್ಚರಿಸುತ್ತಾ ಸತ್ಯಾಗ್ರಹ ಮಾಡುತ್ತಾ, ವಿಶ್ವದ ಗಮನ ಸೆಳೆದಿದ್ದಾಳೆ. ಎಲ್ಲರೂ ಸೇರಿ ವಿಶ್ವದ ವಿನಾಶವನ್ನು ತಪ್ಪಿಸುವುದು ಹೇಗೆ? ಎಂಬ ಬಗ್ಗೆ ಆಲೋಚಿಸಲು ಹಚ್ಚಿದ್ದಾಳೆ. ವಿಶ್ವದ ನಾಯಕರು, ತಜ್ಞರು, ಮತ್ತು ವಿಜ್ಞಾನಿಗಳು ಪರಿಸರ ರಕ್ಷಕರು ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಪರಿಶೀಲಿಸುತ್ತಾ ವಿಶ್ವದ ವಿನಾಶ ಅಂದರೆ 'ಪ್ರಳಯ'ವನ್ನು ತಪ್ಪಿಸುವ ದಿಕ್ಕಿನತ್ತ ಮುನ್ನುಡಿಯಿಟ್ಟಿದ್ದಾರೆ. ವಿಶ್ವಸಂಸ್ಥೆ ಹಾಗೂ ಎಲ್ಲಾ ರಾಷ್ಟ್ರಗಳು ಸಮರೋಪಾದಿಯಲ್ಲಿ ಸರ್ವನಾಶದ ವೈರಾಣುವಿನ ಕೋವಿಡ್–19ನ ಮೂಲೋಚ್ಚಾಟನೆಗೆ ಸಂಜೀವಿನಿಯನ್ನು ಅರಸುತ್ತಿವೆ. ನೈರ್ಮಲ್ಯ ವ್ಯವಸ್ಥೆ ಒಂದೆಡೆಯಾದರೆ ಮುನ್ನೆಚ್ಚರಿಕೆ ಕ್ರಮ ಇನ್ನೊಂದೆಡೆ ತುರ್ತು ಚಿಕಿತ್ಸಾ ಕ್ರಮಗಳನ್ನು ಮತ್ತೊಂದೆಡೆಯಿಂದ ಕೈಗೊಳ್ಳಲಾಗುತ್ತಿದೆ. ಕಾಯಿಲೆಯ ಕಣಜವಾಗಿರುವ ನಮ್ಮ ಕೈಗಳನ್ನು ಹೇಗೆ ಉಪಯೋಗಿಸುವುದು? ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವನ್ನು ವಿಸ್ತರಿಸುವುದು ಹೇಗೆ? ಮಂಡ್ಯದ ಗ್ರಾಮದ ಹತ್ತಿರುವ ಕಾಡಿನ ಬೆಂಕಿಯನ್ನು ನಂದಿಸುವುದು ಹೇಗೆ? ರಿಯಲ್ ಎಸ್ಟೇಟ್ ಮಾಫಿಯಾಗಳಿಂದ ಗಣಿ ಮಾಫಿಯಾಗಳಿಂದ ಕಾಡಿನ ಸರ್ವನಾಶವಾಗುವುದನ್ನು ಸರ್ಕಾರ ತಪ್ಪಿಸಬೇಕಿದೆ. ಆಸ್ಟ್ರೇಲಿಯಾದಲ್ಲಿ ದಗದಗನೆ ಹೊತ್ತಿ ಉರಿಯುತ್ತಿರುವ ಕಾಡ್ಗಿಚ್ಚು ಆರಿಸುವುದು ಹೇಗೆ? ಹಿಮಪರ್ವತಗಳು ತಾಪಮಾನದಿಂದ ಹಿಮ ಕರಗಿ, ನದಿ ಸಮುದ್ರ ಮತ್ತು ಸಾಗರಗಳು ತುಂಬಿ, ಸುನಾಮಿಗಳಾಗುವುದನ್ನು ತಪ್ಪಿಸುವುದು ಹೇಗೆ? ಸಮುದ್ರಗಳಲ್ಲಿನ ಮತ್ತು ಕಾಡಿನಲ್ಲಿನ ಆಮ್ಲೀಕರಣ (acidification) ದಿಂದ ಜೀವ ಸಂಕುಲಗಳ ವಿನಾಶಗಳನ್ನು ತಡೆಯುವುದು ಹೇಗೆ? 2009ರ ಬ್ಲಾಕ್ ಶನಿವಾರದ ಕಾಡ್ಗಿಚ್ಚಿನಿಂದ–450 ಸಾವಿರ ಹೆಕ್ಟೇರು ಕಾಡುವಿನಾಶ, 2018ರ ಕ್ಯಾಲಿಫೋರ್ನಿಯಾದ ಕಾಡ್ಗಿಚ್ಚಿನಿಂದ–809 ಸಾವಿರ ಹೆಕ್ಟೇರು ಕಾಡು ವಿನಾಶ, 2019ರ ಅಮೆಜಾನ್ ಕಾಡ್ಗಿಚ್ಚಿನಿಂದ–890 ಹೇಕ್ಟೇರು ಕಾಡು ವಿನಾಶ, 2019ರ ಆಸ್ಟ್ರೇಲಿಯನ್ ಕಾಡಿನಿಂದ 10 ಮಿಲಿಯನ್ ಹೆಕ್ಟೇರು ಮತ್ತು 2019ರ ಸೈಬೀರಿಯನ್ ಕಾಡ್ಗಿಚ್ಚಿನಿಂದ–2.7 ಮಿಲಿಯನ್ ಲಕ್ಷ ಹೆಕ್ಟೇರು ಪ್ರದೇಶ ಕಾಡ್ಗಿಚ್ಚಿನಿಂದಾಗಿ ಜಗತ್ತಿನಾದ್ಯಂತ ವಾಯು ಮಾಲಿನ್ಯ, ಪರಿಸರ ಮಾಲಿನ್ಯದೊಂದಿಗೆ ಇಡೀ ಭೂ ಮಂಡಲ ವಿನಾಶಕ್ಕೆ ಸಜ್ಜುಗೊಳ್ಳುತ್ತಿರುವುದರ ಕಡೆ ಎಲ್ಲರೂ ಚಿಂತಿಸಿರಿ. ರಕ್ಷಣಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಸದಾ ಸನ್ನದ್ಧರಾಗುವುದು, ಜಾಗೃತರಾಗುವುದರ ಕಡೆಗೆ, ಗ್ರೇಟಾ ತನ್‌ಬರ್ಗಳೊಂದಿಗೆ ಧ್ವನಿ ಎತ್ತೋಣ. "ಇರುವುದೊಂದೇ ಭೂಮಿ, ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸೋಣ." ಮಹಾತ್ಮಾಜಿ ಅವರ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವುದರಿಂದ ನೂರಾರು ಪರಿಸರ ಸೇವಕರು, ತಜ್ಞರ ಮಾತಗಳನ್ನು ಆಲಿಸಿ ಕ್ರಮ ಕೈಗೊಳ್ಳುವುದರಿಂದ ಪ್ರಪಂಚವನ್ನು ರಕ್ಷಿಸಬಹುದು. ಕರೋನ ಮುಕ್ತ 'ಭೂಮಿ'ಯಾಗಿಸಬಹುದು. ಕೈಗಳಿಂದ ರೋಗ ಹರಡದಂತೆ, 'ಹ್ಯಾಂಡ್ಸಮ್' ಮುಂಜಾಗರೂಕತೆ ಕ್ರಮಗಳು, ಮತ್ತು ಕಾಡ್ಗಿಚ್ಚು ಹರಡದಂತೆ ಮತ್ತು ಹರಡಿದಾಗ ತೆಗೆದುಕೊಳ್ಳಬೇಕಾದ ಕ್ರಮ ಕುರಿತು ಪುಟ ಸಂಖ್ಯೆ 15ರಲ್ಲಿ ಕೊಡಲಾಗಿದೆ. ಪಾಲಿಸಲು ಮುಂದಾಗಿ ಎಂದು ಕೋರುತ್ತೇನೆ. ಸಂಚಿಕೆಯ ಸಂಪಾದಕೀಯ ಕಡೆಯ ಭಾಗ ಮುದ್ರಣದಲ್ಲಿದ್ದಾಗ ನಾಡೋಜ ಪಾಟೀಲ ಪುಟ್ಟಪ್ಪ ಅವರು ನಿಧನರಾದ ಸುದ್ದಿ ಬಂದಿದೆ. ಗಾಂಧಿ ಭವನದೊಂದಿಗೆ ಅವರ ಒಡನಾಟ ಮತ್ತು ನನ್ನಜ್ಜನಂತಿದ್ದ ಅವರು ನನ್ನ ಮೇಲಿಟ್ಟ ಪ್ರೀತಿ ನನಸಿಗೆ ಬಂದು ಕಣ್ಣು ತುಂಬಿಕೊಂಡವು. 2020ನೇ ಜನವರಿ 30ರ ಸರ್ವೋದಯ ದಿನಾಚರಣೆಗೆ ಆಗಮಿಸಲಿಕ್ಕೆ ಸಾಧ್ಯವಾಗುವುದೇ? ಎಂದು ನಾನು ದೂರವಾಣಿ ಕರೆ ಮಾಡಿದಾಗ, "ತಾಯಿ, ನಾನು ಬಂದೇ ಬರಬೇಕು, ನನ್ನನ್ನು ಕರೆಯಿಸಿಕೋ" ಎಂದಿದ್ದರು. ಆರೋಗ್ಯ ಸ್ಥಿತಿ ಡೋಲಾಯಮಾನವಾಗಿದ್ದರೂ ಯಾರು ಬೇಡವೆಂದರು ಲೆಕ್ಕಿಸದೆ ಸರ್ವೋದಯ ಕಾರ್ಯಕ್ರಮಕ್ಕೆ ಬಂದು 'ಪ್ರತಿಭ ಪುರಸ್ಕಾರ' ನಡೆಸಿಕೊಟ್ಟರು. ವಿಶ್ರಾಂತಿ ಕೊಠಡಿಯಲ್ಲಿ ಸಿಸಿರಾ ಅವರೊಂದಿಗೆ, ನಾನು ಅವರಿಗೆ ನಮನ ಸಲ್ಲಿಸಲು ತೆರಳಿದಾಗ ನನ್ನ ಕೈಹಿಡಿದು "ಒಳ್ಳೆಯ ಕೆಲಸ ಮಾಡಿದೆ ತಾಯಿ" ಎಂದರು. ಇದೇ 'ಅವರ ಕಡೆಯ ಸಾರ್ವಜನಿಕ ಕಾರ್ಯಕ್ರಮ ಆಗಬಹುದೇನೋ' ಅಂತ ಆ ಕ್ಷಣ ನನಗನ್ನಿಸಿತ್ತು. ಜೀವನದ ಅಂತಿಮ ದಿನಗಳಲ್ಲಿ ಸರ್ವೋದಯದಲ್ಲಿ ಭಾಗಿಯಾದ ಸಂತೃಪ್ತಿ ಅವರ ಮನದಲ್ಲಿ ಉಳುಯುವಂತಾದ್ದದ್ದು, ಗಾಂಧಿ ಭವನ ಕೊಟ್ಟ ನೆಮ್ಮದಿಯಾಗಿದೆ.



ಗ್ರೇಟಾ ತನ್‌ಬರ್ಗ್




# ಮೊದಲನೆಯ ಮೊಕದ್ದಮೆ

## ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

"ಹೌದು, ಆದರೆ ನಮಗೆ ಬೇಕಾಗಿರುವುದು ಪದವೀಧರ" ಎಂದು ಉತ್ತರ ಬಂತು. ಬೇರೆ ದಾರಿ ಇರಲಿಲ್ಲ. ದುಃಖದಿಂದ ಕೈ ಕೈ ಹಿಸುಕಿಕೊಂಡೆ. ನಮ್ಮಣ್ಣನಿಗೂ ಸಹ ತುಂಬಾ ಯೋಚನೆಯಂಟಾಯಿತು, ಇನ್ನು ಹೆಚ್ಚು ಕಾಲವನ್ನು ಬೊಂಬಾಯಿಯಲ್ಲಿ ಕಳೆಯುವುದು ಪ್ರಯೋಜನವಿಲ್ಲವೆಂಬ ತೀರ್ಮಾನಕ್ಕೆ ನಾವಿಬ್ಬರೂ ಬಂದೆವು. ರಾಜಕೋಟೆಯಲ್ಲಿ ನೆಲೆಸುವುದು, ಅಲ್ಲಿಯೇ ಸಣ್ಣ ವಕೀಲನಾಗುವುದು, ನಮ್ಮ ಅಣ್ಣ ಅರ್ಜಿ ಬರೆಯುವುದು ಮುಂತಾದ ಕೆಲವು ಕೆಲಸಗಳನ್ನು ನನಗೆ ವಹಿಸಬಹುದು. ರಾಜಕೋಟೆಯಲ್ಲಿ ಆಗಲೇ ಇದ್ದೇ ಇತ್ತು. ಬೊಂಬಾಯಿಯ ಮನೆಯನ್ನು ಮುಚ್ಚುವುದರಿಂದ ತಕ್ಕಮಟ್ಟಿಗೆ ಹಣ ಉಳಿತಾಯವಾಗುವುದಿತ್ತು. ಆ ಸೂಚನೆ ನನಗೆ ಒಪ್ಪಿಗೆಯಾಯಿತು. ಹೀಗೆ ಆರು ತಿಂಗಳು ಬೊಂಬಾಯಿಯಲ್ಲಿ ವಾಸಮಾಡಿದ ನಂತರ ಅಲ್ಲಿದ್ದ ನನ್ನ ಸಣ್ಣ ಮನೆಯನ್ನು ಬಿಟ್ಟುದಾಯಿತು,

ನಾನು ಬೊಂಬಾಯಿಯಲ್ಲಿರುವವರೆಗೆ ನಿತ್ಯವೂ ಹೈಕೋರ್ಟಿಗೆ ಹೋಗುತ್ತಿದೆ. ಆದರೆ ಅಲ್ಲಿ ನಾನು ಏನನ್ನು ಕಲಿತೆ ಎಂದು ಹೇಳಲಾರೆ. ಹೆಚ್ಚಾಗಿ ಕಲಿಯಲು ಅವಶ್ಯಕವಾದ ಕಾನೂನಿನ ವೈಜ್ಞಾನಿಕ ತಿಳಿವು ನನಗೆ ಇರಲಿಲ್ಲ. ಅನೇಕ ವೇಳೆ ನಡೆಯುತ್ತಿದ್ದ ಮೊಕದ್ದಮೆಗಳನ್ನು ಅನುಸರಿಸಲು ಸಾಧ್ಯವಾಗದೆ ನಾನು ನಿದ್ರೆ ಹೋಗಿಬಿಡುತ್ತಿದ್ದೆ. ಇದರಲ್ಲಿ ನನ್ನ ಜತೆಗಾರರಾಗಿದ್ದವರು ಇತರರೂ ಇದ್ದರು. ಅದರಿಂದ ನನ್ನ ನಾಚಿಕೆ, ಕಡಿಮೆ ಆಗುತ್ತಿತ್ತು. ಕೆಲವು ಕಾಲ ಕಳೆದ ಮೇಲೆ, ಹೈಕೋರ್ಟಿನಲ್ಲಿ ತೂಕಡಿಸುವುದೂ ಒಂದು ಸಭ್ಯಪದ್ಧತಿ ಎಂದು ನನಗೆ ತಿಳಿದುದರಿಂದ, ನನ್ನ ಲಜ್ಜಾಶೀಲತೆ ಸಹ ಮರೆಯಾಯಿತು.

ಬೊಂಬಾಯಿಯಲ್ಲಿ ಮೊಕದ್ದಮೆಗಳೇ ಇಲ್ಲದೆ ಇದ್ದ ನನ್ನಂತಹ ಬ್ಯಾರಿಸ್ಟರುಗಳು, ಈ ತಲೆಮಾರಿನಲ್ಲಿಯೂ ಇರುವುದಾದರೆ, ಅವರಿಗೆ ಜೀವನ ನಡೆಸುವ ಒಂದು ಸಣ್ಣ ನಿಯಮವನ್ನು ಹೇಳಬಯಸುತ್ತೇನೆ. ನಾನು ಗಿರ್‌ಗಾಮ್‌ನಲ್ಲಿ ವಾಸಿಸುತ್ತಿದ್ದರೂ ನಾನು ಯಾವಾಗಲೂ ವಾಹನದಲ್ಲಾಗಲೀ, ಟ್ರಾಮಿನಲ್ಲಾಗಲೀ ಪ್ರಯಾಣ ಮಾಡುತ್ತಿರಲಿಲ್ಲ. ಹೈಕೋರ್ಟಿಗೆ ನಡೆದುಕೊಂಡು ಹೋಗುವುದನ್ನೇ ನಾನು ನಿಯಮವಾಗಿ ಮಾಡಿಕೊಂಡಿದ್ದೆ. ಅದಕ್ಕೆ ನಲವತ್ತೈದು ನಿಮಿಷಗಳು ಹಿಡಿಯುತ್ತಿದ್ದವು ಮತ್ತು ನಾನು ಮನೆಗೆ ತಪ್ಪದೆ ನಡೆದುಕೊಂಡೇ ಹಿಂದಿರುಗುತ್ತಿದ್ದೆ. ಮಧ್ಯಾಹ್ನದ ಪ್ರಖರ ಬಿಸಿಲು ಸಹ ನನಗೆ ಅಭ್ಯಾಸವಾಗಿತ್ತು. ಹೀಗೆ ಕೋರ್ಟಿಗೆ ನಡೆದುಕೊಂಡೇ ಬಂದು ಹೋಗುತ್ತಿದ್ದುದರಿಂದ ನನಗೆ ತಕ್ಕಮಟ್ಟಿಗೆ ಹಣ ಉಳಿತಾಯವಾಗುತ್ತಿತ್ತು. ನನ್ನ ಅನೇಕ ಮಿತ್ರರು ಬೊಂಬಾಯಿಯಲ್ಲಿ ಕಾಯಿಲೆ ಬೀಳುತ್ತಿದ್ದರೂ, ನಾನು ಒಂದುಸಲವೂ ಕಾಯಿಲೆ ಬಿದ್ದ ನೆನಪು ನನಗೆ ಇಲ್ಲ. ನಾನು ಹಣವನ್ನು ಸಂಪಾದಿಸಲು ಪ್ರಾರಂಭಿಸಿದ ನಂತರವೂ ಸಹ ಆಫೀಸಿಗೆ ನಡೆದುಕೊಂಡೇ ಹೋಗಿ ಬರುವ ಅಭ್ಯಾಸವನ್ನು ಮುಂದುವರಿಸಿದೆ. ಆ ಅಭ್ಯಾಸದ ಲಾಭ ನನಗೆ ಇಂದಿಗೂ ಆಗುತ್ತಿದೆ.



ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ, ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರವು

– ಸ್ವಾಮಿ ವಿವೇಕಾನಂದ

ಜನರಿಗೆ ಹಿರಿಯರಿಂದ ಬರುವ ಆಸ್ತಿಯಲ್ಲಿ ಭಾಷೆಯೂ ಒಂದು. ಅದು ಚನ್ನಾಗಿದ್ದಷ್ಟೂ ಭೂಷಣ

– ಬಿ.ಎಂ.ಶ್ರೀ.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

# ಬೆಂಗಳೂರು ಖಾದಿ ಪ್ರದರ್ಶನ

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

ಮೋ. ಕ. ಗಾಂಧಿ, ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಶ್ರೀ ಗಂಗಾಧರರಾವ ದೇಶಪಾಂಡೆ ಇವರು ಬೆಂಗಳೂರಿನ ಖಾದಿ ಪ್ರದರ್ಶನ ಪೂರ್ಣ ಯಶಸ್ವಿಯಾಗುವಂತೆ ಮಾಡಲು ಮಹತ್ತರ ಪ್ರಯತ್ನ ನಡೆಸುತ್ತಿದ್ದಾರೆ. ಅವರು ಗುಣಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದಾರೆ, ಗಾತ್ರಕ್ಕಲ್ಲ. ಈ ದೃಷ್ಟಿಯನ್ನಿಟ್ಟುಕೊಂಡು ಪ್ರದರ್ಶನದ ವ್ಯಾಪಕತೆಯನ್ನು ಉದ್ದೇಶಪೂರ್ವಕವಾಗಿಯೇ ಅವರು ಮಿತಿಗೊಳಿಸಿದ್ದಾರೆ. ಆದ್ದರಿಂದ ಇದು ಅಖಿಲ ಭಾರತವಾಗದೆ ದಕ್ಷಿಣ ಭಾರತ ಪ್ರದರ್ಶನವಾಗುತ್ತಿದೆ. ಆದರೆ ಈ ಪ್ರದರ್ಶನವನ್ನು ಸಾಕಷ್ಟು ಬೋಧಪ್ರದವಾಗಿ ಮಾಡಲು, ಎಲ್ಲ ಪ್ರಾಂತಗಳಿಂದಲೂ ಅಗತ್ಯವಾದ ತಾಂತ್ರಿಕ ನೆರವು ಪಡೆಯಲು ಅನೇಕರನ್ನು ಅವರು ಆಹ್ವಾನಿಸುತ್ತಿದ್ದಾರೆ. ಈ ಕಾರಣಕ್ಕಾಗಿ ಹತ್ತಿಯ ಕಾಳು ಬಿಡಿಸುವುದರಿಂದ ಬಟ್ಟೆ ನೇಯುವವರೆಗೆ ಖಾದಿಯಲ್ಲಿ ಬಳಸುವ ಉಪಕರಣಗಳನ್ನು ನೋಡ ಬಯಸುವವರು ತಪ್ಪದೇ ಈ ಪ್ರದರ್ಶನ ನೋಡಬೇಕು. ಕುಶಲ ಕೈಗಳ ಈ ಉಪಕರಣಗಳನ್ನು ಬಳಸುವುದನ್ನು ಪ್ರತ್ಯಕ್ಷ ನೋಡಬೇಕು. ಈ ಪ್ರದರ್ಶನ ವೆಚ್ಚಕ್ಕಾಗಿ ಮೈಸೂರು ಸರ್ಕಾರದವರು 500 ರೂಪಾಯಿಗಳ (ಐದುನೂರು ರೂಪಾಯಿಗಳ) ಧನಸಹಾಯ ನೀಡಿರುವುದು ಮತ್ತು ಕೈಗಾರಿಕೆ ಇಲಾಖೆಯ ಡೈರೆಕ್ಟರು ಪ್ರದರ್ಶನ ಸಮಿತಿಯ ಸದಸ್ಯರಾಗಿರಲು ಒಪ್ಪಿರುವುದೂ ಮೈಸೂರಿನಲ್ಲಿ ಖಾದಿಯ ಭವಿತವ್ಯಕ್ಕೆ ಇದು ಶುಭಸೂಚಕವಾಗಿದೆ. ಖಾದಿಯಲ್ಲಿ ಅಡಕವಾಗಿರುವ ಅರ್ಥವ್ಯವಸ್ಥೆ ಹಾಗೂ ಜನಹಿತ ಇಷ್ಟು ಮಹತ್ವಪೂರ್ಣವಾಗಿದ್ದರೂ ರಾಜ ಮಹಾರಾಜರು ಖಾದಿ ಆಂದೋಲನಕ್ಕೆ ನೀಡಬೇಕಾದಷ್ಟು ಬೆಂಬಲ ನೀಡದಿರುವುದು ಸೋಜಿಗವೇ ಸರಿ. ಲಕ್ಷಾಂತರ ಹಳ್ಳಿಗರಿಗೆ ಉಪಕಸುಬು ಅತ್ಯಗತ್ಯ ಎಂದು ಎಲ್ಲರೂ ಒಪ್ಪುತ್ತಾರೆ. ಗ್ರಾಮಾಭ್ಯುದಯವನ್ನು ಬಯಸಿ ರಚಿಸಿರುವ ಅನೇಕ ಯೋಜನೆಗಳ ಕಾಗದಗಳು ಬೀದಿ ಬೀದಿಗಳಲ್ಲಿ ಮಾರಾಟವಾಗುತ್ತವೆ. ಆದರೆ ಖಾದಿಯು ವಿಶ್ವವ್ಯಾಪಕತೆಯನ್ನು ಬೇರೆ ಯಾವ ಯೋಜನೆಯೂ ಪಡೆಯಲಾರದು. ನನಗೆ ತಿಳಿದಿರುವ ಮಟ್ಟಿಗೆ, ಖಾದಿ ಯೋಜನೆಯಷ್ಟು ವ್ಯಾಪಕವಾಗಿ ಬೇರೆ ಯಾವ ಯೋಜನೆಯೂ ನಡೆಯುತ್ತಿಲ್ಲ. ಕನಿಷ್ಠ 1500 ಗ್ರಾಮಗಳಲ್ಲಿ ಖಾದಿ ಯೋಜನೆಯ ಪ್ರಯೋಗ ನಡೆಯುತ್ತಿರುವುದು ಅಲ್ಪ ಸಾಹಸವೇನೂ ಅಲ್ಲ.

ಖಾದಿಗೆ ರಾಜಕೀಯ ಗಂಧ ಇದೆ ಎಂದು ಸರಕಾರದ ನೌಕರರು ಸಹ ಗಾಬರಿ ಪಡಬೇಕಾದ್ದಿಲ್ಲ. ಖಾದಿಗೆ ರಾಜಕೀಯ ಸಂಬಂಧ ಉಂಟೆಂದು ಹೇಳಿದರೆ ಅನೇಕ ತಜ್ಞ ರಾಜಕಾರಿಣಿಗಳು ನಗುತ್ತಾರೆ. 'ಶಾಸನಸಭೆ' ಎಂಬ ಪದವನ್ನು ರಾಜಕೀಯದಲ್ಲಿ ಯಾವ ಅರ್ಥದಲ್ಲಿ ಬಳಸಲಾಗುತ್ತದೆಯೋ ಅದೇ ಅರ್ಥದಲ್ಲಿ 'ಖಾದಿ' ಪದವನ್ನು ಪ್ರಯೋಗಿಸುವುದಾದರೆ ಅವರು ಹೇಳುವುದು ನಿಜವೇ ಆದೀತು. ಶಿಕ್ಷಣ, ಸಹಕಾರ ವ್ಯವಸ್ಥೆ, ಕುಡಿತ ಇವುಗಳಿಗೆ ರಾಜಕೀಯ ಸಂಬಂಧ ಎಷ್ಟಿದೆಯೋ ಅಷ್ಟೇ ಸಂಬಂಧ ಖಾದಿಗೂ ಇದೆ. ಒಂದು ರಾಷ್ಟ್ರವು ಯಾವುದೇ ಒಂದು ಪ್ರಗತಿಪರ ಕಾರ್ಯಕ್ರಮ ಕೈಗೊಂಡಾಗ ಅದರಿಂದಾಗುವ ರಾಜಕೀಯ ಪರಿಣಾಮದಿಂದ ಪಾರಾಗುವುದು ಅಸಾಧ್ಯ. ವೈಸ್‌ರಾಯರು, ರಾಜ ಮಹಾರಾಜರು, ಮತ್ತು ಇತರರೆಲ್ಲರೂ ಅವರು ದೇಶದ್ರೋಹಿಗಳಾಗಿರದಿದ್ದಲ್ಲಿ – ಹಿಂದೂ, ಮುಸ್ಲಿಂ ಐಕ್ಯ ಸಾಧಿಸಲು ಸಕ್ರಿಯ ಪಾತ್ರ ವಹಿಸಬೇಕು. ಹಿಂದೂ–ಮುಸ್ಲಿಂ ಐಕ್ಯದಲ್ಲಿ ಪ್ರಚಂಡ ರಾಜಕೀಯ ಪ್ರಭಾವ ಇದ್ದೇ ಇದೆ. ಆದರೂ ಮುಸ್ಲಿಂ ಐಕ್ಯತಾ ಚಳವಳಿಯಲ್ಲಿ ಪ್ರಚಂಡ ರಾಜಕೀಯ ಪರಿಣಾಮ ಗಂಭೀರವಾಗಿದೆ ಎಂಬ ಕಾರಣದಿಂದ ಈ ಐಕ್ಯತೆಯನ್ನು ಬೆಳೆಸುವ ಪ್ರಯತ್ನದಿಂದ ದೂರವಾಗಿರುವ ಒಬ್ಬ ವ್ಯಕ್ತಿಯನ್ನೂ ನಾನು ಕಂಡರಿಯೆ. ಖಾದಿ ಪೂರ್ಣ ಯಶಸ್ವಿಯಾಗಿ ಅದರ ರಾಜಕೀಯ ಪರಿಣಾಮ ಪ್ರಭಾವಶಾಲಿಯಾಗಬೇಕಾದರೆ ಅದಕ್ಕೆ ರಾಜಕೀಯದ, ರಾಜಕೀಯದಲ್ಲಿ ಭಾಗವಹಿಸಿದವರ, ಶ್ರೀಮಂತರ, ಬಡವರ, ಜಮೀನುದಾರರ, ರೈತರ ಎಲ್ಲರ ಪ್ರೋತ್ಸಾಹವೂ ಅತ್ಯಗತ್ಯ. ಆದ್ದರಿಂದಲೇ ಖಾದಿಯನ್ನು ರಾಜಕೀಯ ಗೊಂದಲದಿಂದ ದೂರವಿಡಲು ಸರ್ವಪ್ರಯತ್ನ ಮಾಡಲಾಗುತ್ತಿದೆ. ಇದು ದಂಗೆಯ ಚಿಹ್ನೆಯಲ್ಲ. ಇದು ಸ್ವಶಕ್ತಿಯ ಸ್ವಾಭಿಮಾನದ ಮತ್ತು ಧನಿಕ – ದರಿದ್ರ, ಬಂಡವಾಳಗಾರ – ಶ್ರಮಜೀವಿ ಎಂಬ ಭಿನ್ನತೆಗಳನ್ನು ತೊಡೆದುಹಾಕಿ ಉಭಯ ಗುಂಪುಗಳಲ್ಲಿಯೂ ಅನ್ಯೋನ್ಯತೆ ಬೆಳೆಸುವ ಪ್ರತೀಕವಾಗಿದೆ. ಆದ್ದರಿಂದ ಬರಲಿರುವ ಪ್ರದರ್ಶನಕ್ಕೆ, ಬೆಂಗಳೂರು ದಂಡಿನ ಪ್ರದೇಶದಲ್ಲಿ ನೆಲೆಸಿರುವ ಐರೋಪ್ಯರೂ ಸೇರಿ, ಎಲ್ಲ ಗುಂಪಿನ ಜನರೂ ಒಮ್ಮತದಿಂದ ಖಚಿತ ಸಹಾಯ ನೀಡುವರೆಂದು ನಾನು ಆಶಿಸುತ್ತಿದ್ದೇನೆ. ಅಧಿಕ ಸಂಖ್ಯೆಯ ದಂಡಿನ ಐರೋಪ್ಯರು ಇತರರೊಡನೆ ಒಂದುಗೂಡುವುದು ಸ್ವಾಗತಾರ್ಹ.

(ಯಂಗ್ ಇಂಡಿಯಾ : 30–6–1927)




# ನಾಡೋಜ ಪಾಟೀಲ ಪುಟ್ಟಪ್ಪ ಅವರಿಗೆ ಚಿತ್ರ ನಮನ




ಪಾಟೀಲ ಪುಟ್ಟಪ್ಪನವರು ಗಾಂಧಿ ಭವನಕ್ಕೆ ಬೇಟಿ ನೀಡಿದ ಸಂದರ್ಭದಲ್ಲಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗಾಂಧಿ ಭವನ ಅವರೊಂದಿಗಿರುವ ಚಿತ್ರ



ಪಾಟೀಲ ಪುಟ್ಟಪ್ಪ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು ಹಾಗೂ ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಮತ್ತಿತರ ಗಣ್ಯರೊಂದಿಗಿದ್ದ ಸಂದರ್ಭ



ಸರ್ವೋದಯ ದಿನಾಚರಣೆ ದಿ. 30.01.2020ರಂದು ಭಾಗಿಯಾದ ಪಾಟೀಲ ಪುಟ್ಟಪ್ಪ ಅವರೊಂದಿಗೆ, ಚೆನ್ನಮ್ಮ ಹಳ್ಳಿಕೇರಿ, ಶಂಕರ ಉತ್ತಾರ, ನಾಮದೇವ ಶೆಣೈ, ಜಗದೀಶ್ ಕೊಪ್ಪ, ಪುಟ್ಟಮ್ಮ ಹಾಗೂ ನಿಂತಿರುವವರಲ್ಲಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು ಇಂದಿರಾ ಕೃಷ್ಣಪ್ಪ, ತಿಪ್ಪನಗೌಡ, ಶಾಂತಿವ್ರತಾನಂದ ಸ್ವಾಮೀಜಿ ಮತ್ತಿತರ ಗಣ್ಯರು



ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ದಿ. 14.03.2020 ರಂದು ಗಾಂಧಿ ಭವನದ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ಪಾಟೀಲ ಪುಟ್ಟಪ್ಪ ಅವರ ಆರೋಗ್ಯ ವಿಚಾರಿಸಿದ ಸಂದರ್ಭ





**ಕನ್ನಡ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಲೋಕದ ದಿಗ್ಗಜರಾದ ಸುಧಾಕರ ಚತುರ್ವೇದಿ ಅವರು (ದಿ.27.02.2020) ರಂದು ಮತ್ತು ಎಸ್. ಶೆಟ್ಟರ್ ಅವರು (ದಿ.28.02.2020) ನಮ್ಮನ್ನಗಲಿದ್ದಾರೆ. ಇವರಿಬ್ಬರಿಗೂ ಗಾಂಧಿ ಭವನದ ಎಲ್ಲಾ ಸದಸ್ಯರು ಸಿಬ್ಬಂದಿ ವರ್ಗದವರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ್ದಾರೆ**

# ಮದ್ಯಪಾನದ ಪರಿಣಾಮಗಳು ಮತ್ತು ದುಷ್ಪರಿಣಾಮಗಳು :

ಡಾ. ಸಿ.ಆರ್. ಚಂದ್ರಶೇಖರ್

(ಕಳೆದ ಸಂಚಿಕೆಯಿಂದ ಮುಂದುವರೆದ ಭಾಗ)

## ಆಲ್ಕೋಹಾಲ್‌ನಿಂದಾಗುವ ರೋಗಗಳ ಪಟ್ಟಿ

- ಜೀರ್ಣಾಂಗಗಳು : ಹಾರ್ಟ್ ಬರ್ನ್ಸ್, ಅಸಿಡಿಟಿ, ಅಲ್ಸರ್, ಪೈಲ್ಸ್, ಅನ್ನನಾಳದ ಕ್ಯಾನ್ಸರ್
- ಲಿವರ್ : ಫ್ಯಾಟಿ ಲಿವರ್, ಹೆಪಟೈಟಿಸ್, ಸಿರ್ಹೋಸಿಸ್
- ಅಪೌಷ್ಟಿಕತೆ, ಅನೀಮಿಯಾ, ವಿಟಮಿನ್ ಕೊರತೆಗಳು
- ಪ್ಯಾಂಕ್ರಿಯಾಟೈಟಿಸ್
- ಹೈಪೋಗ್ಲೈಸೀಮಿಯಾ – ರಕ್ತದಲ್ಲಿ ಗ್ಲೂಕೋಸ್ ಕಡಿಮೆಯಾಗುವುದು, ಸಿಹಿಮೂತ್ರ ರೋಗವಿದ್ದರೆ ಅದು ಹತೋಟಿಗೆ ಬಾರದು
- ಅಧಿಕ ರಕ್ತದೊತ್ತಡ, ಹೃದಯಾಘಾತ, ಕಾರ್ಡಿಯೋಮಯೋಪತಿ
- ರೋಗ ನಿರೋಧಕ ಶಕ್ತಿ ಕುಗ್ಗುವುದು, ಪದೇ ಪದೇ ಸೋಂಕು ರೋಗಗಳು
- ಲೈಂಗಿಕ ದುರ್ಬಲತೆ, ಲೈಂಗಿಕ ಕಾಯಿಲೆಗಳು – ಏಡ್ಸ್
- ಮೂಳೆ ಸವೆತ – ಮುರಿಯುವುದು
- ಮಾನಸಿಕ ಮತ್ತು ನರಸಂಬಂಧೀ ರೋಗಗಳು

ಧೀರ್ಘಕಾಲದ, ಇತಿಮಿತಿ ಎಲ್ಲದ ಮದ್ಯಪಾನದಿಂದ ಉಂಟಾಗುವ ಮಾನಸಿಕ, ನರಸಂಬಂಧೀ ರೋಗಗಳು

## ಖಿನ್ನತೆ ಕಾಯಿಲೆ

ಮಾನಸಿಕ ಖಿನ್ನತೆಯಿಂದಾಗಿ ವ್ಯಕ್ತಿ ಕುಡಿಯತೊಡಗುತ್ತಾನೆ. ಸದಾ ಆಲ್ಕೋಹಾಲ್ ಸೇವನೆಯಿಂದ, ಮೆದುಳಿನಲ್ಲಿ ಡೋಪಮಿನ್, ಸೆರೋಟೋನಿನ್ ಕಡಿಮೆಯಾಗಿ ಖಿನ್ನತೆ ಕಾಯಿಲೆ ಕಾಣಿಸಿಕೊಳ್ಳಬಹುದು. ಆಲ್ಕೋಹಾಲ್ ಸೇವನೆಯಿಂದುಂಟಾದ ಆರ್ಥಿಕ, ಆರೋಗ್ಯ, ಕೌಟುಂಬಿಕ, ಔದ್ಯೋಗಿಕ, ಸಾಮಾಜಿಕ ಸಮಸ್ಯೆಗಳಿಂದಾಗಿ ಅಸಹಾಯಕತೆ, ನಿರಾಶೆ, ನಿದ್ರಾತೊಂದರೆ, ಆಹಾರ ಸೇವನೆಯಲ್ಲಿ ತೊಂದರೆ, ಆತ್ಮಹತ್ಯಾ ಆಲೋಚನೆಗಳು, ಪ್ರಯತ್ನಗಳು ಕಂಡುಬರುತ್ತವೆ.

1999ರಲ್ಲಿ ಬೆಂಗಳೂರಿನಲ್ಲಿ 2600 ಆತ್ಮಹತ್ಯಾ ಪ್ರಕರಣಗಳ ಬಗ್ಗೆ ಅಧ್ಯಯನವನ್ನು ಮಾಡಲಾಯಿತು. ಆತ್ಮಹತ್ಯೆಯ ಮೂಲಕ ಸತ್ತ ಗಂಡಸರಲ್ಲಿ ಶೇಕಡಾ 14ರಷ್ಟು ಜನ ವಿಪರೀತ ಕುಡಿಯುತ್ತಿದ್ದು ಕುಡಿತವು ಆತ್ಮಹತ್ಯೆಗೆ ಪ್ರೇರಣೆ ನೀಡಿತ್ತು. ಹಾಗೆಯೇ ಆತ್ಮಹತ್ಯೆಗೆ ಪ್ರಯತ್ನಪಟ್ಟ 1500 ವ್ಯಕ್ತಿಗಳಲ್ಲಿ ಶೇಕಡ 24ರಷ್ಟು ಜನ ಹೆಚ್ಚು ಕುಡಿಯುವವರಾಗಿದ್ದರು.

## ಆತಂಕ, ಅತಿಭಯ

ಆತಂಕ ಮನೋಬೇನೆಯುಳ್ಳವರು, ಆತಂಕದ ಹತೋಟಿ ಮಾಡಲು ಆಲ್ಕೋಹಾಲ್ ಶರಣಾಗುತ್ತಾರೆ. ಕುಡಿಯುವವರಲ್ಲಿ ಶೇಕಡಾ 10 ರಿಂದ 30ರಷ್ಟು ಮಂದಿಗೆ ಹಠಾತ್ ಅತಿಭಯದ ಕಾಯಿಲೆ ಇರುವುದು (Panic disorder) ಕಂಡುಬರುತ್ತದೆ.

## ಮರೆವಿನ ಕಾಯಿಲೆ

ಮದ್ಯಪಾನಿಗಳು ಮರೆಗುಳಿಗಳಾಗುತ್ತಾರೆ. ಇತೀಚಿನ ಘಟನೆಗಳ ನೆನಪು ಅವರಿಗಿರುವುದಿಲ್ಲ. ಹಿಂದಿನ ದಿನ ನೀವು ಆತನನ್ನು ಭೇಟಿ ಮಾಡಿರುತ್ತೀರಿ. ಹರಟೆ ಹೊಡೆದಿರುತ್ತೀರಿ. ಆ ಸಮಯದಲ್ಲಿ ಆತ ಕುಡಿದ ಅಮಲಿನಲ್ಲಿರಲಿಲ್ಲ. ಈ ದಿನ ಮತ್ತೆ ಭೇಟಿಯಾದರೆ. 'ಏನಯ್ಯ ಬಹಳ ಅಪರೂಪವಾಗಿಬಿಟ್ಟೆ, ನಿನ್ನನ್ನು ನೋಡಿ ಬಹಳ ದಿವಸಗಳಾಗಿ ಹೋಯಿತಲ್ಲಯ್ಯ' ಎಂದು ನಿಮ್ಮನ್ನು ಆತ ಸ್ವಾಗತಿಸಬಹುದು! ನಡೆದ ಮಾತುಕತೆಗಳು, ಘಟನೆಗಳು ನಡೆಸಿದ ವ್ಯವಹಾರಗಳನ್ನು ನೆನಪಿನಲ್ಲಿಡುವುದು ಮದ್ಯಪಾನಿಗಳಿಗೆ ಕಷ್ಟವಾಗುತ್ತದೆ.

## ಸಂಶಯ ಪೀಡಿತ

ಮದ್ಯಪಾನಿಗಳು ಇತರರನ್ನು ನಂಬುವುದಿಲ್ಲ! ಎಲ್ಲರ ಮೇಲೆ ಅನುಮಾನ, ಕೈ ಹಿಡಿದ ಹೆಂಡತಿಯ ಗುಣ ನಡವಳಿಕೆಯ ಮೇಲೆ ಸಲ್ಲದ ಸಂಶಯ, 'ನಾನಿಲ್ಲದಿದ್ದಾಗ ಯಾವ ಗಂಡಸಿನ ಜೊತೆ ಮಾತಾಡಿದೆ ನೀನು? ಯಾರ ಜೊತೆಯಲ್ಲಿ ನಿನ್ನ ಸರಸ ನಡೆಯುತ್ತಿದೆ ಹೇಳು. ಬಾಗಿಲಲ್ಲಿ ನಿಂತು, ಹೋಗಿ ಬರುವ ಗಂಡಸರನ್ನು ಸಂಭೋಗಕ್ಕೆ ಕರೆಯುತ್ತಿಯಾ, ನೀನೊಬ್ಬಳು ಸೂಳೆ' ಎಂದು ಬೈಯುತ್ತಾ ಹೊಡೆದು ಹಿಂಸಿಸಬಹುದು ಯಾರಾದರೂ ಆ ಸಾಧ್ವಿಯ ಬಗ್ಗೆ ಒಳ್ಳೆಯ ಮಾತಾಡಿದರೆ, ಅವಳು ಅಂಥವಳಲ್ಲ ಎಂದರೆ, ಅವರಿಗೂ ಆಕೆಗೂ ಸಂಬಂಧ ಕಟ್ಟುತ್ತಾನೆ.!

(ಮದ್ಯಪಾನ ಸಂಯಮ ಕೃತಿಯಿಂದ ಆಯ್ದ ಭಾಗ)

ಮುಂದುವರಿಯುವುದು ....




## ಗಾಂಧಿ

– ದ.ರಾ. ಬೇಂದ್ರೆ

ಜಯಜಯ ಗಾಂಧಿ ಮೋಹನ ರಾಷ್ಟ್ರಮೋಹನ
ಸತ್ಯ ಶರಣ ಸ್ವಾತಂತ್ರ ಧೂತ
ಜಯ ಜಯ
ಜಾತಾ ನಿರ್ಭಯ

ರಾಷ್ಟ್ರಹವನ ರಾಷ್ಟ್ರಹವನ
ಕರ್ನಾಟದೀಶದಾಜನ
ಕನ್ನಡಿಸಿತು ಮನ
ಹಾಡಿತು ಕವಿಗಣ

ನೆನೆಸೇವು ನಿಮ್ಮ ಆ ನಗೆ
ಒಳಗೆ ಇಲ್ಲ ಧಗೆ
ಬರೀ ಬೆಳಕು ಬರೀ ಬೆಳಕು
ಛಲ ಬಲ ಇದ್ದ ಧೀರ
ಎಂತಾ ಶೂರ ಎಂತಾ ಶೂರ

ಸ್ವಾತಂತ್ರ್ಯಜೇತ ಜಯ ಜಯ
ಹುಟ್ಟಾ ನಿರ್ಭಯ
ದೇವ ಹವನ ದೇವ ಹವನ
ಕವಿ ಹೃದಯ ದೀಪ್ತ ಭಾವನ
ಕರುಣಾ ಕವನಾ ಸ್ಮರಣಾ ಕವನಾ
ಜಯಜಯ ಗಾಂಧಿ ಮೋಹನ ರಾಷ್ಟ್ರಮೋಹನ

## ಲಾವಣಿ

– ಬಾಲಚಂದ್ರ ಘಾಣೇಕರ

ನಡೆಯಲು ಸರಕಾರದ ಅತ್ಯಾಚಾರದ ಸುದ್ದಿ
ತಡವೇಕೆ ಇನ್ನೆಂದು ಮಹಿಳೆಯರು
ಒಡೆ ಒಡೆದರು ಸರಕಾರಿ ಮನೆ ಮೊಹರು
ಲಾಠಿ ಒಡೆತಕ್ಕೆ ಪ್ರತಿಕೊಟ್ಟು ಕಾದಿದರು
ಮಾಣುದೇವಿಯಂಥ ನೂರಾರು ಸ್ತ್ರೀಯರು
ಪ್ರಾಣವ ಕೊಡಲಿಕ್ಕೆ ಸಿದ್ದರಾಗಿಹರು
ಮಾತರಂ, ವಂದೇ ಮಾತರಂ

ರೊಚ್ಚಿನಿಂದ ಸರಕಾರಿ ಪೋಲೀಸರೆದ್ದು
ನುಚ್ಚು ಮಾಡುತ ಮಾಣುದೇವಿಯನ್ನು
ಸಲೆ ಎಚ್ಚರ ತಪ್ಪುವ ಹೊಡೆತವನ್ನು
ತಮ್ಮ ಸ್ವೇಚ್ಛೆಯಿಂದಲಿ ಅತ್ಯಾಚಾರವನ್ನು
ಸಿಟ್ಟಿನಿಂದ ಗೈದರು ಕೆಚ್ಚದೆ ವೀರರ
ಬೆಚ್ಚಿಸಬೇಕೆಂದು ಹೊಂಚು ಹಾಕಿದರು
ಮಾತರಂ, ವಂದೇ ಮಾತರಂ

ನಿರ್ದೋಷಿ ಜನರನ್ನು ಸೆರೆಮನೆ ಸೇರಿಸಿ
ಕ್ರೂರಾಟ ನಡೆಸಿ ಹಿಚಕಡದಿ
ಸಣ್ಣಪೋರಗಳಿಗೆ ಯಮನಂತೆ ಕಾಡಿ
ಏನೂ ಕಾರಣವಿಲ್ಲದೆ ಕೈದು ಮಾಡಿ
ಪರದೇಶಿ ಪಟೇಲರ ಮೈತುಂಬಾ
ಬೆತ್ತದ ಸುರಿಮಳೆ ಗೆರೆಯುತ್ತಾ ಕಾಡಿದರಯ್ಯೋ
ಮಾತರಂ, ವಂದೇ ಮಾತರಂ

ಎಷ್ಟೇ ದಬ್ಬಾಳಿಕೆ ನಡೆಸಿದರೇನಾಯ್ತು
ದುಷ್ಟ ಆಳರಸರಿಗಿದು ಸಹಿಸದಾಯ್ತು
ಸತ್ಯದ ಸಮರವು ತಡೆಯದಾಯ್ತು
ತಮಗಿಷ್ಟ ಬಂದಂತೆಯೇ ನಡೆಯದಾಯ್ತು ಶ್ರೇಷ್ಟ
ಒಕ್ಕಲಿಗರ ಭತ್ತವ ಕೊಯ್ಯುವ
ಬಲುಕೆಟ್ಟ ಬೆದರಿಕೆ ಹಾಕಿದರಯ್ಯೋ
ಮಾತರಂ, ವಂದೇ ಮಾತರಂ



## ದೇವಾಲಯದಲ್ಲಿ ಗಾಂಧಿ

ಬಹುತೇಕ ದೇವಾಲಯಗಳಲ್ಲಿ ಕಾಣುವ ಕಂಬಗಳ ಮೇಲೆ ಹಲವು ದೇವರುಗಳ ಕೆತ್ತನೆಯನ್ನು ಕಾಣಬಹುದು. ಆ ಜಾಗಗಳಲ್ಲಿ ಈಗೀಗ, ದೇಶಕ್ಕೆ ಮಹತ್ತರ ಕೊಡುಗೆ ನೀಡಿದ ಹಲವು ಮಹಾಪುರುಷರು ಸ್ಥಾನ ಪಡೆಯುತ್ತಿದ್ದಾರೆ. ಅದಕ್ಕೆ ಸ್ಪಷ್ಟ ಉದಾಹರಣೆ ಕಂಭದ ಮೇಲೆ "ಮಹಾತ್ಮ ಗಾಂಧೀಜಿ ಅವರ ಕೆತ್ತನೆ". ಗಾಂಧೀಜಿ ಅವರ ಪ್ರತಿಕೃತಿಯ ಕೆತ್ತನೆಯು ದೇಗುಲದ ಕಂಭದಲ್ಲಿ ಕೆತ್ತಿದರೆ ದೇವಾಲಯಕ್ಕೂ ಸಾಮಾಜಿಕ ಪರಿವರ್ತನೆಯಲ್ಲಿ ಹೊಸ ಸ್ವರೂಪ ನೀಡಿದಂತಾಗುತ್ತದೆ. ಅಷ್ಟಕ್ಕೂ ಈ ಕೆತ್ತನೆ ಇರುವುದು ಆಂಧ್ರಪ್ರದೇಶದ ಮಹಾನಂದದಲ್ಲಿ ಇರುವ ಮಹಾನಂದೀಶ್ವರ ದೇವಾಲಯದಲ್ಲಿ. ಇಲ್ಲಿ ಗಾಂಧೀಜಿ ಅವರ ಕೆತ್ತನೆಯ ಎರಡು ಬದಿಯಲ್ಲಿ ಬಾವುಟದ ಕೆತ್ತನೆ ಇರುವುದು ವಿಶೇಷ

– ಶ್ರೀನಿವಾಸ ಮೂರ್ತಿ ಎನ್.ಎಸ್., : ಕೃಪೆ : ಸುಧಾ, ಸೆಪ್ಟೆಂಬರ್ 2020

# ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಇಂದಿರಾ ಕೃಷ್ಣಪ್ಪ,


(ಹಿಂದಿನ ಸಂಚಿಕೆಯಿಂದ ಮುಂದುವರೆದ ಭಾಗ)

## ಜೊಹಾರ ಅನ್ಸಾರಿ

ದೆಹಲಿಯ ಪ್ರತಿಷ್ಠಿತ ಮುಸ್ಲಿಂ ಸಮುದಾಯದ ಕುಟುಂಬ ಬೇಗಂ ಅನ್ಸಾರಿ ಅವರದಾಗಿತ್ತು. ಬೇಗಂ ಅನ್ಸಾರಿ ಅವರು ಅಧ್ಯಯನ, ಚರ್ಚೆಯಲ್ಲಿ ಅತೀವ ಆಸಕ್ತಿವುಳ್ಳವರೂ ಮತ್ತು ಪಾರ್ಸಿ, ಉರ್ದು, ಅರಬ್ಬಿ ಭಾಷೆಯಲ್ಲಿ ಪಾಂಡಿತ್ಯವುಳ್ಳವರೂ ಆಗಿದ್ದರು. ಮಹಾತ್ಮಾಜಿ ಅವರು, ಡಾ. ಅನ್ಸಾರಿ ಮತ್ತು ಬೇಗಂ ಅನ್ಸಾರಿಯವರೊಂದಿಗೆ ದೇಶದ ಸ್ವಾತಂತ್ರ್ಯ ಬಗ್ಗೆ ಚರ್ಚಿಸುತ್ತಿದ್ದರು. ಗಾಂಧಿ ಅವರು ದೆಹಲಿಯ ವಾಸ್ತವ್ಯದ ಸಂದರ್ಭದಲ್ಲಿ ಹಲವಾರು ಬಾರಿ ಇವರನ್ನು ಭೇಟಿಯಾಗಿದ್ದರು. ಮತ್ತು ಅವರ "ಅನ್ಸಾರಿ ಧರ್ಮಶಾಲ" ಬಗ್ಗೆ 1931ರ ಮಾರ್ಚ್ 29ರಲ್ಲಿ ನವಜೀವನ (ಗುಜರಾತಿ) ಪತ್ರಿಕೆಯಲ್ಲಿ ಬರೆದಿದ್ದರು. ಈ ಕುಟುಂಬದಲ್ಲಿ ಜನಿಸಿದ ಜೊಹರಾ ಅನ್ಸಾರಿ ಗಾಂಧೀಜಿ ಅವರನ್ನು ಬಾಲ್ಯದಿಂದಲೇ ಅರಿತಿದ್ದಳು. ಅವರೊಂದಿಗೆ ಪ್ರೀತಿಯಿಂದ ಪತ್ರ ವಿನಿಮಯ ಮಾಡುತ್ತಿದ್ದಳು. 1932ನೇ ಅಕ್ಟೋಬರ್ 3ರಂದು ಗಾಂಧೀಜಿ ಆಕೆಗೆ ಬರೆದ ಪತ್ರದಲ್ಲಿ "ಪ್ರೀತಿಯ ಮಗಳೇ ಜೊಹರಾ 2 ಪತ್ರಗಳು ತಲುಪಿದವು. ನಾವೆಲ್ಲರೂ ಹಿಂದೂ – ಮುಸ್ಲಿಂ ಒಗ್ಗಟ್ಟಾಗಿ ದುಡಿಯೋಣ. ಅವರ ಒಗ್ಗಟ್ಟೇ ನನ್ನ ಗುರಿ. ನೀನು ನನ್ನ ಗುರು ಇದನ್ನು ಒಪ್ಪಿಕೋ. ನಿನ್ನ ಪತ್ರಗಳಿಂದ ಸ್ವಲ್ಪ ಮಟ್ಟಿಗೆ ನನ್ನ ವಿದ್ಯಾಭ್ಯಾಸ ಆಗಿ ಬಿಡುತ್ತದೆ. ನನಗೆ ಉರ್ದುವಿನಲ್ಲಿ ಬರೆಯುವವರು ವಿರಳ. ನಿನಗೆ ನನ್ನ ಆಶೀರ್ವಾದಗಳು" ಎಂದಿದ್ದರು. ಈಕೆ ತಾಯಿಯೊಂದಿಗೆ ಕಾಂಗ್ರೆಸ್ ಸಭೆಗಳಿಗೆ ಹೋಗುತ್ತಿದ್ದಳು. ದಾರುಸಲಾಂನಲ್ಲಿ ತಂಗಿರುತ್ತಿದ್ದ ಗಾಂಧೀಜಿ ಅವರನ್ನು ಭೇಟಿಯಾಗಲು ತೆರಳಿದಾಗ, ಅವರ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುತ್ತಿದ್ದಳು ಮತ್ತು ಅಡುಗೆ ತಯಾರಿಕೆಯಲ್ಲಿ ಸಹಕಾರ ನೀಡುತ್ತಿದ್ದಳು. ಗಾಂಧೀಜಿಗೆ ಬರೆದ ಪತ್ರಗಳಲ್ಲಿ ಸತ್ಯಾಗ್ರಹಿಗಳೊಂದಿಗೆ ಜೈಲಿಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಳು. ಪರೋಕ್ಷ ದುಡಿಮೆಯಿಂದ ಗಾಂಧೀಜಿ ಅವರ ನಿಕಟವರ್ತಿಯಾಗಿದ್ದ, ಜೊಹರಾ 1988ರ ಜುಲೈ 28ರಲ್ಲಿ ಇಂಗ್ಲೆಂಡ್‌ನಲ್ಲಿ ನಿಧನರಾದರು.

## ಫಾತಿಮಾ ಇಸ್ಮಾಯಿಲ್

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ "ಸೋಬಾನಿ" ಕುಟುಂಬದಲ್ಲಿ 1903ರ ಫೆಬ್ರವರಿಯಲ್ಲಿ ಜನಿಸಿದ ಫಾತಿಮಾ ಅವರ ತಂದೆ ಹಾಜಿ ಯೂಸುಫ್ ಸೋಬಾನಿ ಮತ್ತು ತಾಯಿ ಅವರು ಖಿಲಾಫತ್ ಚಳುವಳಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ಈ ಆಂದೋಲನಕ್ಕೆ 500 ಮಹಿಳೆಯರನ್ನು ಒಗ್ಗೂಡಿಸಿದ ಇವರ ತಾಯಿ, ಗಾಂಧಿ ಅವರಿಗೆ ಸ್ತುತಿ ಪತ್ರವನ್ನು ಬರೆದಿದ್ದರು. ಫಾತಿಮಾ ವಿಯೆನ್ನಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆದಿದ್ದರು. ಹೊಸ ಸಂಸ್ಕೃತಿ, ವಿಚಾರಗಳಿಗೆ ಮುಕ್ತವಾಗಿದ್ದ ಫಾತಿಮಾ ಭಾರತ ಸ್ವದೇಶಿ ಆಂದೋಲನದಲ್ಲಿ ಸಕ್ರಿಯರಾಗಿದ್ದರು. ರೈಲುಬೋಗಿಗಳಲ್ಲಿ, ದೇಶಿ ವಸ್ತುಗಳನ್ನು ಕೊಂಡ್ಯೊಯ್ದು ಅನೇಕ ರಾಜ್ಯಗಳಲ್ಲಿ ಸ್ವದೇಶಿ ಆಂದೋಲನದ ಪ್ರಚಾರ ಮಾಡಿದರು. 1934ರಲ್ಲಿ ಸ್ಥಾಪನೆಗೊಂಡ "ಅಂಜುಮಾನ್ ಇಸ್‌ಲಾಹೆ ನಿಸ್ಸಾ" ಮಹಿಳಾ ಸುಧಾರಣ ಸಮಿತಿ ಮತ್ತು 1935ರಲ್ಲಿ ಆರಂಭವಾದ ಇಂಡಿಯಾ ವುಮೆನ್ಸ್ ಕಾನ್ಫರೆನ್ಸ್ ಕಾರ್ಯದರ್ಶಿಯಾಗಿದ್ದರು. 1940ರಲ್ಲಿ "ಬಾಂಬೇ ಯಂಗ್ ವುಮೆನ್ಸ್ ಕೌನ್ಸಿಲ್"ನ ಕಾರ್ಮಿಕ ಉಪಸಮಿತಿ ಉಪಾಧ್ಯಕ್ಷರಾಗಿದ್ದಾಗ, ಕಂಪನಿಗಳ ಬಳಿ, ಸಮಾಜ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿದರು. ಸಿಮ್ಲಾ ಗುಡ್ಡಗಾಡಿನಲ್ಲಿ ಕೈಮಗ್ಗ ಮತ್ತು ಹಿಟ್ಟಿನ ಗಿರಣಿಗಳ ಸ್ಥಾಪನೆಗೆ ಕಾರಣಕರ್ತರಾದರು. ಖಾದಿ ಮತ್ತು ಗ್ರಾಮೋದ್ಯೋಗ, ಹಿಂದೂ ಮುಸ್ಲಿಂ ಏಕತೆಗಾಗಿ ದೇಶ ವಿದೇಶಗಳಲ್ಲಿ ಸಂಚರಿಸಿ, ಆಂದೋಲನಕ್ಕೆ ಬೆಂಬಲ ಒದಗಿಸಲು ಕಾರಣರಾದರು. 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿ, ಬಂಧನದಿಂದ ಪಾರಾಗಲು ಭೂಗತರಾಗಿದ್ದುಕೊಂಡು ಕಾರ್ಯನಿರ್ವಹಿಸಿದರು. ಮಗಳು ಪೋಲಿಯೋ ರೋಗಕ್ಕೆ ತುತ್ತಾಗಿ ಒಂದು ಕಾಲನ್ನು ಕಳೆದುಕೊಂಡಾಗ ಅಪಾರವಾಗಿ ನೊಂದ ಈಕೆ ವಿಕಲಚೇತನ ಮಕ್ಕಳಿಗಾಗಿ ಆಸ್ಪತ್ರೆಯನ್ನು ತೆರೆದರು. ಅಲ್ಲಿ ಅವಿಶ್ರಾಂತವಾಗಿ ದುಡಿದರು. ಮಕ್ಕಳ ಸೇವೆಗಾಗಿ ಅವರ ಕಾರ್ಯವನ್ನು ಗಮನಿಸಿ ಸರ್ಕಾರ ರಾಜ್ಯಸಭಾ ಸದಸ್ಯರಾಗಿ ನಾಮ ನಿರ್ದೇಶನ ಮಾಡಿತ್ತು. ಇವರ 'ಜೀವನ ಚರಿತ್ರೆ' ಪ್ಯಾರಿಸ್‌ನಲ್ಲಿ ಬಿಡುಗಡೆಯಾಗಿತ್ತು.



ಜಗತ್ತನ್ನು ಕಾಡುತ್ತಿರುವುದು, ಕೇವಲ ಹೊಟ್ಟೆಯ ಹಸಿವಲ್ಲ; ಪ್ರೀತಿಯ ಕೊರತೆ, ಕರುಣೆ ಪ್ರೋತ್ಸಾಹದ ಕೊರತೆ ಎಲ್ಲಕ್ಕಿಂದ ಹೆಚ್ಚು ಕಾಡುತ್ತಿದೆ.

– ಮದರ್ ತೆರೆಸಾ




# ಆಯ್ಕೆಯ ಬಡತನ ಅಥವಾ ಸರಳ ಜೀವನ

– ಡಾ. ಎನ್. ಜಗದೀಶ್ ಕೊಪ್ಪ

(ಗಾಂಧೀಜಿ ಅವರ ಸ್ವಗತ ಕೃತಿಯಿಂದ ಮುಂದುವರಿದ ಭಾಗ)

ಏನೂ ಇಲ್ಲದ ಸಂತೋಷವನ್ನು ನಿಮಗೆ ವಿವರಿಸುವುದಾದರೆ, ನನಗಾಗಿ ಏನನ್ನಾದರೂ ಸಂಗ್ರಹಿಸಿ ಇಟ್ಟುಕೊಂಡರೆ ಅದನ್ನು ವಿಶ್ವದ ನಿಯಮಕ್ಕೆ ವಿರುದ್ಧವಾಗಿ ನಾನು ರಕ್ಷಣೆ ಮಾಡುವುದರ ಜೊತೆಗೆ ನನ್ನದೆಂದು ಪ್ರತಿಪಾದಿಸಬೇಕಿತ್ತು. ಈ ಜಗತ್ತಿನಲ್ಲಿ ಬಹಳ ಮಂದಿಯ ಬಳಿ ಅವರು ಬಯಸಿದ್ದರೂ ಸಹ ಅವರ ಬಳಿ ಏನೂ ಇಲ್ಲವೆಂಬ ಅರಿವು ಸಹ ನನಗಿತ್ತು. ಇದರ ಜೊತೆ ಜೊತೆಯಲ್ಲಿ ನನ್ನ ಆಸ್ತಿಗೆ ರಕ್ಷಣೆ ಸಹ ಬೇಕಾಗಿರುತ್ತಿತ್ತು. ಇದೇ ಸಂದರ್ಭದಲ್ಲಿ ಹಸಿವು, ಕ್ಷಾಮ ಇವುಗಳಿಂದ ತತ್ತರಿಸುತ್ತಿದ್ದ ಜನತೆಯ ಬವಣೆಗಳು ನನ್ನೊಳಗೆ ಜೀವಂತವಾಗಿದ್ದವು. ಅಂತಹ ಕ್ಷಣದಲ್ಲಿ ನಾನು ನನಗಾಗಿ ಕೂಡಿಡುವುದು ಅಪರಾಧ ಎಂಬ ಮನೋಭಾವ ನನ್ನ ಮನಸ್ಸಿನಲ್ಲಿ ಬೆಳೆಯತೊಡಗಿತು. ನಾನು ತೊರೆಯುವುವ ವಸ್ತುಗಳು ಇಲ್ಲದವರ ಪಾಲಿಗೆ ಅವಶ್ಯ ಎನಿಸಿದರೆ ತೆಗೆದುಕೊಂಡು ಹೋಗಲಿ ಎಂದು ನಿರ್ಧರಿಸಿದೆ. ಆದರೆ, ಅವರ ಬೇಡಿಕೆಗಳು' ಯಾವಾಗಲೂ ನನ್ನ ಬೇಡಿಕೆಗಿಂತ ಹೆಚ್ಚಿನ ಮಟ್ಟದ್ದಾಗಿರಬಾರದು ಎಂಬ ನಿಯಮವನ್ನು ಸಹ ಹಾಕಿಕೊಂಡೆ.

ನಂತರ ದಿನಗಳಲ್ಲಿ ನನಗಾಗಿ ಕೂಡಿಡುವುದು ಅಪರಾಧ ಎಂಬ ಭಾವನೆ ಬೆಳೆದಂತೆ ನನ್ನ ದೈನಂದಿನ ಜೀವನಕ್ಕೆ ಅವಶ್ಯಕವಾದ ವಸ್ತುಗಳನ್ನು ಹೊರತು ಪಡಿಸಿ ಏನನ್ನೂ ನಾನು ರಕ್ಷಣೆ ಮಾಡಲಿಲ್ಲ. ನಾವೆಲ್ಲರೂ ಇಂತಹ ವಿಷಯಗಳನ್ನು ಮಾತನಾಡುವುದು ಸುಲಭ ಆದರೆ, ಪ್ರಾಯೋಗಿಕವಾಗಿ ಅದು ತುಂಬಾ ಕಷ್ಟಕರವಾದುದು. ಆದರೆ, ಪ್ರಯತ್ನದ ಮೂಲಕ ಏನನ್ನು ಇಟ್ಟುಕೊಳ್ಳಬಹುದು ಎಂದು ಕೇಳಿದರೆ, ನನ್ನ ಬಳಿ ಏನೂ ಇಲ್ಲ ಎಂಬ ನಿರಾಳ ಭಾವನೆಯನ್ನು ಮಾತ್ರ ಎಂಬುದು ನನ್ನ ಉತ್ತರವಾಗಿರುತ್ತದೆ. ಇದನ್ನು ಮತ್ತೊಂದು ಶಬ್ದದಲ್ಲಿ ಹೇಳುವುದಾದರೆ, ಅಂತಹ ದೃಢ ನಿರ್ಧಾರಕ್ಕೆ ನಾವು ಶರಣಾಗುವುದು ಅನಿವಾರ್ಯ.

ನೀವು ನನ್ನ ಕುರಿತಾಗಿ 'ಮೈ ತುಂಬಾ ಇಷ್ಟೊಂದು ಹೊದಿಕೆಯನ್ನು ಹೊದ್ದು ದೇಹವನ್ನು ರಕ್ಷಣೆ ಮಾಡಿಕೊಂಡಿರುವ ನೀವು ಆಯ್ಕೆಯ ಬಡತನ ಕುರಿತಾಗಿ ಮಾತನಾಡುತ್ತಿರುವುದು ದ್ವಂದ್ವವಲ್ಲವೆ? ಎಂದು ಕೇಳಬಹುದು. ಆದರೆ, ನೀವು ನಾನು ಮಾತನಾಡುತ್ತಿರುವ ವಿಷಯದ ಗಹನತೆಯನ್ನು ಅರ್ಥಮಾಡಿಕೊಂಡಿದ್ದೀರಿ ಎಂದು ಭಾವಿಸಿದ್ದೀನಿ. ನಾನು ಮಾತನಾಡುತ್ತಿರುವ ವಿಷಯದ ಹಿಂದೆ ಸ್ಪೂರ್ತಿ ಅಡಗಿದೆ. ನಿಮ್ಮ ಶರೀರವನ್ನು ಬಿಸಿಲು, ಮಳೆ, ಚಳಿ, ಗಾಳಿಯಿಂದ ರಕ್ಷಿಸಿಕೊಳ್ಳಬೇಕಾದರೆ, ಅದಕ್ಕೆ ವಸ್ತ್ರಗಳಿಂದ ರಕ್ಷಣೆ ಬೇಕು ನಿಜ. ಆದರೆ. ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಮಾತ್ರ ಬೇಕು. ನಿಮ್ಮ ವಸತಿಗೆ ಮನೆ ಬೇಕು, ಆದರೆ, ಹಲವು ಕೋಣೆಗಳ, ಹಲವು ಅಂತಸ್ತಿನ ಮನೆ ಅನಾವಶ್ಯಕ. ಇದೇ ಮಾತನ್ನು ನಾವು ಉಪಯೋಗಿಸುವ ಆಹಾರ ಕುರಿತಾಗಿಯೂ ಹೇಳಬಹುದು.

ನೀವು ಮತ್ತು ನಾನು ಈ ಜಗತ್ತಿನ ವರ್ತಮಾನದ ನಾಗರೀಕತೆಯನ್ನು ಮತ್ತು ರಾಜ್ಯಗಳನ್ನು ಅರ್ಥಮಾಡಿಕೊಂಡಿದ್ದೇವೆ. ನಾನು ನಿಮಗೆ ಒಂದು ಕಲ್ಯಾಣ ರಾಜ್ಯದ ಸಂತೋಷ ಹೇಗಿರಬೇಕೆಂದು ವಿವರಿಸುತ್ತೇನೆ. ಈಗಿನ ಸಂಸ್ಕೃತಿ ಅಥವಾ ನಾಗರೀಕತೆಯು ನಿಮ್ಮೆಲ್ಲರ ಬಹು ಬೇಡಿಕೆಗಳನ್ನು ಒಳಗೊಂಡಿರುವ ಪ್ರಪಂಚವಾಗಿದೆ. ನಿಮ್ಮಲ್ಲಿ ಒಂದು ಕೊಠಡಿಯಿದ್ದರೆ, ನೀವು ಎರಡು ಅಥವಾ ಮೂರು ಕೊಠಡಿಗಳಿಗೆ ಆಸೆ ಪಡುತ್ತೀರಿ. ಅದೇ ರೀತಿ ನಿಮ್ಮಲ್ಲಿರುವ ಪೀಠೋಪಕರಣಗಳಿಗಿಂತ ಹೆಚ್ಚಿನದಕ್ಕೆ ಆಸೆ ಪಡುತ್ತೀರಿ, ನಿಮ್ಮ ಬಳಿ ಆಸ್ತಿ ಅಥವಾ ಹಣ ಹೆಚ್ಚು ಹೆಚ್ಚು ಶೇಖರವಾದಷ್ಟು ನೀವು ಸಂತೋಷಪಡುತ್ತೀರಿ ಜೊತೆಗೆ ನಾನು ಅದರ ಪ್ರತಿನಿಧಿ ಎಂಬ ಹೆಮ್ಮೆಯು ನಿಮ್ಮದಾಗಿರುತ್ತದೆ. ಆದರೆ, ಇನ್ನೊಂದು ರೀತಿಯಲ್ಲಿ ನಾನು ಅರ್ಥಮಾಡಿಕೊಂಡಿರುವ ನಾಗರೀಕತೆಯನ್ನು ಅಥವಾ ಜಗತ್ತನ್ನು ನಿಮ್ಮ ಮುಂದೆ ಇಡಲು ಬಯಸುತ್ತೇನೆ. ನಿಮ್ಮ ಬೇಡಿಕೆಗಳು ಕಡಿಮೆ ಇದ್ದಷ್ಟು ನೀವು ಸಂತೃಪ್ತರಾಗಿ ಇರಲು ಸಾಧ್ಯ. ಇದು ಕೇವಲ ಸಂತೋಷಕ್ಕಾಗಿ ಮಾತ್ರವಲ್ಲ, ಆತ್ಮತೃಪ್ತಿಗಾಗಿ ಮತ್ತು ಸಮಾಜದ ಇತರರ ಸೇವೆಯ ದೃಷ್ಟಿಯಿಂದ ಒಳ್ಳೆಯದು. ನಿಮ್ಮ ಮಿತವಾದ ಹಾಗೂ ಸರಳವಾದ ಜೀವನದಿಂದ ದೇಹ, ಮನಸ್ಸು, ಮತ್ತು ಆತ್ಮಕ್ಕೆ ಶಾಂತಿ, ಹಾಗೂ ನೆಮ್ಮದಿ ದೊರೆಯುತ್ತದೆ.

ಮುಂದುವರೆಯುವುದು...

# ಮದರ್ ತೆರೇಸಾ

ಡಾ. ರಾಮಲಿಂಗೇಶ್ವರ (ಸಿಸಿರಾ)

ಮಾನವೀಯತೆಯ ಸಾಕಾರರೂಪಿ ಮದರ್ ತೆರೇಸಾ ಅವರು ಬಡವರ, ರೋಗಿಗಳ, ಅನಾಥರ ಮತ್ತು ಮರಣ ಸಂಕಟದಲ್ಲಿರುವವರ ಸೇವೆಯಲ್ಲಿ ತೊಡಗಿಸಿ ಕೊಂಡವರಾಗಿದ್ದಾರೆ. ಅವರ ಸೇವಾ ಜೀವನವನ್ನು ಪರಿಗಣಿಸಿ ಇವರಿಗೆ ವಿಶ್ವದ ಅತ್ಯುನ್ನತ ನೊಬೆಲ್ ಶಾಂತಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ. ಮದರ್ ತೆರೇಸಾ ಅವರ ಮೊದಲ ಹೆಸರು ಆಗ್ನೆಸೇ ಗೋನ್‌ಕ್ಸೆ ಬೋಜಕ್ಸಿಯು (ಗೋನ್‌ಕ್ಸೆ ಎಂದರೆ ಅಲ್ಬೇನಿಯಾದಲ್ಲಿ ಗುಲಾಬಿ ಮೊಗ್ಗು) ಅಲ್ಬೇನಿಯದವರಾದ ಈ ರೋಮನ್ ಕ್ಯಾಥೊಲಿಕ್ ಸನ್ಯಾಸಿನಿ ಭಾರತದ ಪೌರತ್ವ ಪಡೆದಿದ್ದರು.

ಇವರು 1950ರಲ್ಲಿ "ಮಿಷನರೀಸ್ ಆಫ್ ಚಾರಿಟಿ" ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ಭಾರತದ ಕೋಲ್ಕೊತ್ತಾದಲ್ಲಿ ಸ್ಥಾಪಿಸಿದರು. ಈ ಸೇವಾ ಸಂಸ್ಥೆಯನ್ನು ಮೊದಲು ಭಾರತದಾದ್ಯಂತ ವಿಸ್ತರಿಸಲು ಮಾರ್ಗದರ್ಶಿಯಾಗಿ, ನಂತರ ವಿಶ್ವದ ಇತರೆ ರಾಷ್ಟ್ರಗಳಿಗೂ ಸಂಸ್ಥೆಯ ಕಾರ್ಯಾಚರಣೆಗಳನ್ನು ವಿಸ್ತರಿಸಿದರು. ಲೇಖಕರಾದ ಮ್ಯಾಲ್ಕಮ್ ಮುಗ್ಗರಿಜ್, ಇವರು ತೆರೇಸಾ ಅವರನ್ನು ಕುರಿತು "ಸಮ್‌ಥಿಂಗ್ ಬ್ಯೂಟಿಫುಲ್ ಫಾರ್ ಗಾಡ್" ಕೃತಿಯನ್ನು ರಚಿಸಿದ್ದಾರೆ. ಮತ್ತು ಇದೇ ಕೃತಿಯನ್ನು ಆಧರಿಸಿ ಸಾಕ್ಷ್ಯಚಿತ್ರ ನಿರ್ಮಾಣವಾಗಿದೆ. ಭಾರತ ಸರ್ಕಾರವೂ ಸಹ ಮಹಾಮಾತೆಗೆ ದೇಶದ ಅತ್ಯುನ್ನತ ಗೌರವ ಭಾರತ ರತ್ನ ಪ್ರದಾನ ಮಾಡಿದೆ. ಮದರ್ ತೆರೇಸಾ ಸ್ಥಾಪಿಸಿದ ಮಿಷನರೀಷ್ ಆಫ್ ಚಾರಿಟಿ ಸಂಸ್ಥೆ HIV/ AIDS ಪೀಡಿತರ ಸೇವೆ, ಕುಷ್ಠರೋಗಿಗಳ ಆರೈಕೆ, ಕ್ಷಯರೋಗಿಗಳ ಶುಶ್ರೂಷೆಯ ಸೇವಾ ವಲಯವನ್ನು ವಿಸ್ತರಿಸಿದೆ.

ಇದರೊಂದಿಗೆ ಕೌಟುಂಬಿಕ ಆಪ್ತ ಸಲಹೆ, ಅನಾಥಾಶ್ರಮ ಮತ್ತು ವಿವಿಧ ಸೇವಾ ಸೌಲಭ್ಯಗಳನ್ನು ಈ ಸಂಸ್ಥೆ ಒದಗಿಸಿತು. 123 ದೇಶಗಳಲ್ಲಿ 610 ಮಿಷನರಿಗಳು ಕಾರ್ಯಾಚರಣೆ ನಡೆಸುತ್ತಿದ್ದವು. ಹಲವು ಸರ್ಕಾರಗಳು ಸಂಘ, ಸಂಸ್ಥೆಗಳಿಂದ ಹಾಗೂ ವ್ಯಕ್ತಿಗಳಿಂದ ಪ್ರಶಂಸೆಗೆ ಪಾತ್ರರಾಗಿದ್ದ ಇವರು ನಾನಾ ಬಗೆಯ ಟೀಕೆಗಳಿಗೂ ಗುರಿಯಾಗಿದ್ದರು.

ಸಾವಿನ ದವಡೆಯಲ್ಲಿರುವವರ ರಕ್ಷಣೆ ಚರ್ಚ್‌ನಲ್ಲಿ ಶುದ್ಧಿಸ್ನಾನ ಅಥವಾ ದೀಕ್ಷಾವಿಧಿ, ಗರ್ಭಪಾತದ ವಿರುದ್ಧದ ನಿಲುವು, ಮತಾಂತರಕ್ಕೆ ಪ್ರೇರೇಪಿಸುವ ಕೃತ್ಯಗಳೆಂದು ಕೆಲವರು ಖಂಡಿಸಿದ್ದರು. ಕ್ರಿಸ್ಟೋಫರ್ ಹಿಚೆನ್ಸ್, ಮೈಕೇಲ್ ಪಾರೆಂತಿ, ಅರೌಪ್ ಚಟರ್ಜಿ, ವಿಶ್ವ ಹಿಂದೂ ಪರಿಷತ್ ಮುಂತಾದವರು–ಖಂಡಿಸಿದವರಲ್ಲಿ ಪ್ರಮುಖರಾಗಿದ್ದರು. ಇವರ ಅನಾಥಾಲಯಗಳಲ್ಲಿನ ಚಿಕಿತ್ಸೆಯ ಗುಣಮಟ್ಟವನ್ನು ವೈದ್ಯಕೀಯ ನಿಯತಕಾಲಿಕೆಗಳೂ ಟೀಕಿಸಿದ್ದವು. ಮತ್ತು ಸಂಸ್ಥೆಗೆ ಬರುವ ದತ್ತಿ ದಾನಗಳ ವ್ಯಯದ ಅಪಾರದರ್ಶಕತೆ ಬಗ್ಗೆಯೂ ಟೀಕೆಗಳನ್ನು ಮಾಡಿದ್ದರು. 1996ರಲ್ಲಿ ಮದರ್ ತೆರೇಸಾ ಅವರನ್ನು ಯುನೈಟೆಡ್ ಸ್ಟೇಟ್ಸ್‌ನ ಗೌರವ ಪ್ರಜೆಯಾಗಿ ನೇರವಾಗಿ ಆಕ್ಟ್ ಆಫ್ ಕಾಂಗ್ರೆಸ್ ಮೂಲಕ ಅಧಿಕೃತವಾಗಿ ಪ್ರಕಟಿಸಲಾಯಿತು. ಇವರ ನಿಧನದ ನಂತರ ಪೋಪ್ ಜಾನ್ ಪಾಲ್ ತೆರೇಸಾಗೆ 'ಬ್ಲೆಸ್ಡ್ ತೆರೇಸಾ ಆಫ್ ಕಲ್ಕತಾ' (ಕಲ್ಕತ್ತಾದ ಪೂಜ್ಯ ತೆರೇಸಾ) ಎಂಬ ಬಿರುದನ್ನಿತ್ತು ಪರಮಪದ ನೀಡಿದ್ದರು.

1910ರ ಆಗಸ್ಟ್ 26 ರಂದು ಒಟ್ಟೋಮನ್ ಎಂಪೈರ್‌ನ ಊಸ್ಕೂಬ್ ನಗರದಲ್ಲಿ ಇವರು ಜನಿಸಿದ್ದರು. (ಇದರ ಈಗಿನ ಹೆಸರು ಸ್ಕೋಪ್ಜೆ, ರಿಪಬ್ಲಿಕ್ ಆಫ್ ಮ್ಯಾಸೆಡೋನಿಯದ ರಾಜಧಾನಿ.) ಆಗಸ್ಟ್ 26 ರಂದು ಜನಿಸಿದ್ದರೂ ಸಹ ಇವರು ದೀಕ್ಷಾವಿಧಿ ಸ್ವೀಕರಿಸಿದ ಆಗಸ್ಟ್ 27ನ್ನೇ "ನೈಜ ಜನ್ಮ ದಿನಾಂಕ" ಎಂದು ಪರಿಗಣಿಸಿದ್ದರು. ಕುಟುಂಬದ ಕಿರಿಯ ಮಗಳಾದ ಈಕೆಯನ್ನು ಎಂಟು ವರ್ಷದಿಂದಲೇ ರೋಮನ್ ಕ್ಯಾಥೊಲಿಕ್ ಚರ್ಚ್‌ನ ಅನುಯಾಯಿಯಾಗಿ ಬೆಳೆಸಲಾಗಿತ್ತು. "ಮಿಷನರಿಗಳು ಮತ್ತು ಅವುಗಳ ಸೇವಾಕಾರ್ಯಗಳಿಂದ ತೆರೇಸಾ ಆಕರ್ಷಿತಳಾಗಿದ್ದಳೆಂದೂ ತನ್ನ ಹನ್ನೆರಡನೇ ವಯಸ್ಸಿಗಾಗಲೇ ತನ್ನ ಉಳಿದ ಬದುಕನ್ನು ಧಾರ್ಮಿಕ ಸೇವೆಗೆ ಮುಡಿಪಾಗಿಡಬೇಕೆಂದು ತೀರ್ಮಾನಿಸಿದ್ದಳೆಂದೂ" ತೆರೇಸಾ ಜೀವನ ಚರಿತ್ರೆಯಲ್ಲಿ ಕ್ಲೂಕಾಸ್ ಅವರು ಬರೆದಿದ್ದಾರೆ. ಹದಿನೆಂಟನೇ ವಯಸ್ಸಿಗೆ ಮನೆ ತೊರೆದ ತೆರೇಸಾ ಸಿಸ್ಟರ್ಸ್ ಆಫ್ ಲೊರೆಟೋಮಿಷನರಿಯನ್ನು ಸೇರಿದ್ದಳು. ಅಂದಿನಿಂದ ಅವರ ತಾಯಿಯನ್ನಾಗಲೀ, ಸಹೋದರಿಯನ್ನಾಗಲೀ ಭೇಟಿಯಾಗಲಿಲ್ಲ. ಆಗ್ನೆಸ್ ಇಂಗ್ಲಿಷ್ ಕಲಿಯುವ ಸಲುವಾಗಿ ಐರ್ಲೆಂಡ್‌ನ ರಾಥ್‌ಫರ್ನ್‌ಹ್ಯಾಮ್‌ನಲ್ಲಿರುವ

ಲೊರೇಟೋ ಆಬ್ಬೀ ಶಾಲೆಗೆ ಸೇರಿದಳು. ಭಾರತದಲ್ಲಿ ಸಿಸ್ಟರ್ಸ್ ಆಫ್ ಲೊರೇಟೋ ಮಿಷನರಿ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ನೀಡುತ್ತಿತ್ತು.

ಇವರು 1929ರಲ್ಲಿ ಭಾರತಕ್ಕೆ ಆಗಮಿಸಿ, ಹಿಮಾಲಯದ ತಪ್ಪಲಿನಲ್ಲಿರುವ ಡಾರ್ಜೀಲಿಂಗ್‌ನಲ್ಲಿ ದೀಕ್ಷಾ ತರಬೇತಿಯನ್ನು ಆರಂಭಿಸಿದ್ದರು. ಕ್ರೈಸ್ತರ ಮೊದಲ ಧಾರ್ಮಿಕ ದೀಕ್ಷಾ ಪ್ರತಿಜ್ಞೆಯನ್ನು ಇವರು 1931ರ ಮೇ 24ರಂದು ಸ್ವೀಕರಿಸಿದರು. ಕ್ರೈಸ್ತ ಮಿಷನರಿಗಳ ಪೋಷಕರಾಗಿದ್ದ ಥೇರೇಸೆ ಡಿ ಲಿಸಿಯುಕ್ಸ್ ಅವರ ಗೌರವಾರ್ಥವಾಗಿ ಆಗ್ನೇಸ್ ತಮ್ಮ ಹೆಸರನ್ನು ತೆರೇಸಾ ಎಂದು ಬದಲಾಯಿಸಿಕೊಂಡರು. ಪೂರ್ವ ಕಲ್ಕತ್ತಾದ ದಿ ಲೊರೇಟೋ ಕಾನ್ವೆಂಟ್‌ನಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ 1937ರ ಮೇ 14ರಂದು ವಿಧಿವತ್ತಾಗಿ ದೀಕ್ಷಾ ಪ್ರತಿಜ್ಞೆ ಸ್ವೀಕರಿಸಿದರು. ತೆರೇಸಾ ಶಿಕ್ಷಕ ವೃತ್ತಿಯಲ್ಲಿ ಸಂತೋಷದಿಂದಿದ್ದರೂ, ಕಲ್ಕತ್ತಾದ ಸುತ್ತಮುತ್ತಲಿನ ಬಡತನ ಕಂಡು ತೀವ್ರವಾಗಿ ನೊಂದಿದ್ದರು.

1943ರ ಕ್ಷಾಮ, ಕಲ್ಕತ್ತಾ ನಗರವನ್ನು ದುಸ್ಥಿತಿಗೆ ತಳ್ಳಿತಲ್ಲದೆ ಸಾವು-ನೋವುಗಳನ್ನು ತಂದೊಡ್ಡಿತು. ಮತ್ತು 1946ರ ಆಗಸ್ಟ್ ನಲ್ಲಿ ಭುಗಿಲೆದ್ದ ಹಿಂದೂ-ಮುಸ್ಲಿಂ ಗಲಭೆ ಜನತೆಯನ್ನು ಹತಾಶೆ ಮತ್ತು ಭೀತಿಯಲ್ಲಿ ಮುಳುಗಿಸಿತ್ತು.

### ಮಿಷನರೀಸ್ ಆಫ್ ಚಾರಿಟಿ

ತಾನು 1946ರ ಸೆಪ್ಟೆಂಬರ್ 10ರಂದು ಕಲ್ಕತ್ತಾದಿಂದ ವಾರ್ಷಿಕ ಏಕಾಂತವಾಸಕ್ಕೆ ಡಾರ್ಜೀಲಿಂಗ್‌ನ ಲೊರೇಟೋ ಕಾನ್ವೆಂಟ್‌ಗೆ ಪ್ರಯಾಣಿಸುತ್ತಿದ್ದಾಗ "ದಿ ಕಾಲ್ ವಿಥಿನ್ ದಿ ಕಾಲ್"ನ ಕರೆಗೆ ಓಗೊಟ್ಟೆ ಎಂಬುದನ್ನು ತೆರೇಸಾ ಮನಗಂಡರು. "ಬಡವರೊಂದಿಗೆ ನಾನೂ ಒಬ್ಬಳಾಗಿ ಬದುಕುತ್ತಿರುವಾಗ, ಬಡವರ ಸೇವೆಗಾಗಿ ಕಾನ್ವೆಂಟ್ ತೊರೆಯಲು ನಿರ್ಧರಿಸಿದ್ದೆ. ಇದು ದೈವಾಜ್ಞೆಯಾಗಿತ್ತು. ಇದರ ಉಲ್ಲಂಘನೆ ಎಂದರೆ ನಂಬಿಕೆಯನ್ನೇ ಕಳೆದುಕೊಂಡಂತೆ. ನಂಬಿಕೆಯನ್ನು ಮುರಿಯಲು ಸೋಲಬೇಕಿತ್ತು." ಎಂದು ತಮ್ಮ ಮನದ ಕರೆಗೆ ಓಗೊಟ್ಟ ಅನುಭವವನ್ನು ಹೇಳಿಕೊಂಡಿದ್ದಾರೆ. ಹೀಗೆ ಇವರು ಮಿಷನರಿ ಸೇವೆಯನ್ನು 1948ರಿಂದ ಆರಂಭಿಸಿದರು; ಲೊರೇಟೋ ಕಾನ್ವೆಂಟ್‌ನ ಸಾಂಪ್ರದಾಯಿಕ ಸಮವಸ್ತ್ರ ತೊರೆದು ನೀಲಿ ಅಂಚಿನ ಬಿಳಿಸೀರೆ ಉಡುಗೆಯಾಗಿಸಿಕೊಂಡರು; ಬಡವರ ಆಸರೆಗಾಗಿ ಕೊಳೆಗೇರಿಗಳಿಗೆ ಧಾವಿಸಿದರು.

ಆರಂಭದಲ್ಲಿ ಮೋತೀಸ್ ಹಿಲ್‌ನಲ್ಲಿ ಶಾಲೆಯನ್ನು ತೆರೆದರು. ತದನಂತರ ನಿರ್ಗತಿಕರ ಮತ್ತು ಹಸಿದವರ ಪರವಾಗಿ ಕಾರ್ಯೋನ್ಮುಖರಾದರು. ಇವರ ಸೇವಾ ಕೈಂಕರ್ಯಗಳು ಜನರು, ಅಧಿಕಾರಿವರ್ಗದವರು ಹಾಗೂ ರಾಜಕೀಯ ನಾಯಕರ ಗಮನಕ್ಕೂ ಬಹುಬೇಗ ಬಂದವು. ಪ್ರಧಾನ ಮಂತ್ರಿಗಳು ಇವರ ಕಾರ್ಯಗಳನ್ನು ಶ್ಲಾಘಿಸಿದರು. "ಆರಂಭದಲ್ಲಿ ಹಲವಾರು ಎಡರು-ತೊಡರುಗಳು ಎದುರಾದವು. ಆದಾಯದ ಯಾವುದೇ ಮೂಲಗಳು ಇರಲಿಲ್ಲ, ಆಹಾರ ಮತ್ತು ಅಗತ್ಯ ಪೂರೈಕೆಗಾಗಿ ಅನ್ಯರನ್ನು ಬೇಡುವ ಸ್ಥಿತಿ ಇತ್ತು. ಒಂಟಿತನ ಕಾಡಿತ್ತು. ಟೀಕೆಗಳನ್ನು ಎದುರಿಸುವಾಗ ಸಾಂಘಿಕ ಬದುಕಿಗೆ ಹಿಂತಿರುಗುವ ಆಲೋಚನೆ ಉಂಟಾಗಿತ್ತು." ಎಂದು ಇವರು ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ.

**ಕರ್ನಾಟಕ ಗಾಂಧೀ ಸ್ಮಾರಕ ನಿಧಿಯು ಮಾರ್ಚ್ 2020ರಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳು**

1. ಐದು ದಿನಗಳ ರಾ.ಸೇ.ಯೋ. ಗಾಂಧೀ ತತ್ವ ಪ್ರಣೀತ ಯುವ ಜನ ಶಿಬಿರ
2. ಗಾಂಧೀ ಅಂಗಳದಲ್ಲಿ ಗಾಂಧೀ ಚಿಂತಕರು
3 ಎಂ ಎಸ್ ಸಂದೀಪ್ ದತ್ತಿ ಕಾರ್ಯಕ್ರಮ
4 ಮೈಲಾರ ಮಹಾದೇವ ದತ್ತಿ ಕಾರ್ಯಕ್ರಮ
5. ಡಾ: ಹೊ ಶ್ರೀನಿವಾಸಯ್ಯ ದತ್ತಿ ಕಾರ್ಯಕ್ರಮ
6. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸರ್ವಸದಸ್ಯರ ಸಭೆ
7. ಪ್ರೊ: ರಾಮಚಂದ್ರೇಗೌಡ ದತ್ತಿ ಕಾರ್ಯಕ್ರಮ

(ಕ್ರಮ. ಸಂಖ್ಯೆ 2 ರಿಂದ 7ರವರೆಗೆ ಕಾರ್ಯಕ್ರಮಗಳು ಕರೋನಾ ವೈರಸ್ ಕಾರಣದಿಂದಾಗಿ ಮುಂದೂಡಲಾಗಿದೆ.)

# ಕನ್ನಡ-ಕನ್ನಡಿಗ-ಕರ್ನಾಟಕ

- ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)

ಹೈದ್ರಾಬಾದ್ ನಿಜಾಮ, ಮೀರ್ ಉಸ್ಮಾನ್ ಆಲಿಯು ರಜಕಾರರ ನಾಯಕ ಖಾಸಿಂ ರಜ್ವಿಯ ಕೈಗೊಂಬೆಯಂತೆ ವರ್ತಿಸುತ್ತಿದ್ದ. ಆತ ಹಿಂಸಾತ್ಮಕ ಘೋಷಣೆಯನ್ನು ಕೂಗಿಸುತ್ತಾ, ಕೋಮು ದಳ್ಳುರಿಗೆ ತುಪ್ಪ ಸುರಿಯುತ್ತಿದ್ದ. "ಪ್ರತಿಯೊಬ್ಬ ಮುಸ್ಲಿಂರು ರಜಕಾರರಾಗಬೇಕು. ಭಾರತದಲ್ಲಿ ಈ ಸಂಸ್ಥಾನದ ವಿಲೀನ ವೆಂದರೆ, ಅದು 'ಅಲ್ಲಾ'ನ ವಿರುದ್ಧವೆಂದರ್ಥ. ಭಾರತ ಹೈದ್ರಾಬಾದ್ ಪ್ರವೇಶಿಸಲು ಸಿದ್ಧವಾದರೆ, ರಜಕಾರರು ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಲಿ ನಿಜಾಂ ಧ್ವಜ, ಹೋರಾಡಿ ಪ್ರಾಣಾರ್ಪಣೆ ಮಾಡಬೇಕು." ಎಂದು ಕರೆಯಿತ್ತಿದ್ದನು. ಅಲ್ಲಿ ಹಳ್ಳಿಹಳ್ಳಿಗಳಲ್ಲಿ ನಡೆದ ಹಿಂಸಾ ಕೃತ್ಯಗಳಿಂದಾಗಿ ಲಕ್ಷಾಂತರ ಜನರು ನಿರಾಶ್ರಿತರಾದರು. ಇಂಥಹ ಸಂದರ್ಭದಲ್ಲಿ 1947ರ ಜೂನ್ 16ರಂದು ಹೈದ್ರಾಬಾದ್‌ನಲ್ಲಿ ಪ್ರಥಮ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಸಮಯದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಸ್ವಾಮಿ ರಮಾನಂದ, ಎನ್.ಜಿ. ರಂಗಾ, ಎಸ್. ನಿಜಲಿಂಗಪ್ಪ, ಶಿವಮೂರ್ತಿ ಸ್ವಾಮಿ, ಶಂಕರದೇವ ಮುಂತಾದ ಅಗ್ರಗಣ್ಯರು ಭಾಗವಹಿಸಿ, ಹೈದ್ರಾಬಾದನ್ನೂ ಭಾರತದ ಒಕ್ಕೂಟದಲ್ಲಿ ಸೇರಿಸಲು ಶ್ರೀಘ್ರ ಕ್ರಮಕ್ಕೆ ಮುಂದಾದರು. ಸರ್ದಾರ್ ಪಟೇಲರ ಒಕ್ಕೂಟದ ಅಚಲ ನಿರ್ಧಾರಕ್ಕೆ ಸೊಪ್ಪು ಹಾಕದ ನಿಜಾಮನ ದಬ್ಬಾಳಿಕೆಗೆ, ಸೇನೆಯ ನಿರ್ದಾಕ್ಷಿಣ್ಯ ದಾಳಿ ಮಾತ್ರ ಪರಿಹಾರವೆಂದು 1948ರ ಸೆಪ್ಟಂಬರ್ 13ರಂದು ಪೋಲಿಸ್ ಕಾರ್ಯಚರಣೆಗೆ ಅಂಕಿತ ಹಾಕಿದ್ದರು.

ಸರ್ಕಾರದ ಈ ಕಾರ್ಯಾಚರಣೆಯನ್ನು ಗಂಭೀರವಾಗಿ ಪರಿಗಣಿಸಿದ ಹೈದ್ರಾಬಾದ್ ನಿಜಾಮ ಮೀರ್ ಉಸ್ಮಾನ್ ಆಲೀಖಾನ್, ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಸನ್ನದ್ಧರಾದರು. ಹೈದ್ರಾಬಾದ್ ಸಂಸ್ಥಾನದ ಮುತ್ತಿಗೆಯ ಕಾರ್ಯಾಚರಣೆಯನ್ನು ಜನರಲ್ ಚೌದರಿ ವಹಿಸಿಕೊಂಡಿದ್ದರು. ಇವರು ನಿಜಾಮ ಇವರೊಂದಿಗೆ ಮಾತುಕತೆ ನಡೆಸಿದರು. ಮಾತುಕತೆಯ ನಂತರ ಅಧಿಕಾರವನ್ನು ಮಿಲಿಟರಿ ಗೌವರ್ನರ್ ಚೌದರಿ ಅವರಿಗೆ ವಹಿಸಿಕೊಟ್ಟನು. ಸುಮಾರು ಮೂರು ತಿಂಗಳವರೆಗೆ ಅಂದರೆ ಡಿಸೆಂಬರ್ 1949ರವರೆಗೆ ಇವರು, ಹೈದ್ರಾಬಾದ್ ಪ್ರದೇಶದಲ್ಲಿ ಆಡಳಿತ ನಿರ್ವಹಿಸಿದರು. ತದನಂತರ ಹೈದ್ರಾಬಾದ್ ರಾಜ್ಯಕ್ಕೆ ಎಂ.ಕೆ. ವೆಲ್ಲೋಡಿ, ಐಪಿಎಸ್ ಅವರನ್ನು ಮುಖ್ಯಮಂತ್ರಿ ಆಗಿ ನೇಮಕ ಮಾಡಲಾಯಿತು. ನಿಜಾಮ ಮೀರ್ ಉಸ್ಮಾನ್ ಅಲಿ ಅವರನ್ನು ಕೇಂದ್ರ ಸರ್ಕಾರ, ಹೈದ್ರಾಬಾದ್‌ನ ರಾಜ ಪ್ರಮುಖರಿಗೆ ನೇಮಿಸಿತು. ಅವರು 1956ರವರೆಗೆ ಸದರಿ ಹುದ್ದೆಯಲ್ಲಿದ್ದರು. ರಜಕಾರರ ನಾಯಕ ಖಾಸಿಂ ರಜ್ವಿಯನ್ನು ಸೆರೆಮನೆಯಲ್ಲಿಡಲಾಯಿತು. ರಾಜ್ಯ ಪುರ್ನವಿಂಗಡಣೆಯ ಸಂದರ್ಭದಲ್ಲಿ ಹೈದ್ರಾಬಾದ್‌ನ್ನು ಮೂರು ವಿಭಾಗಗಳಾಗಿ ವಿಂಗಡಿಸಿದ್ದರು. ಇಲ್ಲಿನ ಅನೇಕ ಗ್ರಾಮ, ತಾಲ್ಲೂಕುಗಳನ್ನು ಬೇರೆ ರಾಜ್ಯಗಳಿಗೂ ಸೇರಿಸಲಾಯಿತು. ಮತ್ತು ಉಳಿದ ವಿಸ್ತಾರ ಪ್ರದೇಶವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡಲಾಯಿತು. ಹೈದ್ರಾಬಾದ್ ರಾಜ್ಯದ ಪ್ರದೇಶಗಳನ್ನು

| | |
|---|---|
| ಅಹಮದ್ ಪುರ ನೀಲಗಂಗಾ ಉದಗೀರ್ ತಾಲ್ಲೂಕು ಹೊರತುಪಡಿಸಿ | ಬೀದರ್ ಜಿಲ್ಲೆ, |
| ತಾಂಡೂರು ಮತ್ತು ಕೊಡಂಗಲ್ ತಾಲ್ಲೂಕು ಹೊರತುಪಡಿಸಿ | ಗುಲ್ಬರ್ಗಾ ಜಿಲ್ಲೆ |
| ಅಲಂಪುರ ಗದ್ವಾಲ್ ತಾಲ್ಲೂಕು ಹೊರತುಪಡಿಸಿ | ರಾಯಚೂರು ಜಿಲ್ಲೆ |

ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಿ, ಅಖಂಡ ಮೈಸೂರು ರಾಜ್ಯ ಉದಯವಾಗಿತ್ತು. ಅಂದಿನ ಮೈಸೂರು ಸರ್ಕಾರ ಎಂ. ಶೇಷಾದ್ರಿ ಅವರ ನೇತೃತ್ವದ ಸಮಿತಿಯನ್ನು ರಚಿಸಿತ್ತು. ಆ ಸಮಿತಿ, ಏಕೀಕರಣದ ವಿರುದ್ಧವಾಗಿಯೇ ವರದಿಯನ್ನು ಕೊಟ್ಟಿತ್ತು. ಮೈಸೂರಿನ ಅನೇಕ ನೇತಾರರು, ಹೈದ್ರಾಬಾದ್ ಪ್ರದೇಶವನ್ನು ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಲು ವಿರೋಧ ವ್ಯಕ್ತಪಡಿಸಿದ್ದರು ಮತ್ತು ಹೋರಾಟವನ್ನು ಮಾಡಿದ್ದರು. ಆದಾಗ್ಯೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪ, ಎಂ. ವಿಶ್ವೇಶ್ವರಯ್ಯ, ಗುದ್ಲಪ್ಪ ಹಳ್ಳಿಕೇರಿ, ಅಂದಾನಪ್ಪ ದೊಡ್ಡಮೇಟಿ ಅವರ ನಿರಂತರ ಪ್ರಯತ್ನದಿಂದಾಗಿ ಮೈಸೂರು ರಾಜ್ಯ ನಿರ್ಮಾಣವಾಯಿತು. ಇಲ್ಲಿ ಕನ್ನಡ ಭಾಷೆಯೇ ರಾಜ್ಯ ಪುರ್ನವಿಂಗಡಣೆಗೆ ಪ್ರಮುಖ ಕಾರಣವಾಗಿದ್ದರೂ, ತೆಲುಗು, ಮರಾಠಿ, ಉರ್ದು ಭಾಷೆಗಳ ಪ್ರಜೆಗಳು "ಭಾಷಾ ಸಹೋದರಿತ್ವ"ದೊಂದಿಗೆ ಕರ್ನಾಟಕದೊಂದಿಗೆ ಬೆಸೆದುಕೊಂಡಿದ್ದಾರೆ.

# HOW TO STAY SAFE

## When a Wildfire Threatens

### Prepare NOW

**Sign up for your Community's Warning system.** The Emergency Alert System (EAS) and Weather Radio also provide emergency alerts

**Know your community's evacuation routes** and find several ways to leave the area. Drive the evacuation routes and find shelter locations. Have a plan for pets and livestock

**Gather emergency supplies, including N95 respirator masks** that filter out particles in the air you breathe. Keep in mind each person's specific needs, including medication Don't forget the needs or pets.

**Keep important documents** in a fireproof safe. Create password protected digital copies.

**Use Fire-resistant materials to build** renovate, or make repairs

**Find an outdoor water source with a hose** that can reach any area of your property.

**Create a fire-resistant zone** that is free of leaves, debris, or flammable materials for at least 30 feet from your home

**Review Insurance coverage** to make sure it is enough to replace your property.

### Srvive DURING

**Evacuate.** Leave immediately if authorities tell you to do so.

**If trapped, call 112** and give your location, but be aware that emergence response could be delayed or impossible. Turn on lights to help people find you.

**Listen to EAS, Weather Radio, or local alerting systems** for current emergency information and instructions.

**Use an N95 mask** to keep particles out of the air you breathe.

**Take an Active Role in Your Safety**

### Be safe AFTER

**Listen to authorities** to find out if it is safe to return and whether water is safe to drink

**Avoid hot ash, charred trees, smoldering debris, and live embers.** The ground may contain heat pockets that can burn you or spark another fire. Consider the danger to pets and livestock walking the ground.

**Send text messages or use social media** to reach out to family and friends. Phone systems are often busy following a disaster. Make calls only in emergencies.

**Document property damage with photographs.** conduct an inventory and contact your insurance company for assistance

## "ಹ್ಯಾಂಡ್ಸ್‌ಮ್" ಮುನ್ನೆಚ್ಚರಿಕೆ ಕ್ರಮಗಳು

- ವಸ್ತುಗಳನ್ನು ಮುಟ್ಟಿದ ತಕ್ಷಣ ಅದೇ ಕೈಗಳಿಂದ ಕಣ್ಣು, ಮುಖ, ಕೆನ್ನೆ, ಮೂಗುಗಳನ್ನು ಮುಟ್ಟಬಾರದು
- ವೈರಸ್‌ಗಳ ಜೀವಿತಾವಧಿ 48 ಗಂಟೆಗಳು ಮಾತ್ರವಾದ್ದರಿಂದ, ಆಗಾಗ ಕೈಗಳನ್ನು ಮೊಳಕೈವರೆಗೆ ಸೋಪಿನಿಂದ ತೊಳೆದುಕೊಳ್ಳುತ್ತಿರಬೇಕು
- ಹಸ್ತಲಾಘನ ಮತ್ತು ಆಲಿಂಗನಗಳನ್ನು ಮಾಡಬಾರದು. ಎಲ್ಲೆಂದರಲ್ಲಿ ಉಗುಳಬಾರದು
- ಸರ್ಜಿಕಲ್ ಮಾಸ್ಕ್ ಮತ್ತು ಗ್ಲೌಸ್‌ಗಳನ್ನು ಮಾತ್ರ ಉಪಯೋಗಿಸುಹುದು. ಮರು ಬಳಕೆಗೆಂದೇ ಅಂಗೀಕೃತವಾದ ಮಾಸ್ಕ್‌ಗಳನ್ನು ಬಿಟ್ಟು ಬೇರೆ ಮಾಸ್ಕ್‌ಗಳನ್ನು ಬಳಸಬಾರದು
- ಸೀನು ಕಫ, ಕೆಮ್ಮು ಬಂದಾಗ, ಕರವಸ್ತ್ರದಿಂದ ಬಾಯಿ ಮುಚ್ಚಿಕೊಳ್ಳುವುದು
- ಉಸಿರಾಟದ ತೊಂದರೆ, ಜ್ವರ, ಕೆಮ್ಮು ಉಂಟಾದಾಗ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು
- ಕರೋನ ವೈರಸ್‌ನ ಸೂಚನೆಗಳು ಕಂಡಾ ಕ್ಷಣ ಸಹಾಯವಾಣಿ 104, ಹತ್ತಿರದ ಆರೋಗ್ಯ ಕೇಂದ್ರ ಅಥವ ಟೋಲ್ ಫ್ರೀ ಸಂಖ್ಯೆ 011-23978046 ಅಥವಾ ncov2019@gmail.comಗೆ ಸಂಪರ್ಕಿಸಬಹುದು

# ಆರೋಗ್ಯ - ಚಿಂತನೆ

– ಡಾ॥ ವಸುಂಧರಾ ಭೂಪತಿ

### ಆಗಂತು ಜ್ವರ (ಕೊರೋನಾ ಜ್ವರ) –

### ಆತಂಕ ಬೇಡ, ಎಚ್ಚರಿಕೆ ಇರಲಿ

ಆಯುರ್ವೇದದಲ್ಲಿ ಜ್ವರದ ಅನೇಕ ವಿಧಗಳನ್ನು ಹೇಳಿದ್ದಾರೆ. ವಾತ, ಪಿತ್ತ, ಕಫ, ದೋಷಾನುಸಾರ ವಾತಪಿತ್ತ, ಪಿತ್ತಕಫ, ವಾತಕಫ, ಸನ್ನಿಪಾತಜ (ತ್ರಿದೋಷಜ) ಮತ್ತು ಆಗಂತುಜ್ವರ ಎಂದು ಎಂಟು ವಿಧಗಳನ್ನು ವಿವರಿಸಲಾಗಿದೆ. ಆಗಂತು ಜ್ವರ ಅಂದರೆ ಹೊರಗಿನ ಕಾರಣಗಳಿಂದ ಬರುವಂತಹುದು. ಇದನ್ನು ನಾವು ವೈರಸ್‌ನಿಂದ ಉಂಟಾಗುವ ಜ್ವರಕ್ಕೆ ಹೋಲಿಸಬಹುದಾಗಿದೆ.

ಆಗಂತು ಜ್ವರದಲ್ಲಿ ಅಂದರೆ ಯಾವುದೇ ವೈರಾಣುವಿನಿಂದ ಉಂಟಾಗುವ ಜ್ವರದಲ್ಲಿ ನೆಗಡಿ, ತಲೆನೋವು, ಕೆಮ್ಮು, ಮೈಕೈನೋವು, ಜ್ವರ ಲಕ್ಷಣಗಳು ಕಂಡುಬರುತ್ತದೆ. ವೈರಾಣು ದೇಹದಲ್ಲಿ ಸುಮಾರು 7 ರಿಂದ 14 ದಿನಗಳಲ್ಲಿ ಹರಡುತ್ತದೆ. ಕೆಲವರಲ್ಲಿ 24 ಗಂಟೆಗಳಲ್ಲಿ ಸೋಂಕು ಕಾಣಿಸಿಕೊಳ್ಳಬಹುದು.

ಕೊರೋನಾ ವೈರಾಣು ಜ್ವರಕ್ಕೆ ಸಂಪೂರ್ಣ ಚಿಕಿತ್ಸೆ ಇಲ್ಲ. ಆದರೆ ಬಾರದಂತೆ ತಡೆಯಬಹುದು. ಚೈನಾದಲ್ಲಿ ಆರಂಭವಾಗಿ ಭಾರತವೂ ಸೇರಿದಂತೆ ಅನೇಕ ರಾಷ್ಟ್ರಗಳ ನಿದ್ದೆಗೆಡಿಸಿದೆ.

### ತಡೆಗಟ್ಟುವ ಕ್ರಮಗಳು

ಆಹಾರಕ್ರಮ : ಬಿಸಿಯಾದ ಆಹಾರವನ್ನೇ ಸೇವಿಸಬೇಕು. ಅನ್ನ, ಗಂಜಿ, ಇಡ್ಲಿ, ಯಾವುದಾದರೂ ಬಿಸಿಯಾದುದನ್ನೇ ಸೇವಿಸಬೇಕು. ತಂಗಳ ಆಹಾರ, ಫ್ರಿಜ್‌ನಲ್ಲಿಟ್ಟ ಆಹಾರ, ತಂಪುಪಾನೀಯಗಳ ಸೇವನೆ ಬೇಡವೇ ಬೇಡ. ಸೇಬು, ಸಪೋಟ ಮುಂತಾದ ಹಣ್ಣಿನರಸಗಳ ಸೇವನೆ, ಎಳನೀರು ಕುಡಿಯಬೇಕು. ಕುಡಿಯುವ ನೀರನ್ನು ಕುದಿಸಿ, ಆರಿಸಿ ಕುಡಿಯಬೇಕು. ನೀರನ್ನು ಹತ್ತು ನಿಮಿಷ ಕುದಿಸಬೇಕು. ಜೇನುತುಪ್ಪ ಬೆರೆಸಿದ ನೀರು ಕುಡಿಯವುದು ಒಳ್ಳೆಯದು. ಸುಲಭವಾಗಿ ಜೀರ್ಣವಾಗುವ ತರಕಾರಿ, ಸೊಪ್ಪು, ಹೆಸರುಬೇಳೆಯಿಂದ ತಯಾರಿಸಿದ ಆಹಾರ ಪದಾರ್ಥ ಸೇವನೆ ಉತ್ತಮ. ಟೀ ತಯಾರಿಸುವಾಗ ಶುಂಠಿ, ನಿಂಬೆಹಣ್ಣಿನರಸ ಮತ್ತು ತುಳಸಿ ಬೀಜ ತಯಾರಿಸಿ ಕುಡಿಯಬೇಕು.

### ಮನೆಮದ್ದು

ಧನಿಯಾ, ಜೀರಿಗೆ, ಜೇಷ್ಠಮಧು, ಹಿಪ್ಪಲಿಗಳನ್ನು ಪುಡಿ ಮಾಡಿಟ್ಟುಕೊಂಡು ಕಷಾಯ ತಯಾರಿಸಿ ಕುಡಿಯಬೇಕು.

ಹಿಪ್ಪಲಿ ಮತ್ತು ಶುಂಠಿಯನ್ನು ಸಮಪ್ರಮಾಣ ತೆಗೆದುಕೊಂಡು ಕುಟ್ಟಿ ಪುಡಿ ಮಾಡಿ ಕಷಾಯ ತಯಾರಿಸಿ ನಾಲ್ಕು ಚಮಚೆಯಷ್ಟನ್ನು ದಿನಕ್ಕೆ ಮೂರು ಬಾರಿ ಕುಡಿಯಬೇಕು.

ಅಮೃತಬಳ್ಳಿ, ಶುಂಠಿ, ನೆಲಗುಳ್ಳ ಸಮಪ್ರಮಾಣ ಕುಟ್ಟಿ ಕಷಾಯ ತಯಾರಿಸಿ ದಿನಕ್ಕೆ ಮೂರು ಬಾರಿ ಒಂದು ವಾರ ಸೇವಿಸಬೇಕು.

100 ಗ್ರಾಂ ಲಕ್ಕಿಸೊಪ್ಪು, 10 ಗ್ರಾಂ ಕಾಳುಮೆಣಸು, 10 ಗ್ರಾಂ ಬೆಲ್ಲ ಇವುಗಳನ್ನು ಅರ್ಧ ಲೀಟರ್ ನೀರಿನಲ್ಲಿ ಹಾಕಿ ಕುದಿಸಿ 1/4 ಲೀಟರ್‌ಗೆ ಇರಿಸಬೇಕು. ಕಷಾಯವನ್ನು ಶೋಧಿಸಿ ದಿನಕ್ಕೆರಡು ಬಾರಿ ಕುಡಿಯಬೇಕು.

ಒಂದು ಲೋಟ ಬಿಸಿನೀರಿಗೆ ಅರ್ಧ ಚಮಚೆ ಅರಶಿನ, ಚಿಟಿಕೆ ಕಾಳುಮೆಣಸಿನ ಪುಡಿ ಸೇರಿಸಿ ದಿನಕ್ಕೆರಡು ಬಾರಿ ಖಾಲಿ ಹೊಟ್ಟೆಗೆ ಕುಡಿಯಬೇಕು.

ಒಂದು ಹಿಡಿ ಅಮೃತಬಳ್ಳಿಯನ್ನು ಜಜ್ಜಿ ನಾಲ್ಕು ಲೋಟ ನೀರಿನಲ್ಲಿ ಹಾಕಿ ಕುದಿಸಿ ಒಂದು ಲೋಟಕ್ಕಿಳಿಸಿ ಕಷಾಯ ತಯಾರಿಸಿ, ಶೋಧಿಸಿ ದಿನಕ್ಕೆ 3.-4 ಬಾರಿ ಕುಡಿಯಬೇಕು.

ಒಂದು ಹಿಡಿ ತುಳಸಿಯನ್ನು ತೊಳೆದು ಸ್ವಚ್ಛಗೊಳಿಸಿ ಒಂದು ಲೋಟ ನೀರಿನಲ್ಲಿ ಹಾಕಿ ಅರ್ಧಲೋಟ ಆಗುವವರೆಗೆ ಸಣ್ಣಗಿನ ಉರಿಯಲ್ಲಿ ಕುದಿಸಿ ಬೆಲ್ಲ ಹಾಕಿ ನಾಲ್ಕು ಚಮಚೆಯನ್ನು ದಿನಕ್ಕೆ ಮೂರು ಬಾರಿ ಕುಡಿಯಬೇಕು.

### ಮುಂಜಾಗ್ರತಾ ಕ್ರಮಗಳು

ಕೊರೋನಾ ಸೋಂಕಿಗೆ ಸದ್ಯ ಪರಿಣಾಮಕಾರಿ ಔಷಧವಿಲ್ಲ. ಲಸಿಕೆಯೂ ಇಲ್ಲ. ಒಬ್ಬರಿಂದೊಬ್ಬರಿಗೆ ಬಹಳ ಬೇಗ ಹರಡುತ್ತದಾದ್ದರಿಂದ ಬಾರದಂತೆ ನೋಡಿಕೊಳ್ಳುವುದೇ ಬಹುಮುಖ್ಯ.

'ಮೂಗು ಮತ್ತು ಬಾಯಿ ಮುಚ್ಚುವಂತೆ ಮುಖಗವಸು (ಮಾಸ್ಕ್) ಧರಿಸಬೇಕು. ಮಾಸ್ಕನ್ನು ದಿನಕ್ಕೊಮ್ಮೆ ಬದಲಾಯಿಸಬೇಕು. ಒಮ್ಮೆ ಧರಿಸಿದ ಮಾಸ್ಕ್‌ನ್ನು ಒಂದು ದಿನಕ್ಕಿಂತ ಹೆಚ್ಚು ಬಳಸಬಾರದು. ಆದರೆ ಕೇವಲ ಮಾಸ್ಕ್ ಧರಿಸುವುದರಿಂದ ವೈರಾಣು ಹರಡುವಿಕೆಯನ್ನು ತಡೆಯಲಾಗದು. ಕೈಗಳನ್ನು ಸೋಪಿನಿಂದ ಚೆನ್ನಾಗಿ ತೊಳೆದುಕೊಳ್ಳುತ್ತಿರಬೇಕು. ಪ್ರತಿದಿನ ಬಳಸುವ ಊಟದ ತಟ್ಟೆ, ಲೋಟ, ಇತ್ಯಾದಿ ವಸ್ತುಗಳನ್ನು ಬಿಸಿನೀರಿನಲ್ಲಿ ತೊಳೆಯುವುದು ಸೂಕ್ತ. ಮಕ್ಕಳನ್ನು, ವೃದ್ಧರನ್ನು ರೋಗಿಗಳಿಂದ ದೂರವಿರಿಸವುದು ಕ್ಷೇಮ. ಗರ್ಭಿಣಿಯರು, ಮಕ್ಕಳು ಮತ್ತು ವಯಸ್ಸಾದವರಿಗೆ ಬೇಗನೆ ಹರಡುವುದರಿಂದ ಅವರ ಸುರಕ್ಷತೆ ಬಹಳ ಮುಖ್ಯ. ಎಲ್ಲೆಂದರಲ್ಲಿ ಮನಸ್ಸಿಗೆ ಬಂದಂತೆ ಸೀನುವುದು, ಕೆಮ್ಮುವುದು ಮತ್ತು ಉಗಿಯುವುದನ್ನು ಮಾಡಬಾರದು. ದೈಹಿಕವಾಗಿ ಚಟುವಟಿಕೆಯಿಂದ ಇರುವುದು. ಸಾಕಷ್ಟು ನೀರು ಕುಡಿಯುವುದು, ಪೌಷ್ಟಿಕ ಆಹಾರ ಸೇವನೆ ಬಹಳ ಮುಖ್ಯ.

ಸೋಂಕಿತ ವ್ಯಕ್ತಿಗಳು ಬಳಸುವ ಕಂಪ್ಯೂಟರ್, ಲ್ಯಾಪ್‌ಟಾಪ್, ಪೆನ್, ವಾಚ್, ಮೊಬೈಲ್‌ಗಳಲ್ಲಿಯೂ ವೈರಾಣುಗಳು ಇರುವ ಸಾಧ್ಯತೆ ಹೆಚ್ಚು.

ಸೋಂಕಿತ ವ್ಯಕ್ತಿ ಕೆಮ್ಮಿದಾಗ ಅಥವಾ ಸೀನಿದಾಗ ಪಕ್ಕದಲ್ಲಿದ್ದ ಇತರರಿಗೆ ಬಹುಬೇಗ ಹರಡುತ್ತದೆ. ಆದ್ದರಿಂದ ವ್ಯಕ್ತಿ ಕೆಮ್ಮುತ್ತಿದ್ದಲ್ಲಿ, ಸೀನುತ್ತಿದ್ದಲ್ಲಿ ಅವರಿಂದ ದೂರವಿರುವುದು ಒಳಿತು.

ಜಾತ್ರೆ, ಸಿನಿಮಾ ಥಿಯೇಟರ್, ನಾಟಕ, ರಂಗಮಂದಿರ, ಬಸ್‌ಸ್ಟ್ಯಾಂಡ್, ರೈಲು ನಿಲ್ದಾಣ ಹೆಚ್ಚು ಜನ ಸೇರುವ ಸ್ಥಳಗಳಿಗೆ ಹೋಗುವುದು ಬೇಡ.

### ಹಸ್ತಲಾಘವ, ಪರಸ್ಪರ ತಬ್ಬಿಕೊಳ್ಳುವುದು ಬೇಡ.

ಆಕಸ್ಮಾತ್ತಾಗಿ ಬೇರೆ ವಸ್ತುಗಳನ್ನು ಮುಟ್ಟಿದ ಸಂದರ್ಭದಲ್ಲಿ ತಕ್ಷಣ ನಿಮ್ಮ ಮುಖ, ಕಣ್ಣು, ಕೆನ್ನೆ ಮುಟ್ಟಿಕೊಳ್ಳಬಾರದು.

ಯಾವುದೇ ವಸ್ತುಗಳ ಮೇಲೆ ವೈರಸ್ ಕೇವಲ 48 ಗಂಟೆ ಮಾತ್ರ ಬದುಕಿರಬಲ್ಲದು. ಆದ್ದರಿಂದ ಆಗಾಗ ಕೈಗಳನ್ನು ಮೊಳಕೈವರೆಗೆ ಸೋಪಿನಿಂದ ತೊಳೆದು ಸ್ವಚ್ಛಗೊಳಿಸುವುದರಿಂದ ಹರಡುವಿಕೆಯನ್ನು ತಡೆಗಟ್ಟಬಹುದು.

ಕೆಮ್ಮು, ಶೀತ, ಜ್ವರ, ಸುಸ್ತು, ಕಣ್ಣುರಿ ಕಂಡುಬಂದರೆ ವೈದ್ಯರನ್ನು ಭೇಟಿಯಾಗಿ.

ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿದಲ್ಲಿ ಕೊರೋನಾ ಬಾರದಂತೆ ತಡೆಯಬಹುದು. ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಲು ನೆಲ್ಲಿಕಾಯಿ ಪುಡಿಯನ್ನು ಜೇನುತುಪ್ಪ ರಸದೊಂದಿಗೆ ಬೆರೆಸಿ ದಿನಕ್ಕೆರಡು ಬಾರಿ ಸೇವಿಸಬೇಕು.

ಆಯುರ್ವೇದದಲ್ಲಿ ಹೇಳಿರುವ ಪ್ರಕಾರ ದಿನಚರ್ಯೆ, ಋತುಚರ್ಯೆ ಅಂದರೆ ಪ್ರತಿದಿನ ನಾವು ತೆಗೆದುಕೊಳ್ಳುವ ಆಹಾರ, ಜೀವಶೈಲಿ, ಮತ್ತು ಆಯಾ ಋತುಮಾನಕ್ಕೆ ಅನುಗುಣವಾಗಿ ಸೇವಿಸಬೇಕಾದ ಆಹಾರ, ಧರಿಸಬೇಕಾದ ಉಡುಪು, ಕುಡಿಯುವ ನೀರು, ವ್ಯಾಯಾಮ ಎಲ್ಲವುಗಳನ್ನು ಸರಿಯಾಗಿ ಪಾಲಿಸಿದಲ್ಲಿ ಕೊರೋನಾ ಮಾತ್ರವಲ್ಲ ಯಾವುದೇ ವೈರಾಣುವಿನ ಸೋಂಕು ತಗುಲದಂತೆ ನೋಡಿಕೊಳ್ಳಬಹುದು.

# ಹೊಸಗನ್ನಡ ಕೋಗಿಲೆ ಮುದ್ದಣ – (24.01.1890 – 16.02.1901)

– ಇಂದಿರಾ ಕೃಷ್ಣಪ್ಪ

ನವ್ಯ ಕವಿ ಮುದ್ದಣನ ಮಾತು "ಕನ್ನಡಂ ಕಸ್ತೂರಿಯಲ್ತೆ; ಪದ್ಯ ವದ್ಯಂ, ಗದ್ಯ ಹೃದ್ಯಂ; ಹೃದ್ಯಮಪ್ಪ ಗದ್ಯದೊಳ್ ಪೇಳ್ವುದು" ಎಂದು ಜೀವನ ಸಂಗಾತಿ ಮನೋರಮೆಯೊಂದಿಗೆ "ಕನ್ನಡ – ಗದ್ಯ" ಸಾಹಿತ್ಯದ ಹಿರಿಮೆಯನ್ನು ಹಂಚಿಕೊಂಡ ಸರಸ ಸಂವಾದದ ಸುವರ್ಣ ಚೌಕಟ್ಟು ಮನಸ್ಸಿಗೆ ಮುದಕೊಡುತ್ತದೆ. ಉಡುಪಿಯ ನಂದಳಿಕೆಯ ಗ್ರಾಮದಲ್ಲಿ 1870ರ ಜನವರಿ 24ರಂದು ಜನಿಸಿದ ಮೂಲ ಲಕ್ಷ್ಮಿನಾರಾಯಣ ಹೆಸರಿನ ಮುದ್ದಣ ಕಾವ್ಯನಾಮದ ಕವಿಯ 150ನೇ ವರ್ಷಾಚರಣೆಯ ಸಂದರ್ಭದಲ್ಲಿ ಅವರ ಸ್ಮರಣೆ ನಮಗೆಲ್ಲಾ ಸ್ಫೂರ್ತಿದಾಯಕವಾಗಿದೆ. ಈತ ಓದುವುದರ ಜೊತೆಗೆ ತಂದೆ ತಮ್ಮಯ್ಯನೊಂದಿಗೆ, ನಂದಳಿಕೆಯ ಮಹಾಲಿಂಗೇಶ್ವರ ದೇವಾಲಯಕ್ಕೆ ಹೂವು ಕಟ್ಟಿಕೊಡುವ ಕೆಲಸ ಮಾಡಬೇಕಿತ್ತು. ಪ್ರಾಥಮಿಕ ವಿದ್ಯಾಭ್ಯಾಸದ ನಂತರ ಮನೆ ಕೂಲಿ ಕೆಲಸಕ್ಕೂ ಹೋಗಬೇಕಾಯಿತು. ಬಹಳ ಓದಬೇಕೆಂಬ ಆಸೆಯ ಮುದ್ದಣ್ಣ, ಉಡುಪಿಗೆ ಓಡಿಹೋಗಿ ವಾರಾನ್ನದ ಮನೆಯಲ್ಲಿ ಸೇರಿ ಮಾಧ್ಯಮಿಕ ಶಾಲೆ ಓದಿ ಮುಗಿಸಿದ. ಮುಂದಿನ ಓದಿಗೆ ದಾರಿ ಇಲ್ಲದಾಗ ಮುಖ್ಯೋಪಾಧ್ಯಾಯರ ಸಲಹೆಯಂತೆ, ಕನ್ನಡ ತರಬೇತಿ ಶಾಲೆಯಲ್ಲಿ ಎರಡು ವರ್ಷದ ತರಬೇತಿ ಪಡೆದ ಪರಿಚಿತರ ಸಲಹೆ ಮೇರೆಗೆ ಮದ್ರಾಸಿಗೆ ತೆರಳಿ ದೈಹಿಕ ಶಿಕ್ಷಕ ತರಬೇತಿ ಪಡೆದಿದ್ದರಿಂದ, ಸರ್ಕಾರಿ ಶಾಲೆಯ ವ್ಯಾಯಾಮ ಶಿಕ್ಷಕರ ಕೆಲಸ ದೊರೆಯಿತು. ಶಾಲೆಯ ಗ್ರಂಥಾಲಯದಲ್ಲಿನ ಓದು ಮಳಲಿ ಸುಬ್ಬರಾಯರ ಸಲಹೆ ಈತನನ್ನು ನಿರಂತರ ಓದುಗನಾಗಿಸಿತ್ತು.

ಇದರಿಂದಾಗಿ 1889–92ರಲ್ಲಿ 'ರತ್ನಾವತಿ ಕಲ್ಯಾಣ', 'ಕುಮಾರ ವಿಜಯ' ಎಂಬ 2 ಯಕ್ಷಗಾನ ಪ್ರಸಂಗಗಳನ್ನು ಬರೆದನು. ನಂತರ ಮಳಲಿ ಅವರ ಸಲಹೆ ಮೇರೆಗೆ "ಅದ್ಭುತ ರಾಮಾಯಣ" ಕೃತಿಯನ್ನು ಬರೆದನು. ಅದರ ಪ್ರಕಟಣೆಗೆ ಹಣವಿಲ್ಲದ್ದು, ಮತ್ತು ಪತ್ರಿಕೆಗಳಿಗೆ ಮತ್ತು ಮಾಸಿಕ ಸಂಚಿಕೆಗಳಿಗೆ ನಿಯತವಾಗಿ ಬರುವಂತೆ ಕಳುಹಿಸಲು ಸೂಚಿಸಿದ ಮೇರೆಗೆ 'ಕಾವ್ಯ ಮಂಜರಿ' ಎಂಬ ಪತ್ರಿಕೆಗೆ ಬರೆದು, ಕೃತಿಕಾರರ ಹೆಸರು ಗೊತ್ತಿಲ್ಲ. ಈ ಕೃತಿಯು ಸೂಕ್ತ ಅನಿಸಿದರೆ ಪ್ರಕಟಿಸಿ" ಎಂದು ಹಸ್ತಪ್ರತಿ ಕಳುಸಹಿಸಿದಾಗ ಕಾವ್ಯ ಮಂಜರಿ ಸಂಪಾದಕರಾದ ರಾಮಾನುಜೈಯ್ಯಂಗಾರರು "ಕೃತಿ ಅದ್ಭುತವಾಗಿದೆ. ಕರ್ತೃ ಯಾರೆಂದು ತಿಳಿಸಬೇಕೆಂದು" ಒತ್ತಾಯ ಮಾಡಿದಾಗ 'ತನಗೂ ಗೊತ್ತಿಲ್ಲ' ವೆಂಬ ಮಾರುತ್ತರ ಕೊಟ್ಟರು. ಕೃತಿಕಾರರ ಹೆಸರಿಲ್ಲದೆ "ಅದ್ಭುತ ರಾಮಾಯಣ" ಪ್ರಕಟವಾಯಿತು.

ನಂತರ ರಚಿಸಿದ "ಶ್ರೀ ರಾಮ ಪಟ್ಟಾಭಿಷೇಕ" ಕೃತಿಗೆ 'ಮಹಾಲಕ್ಷ್ಮಿ ವಿರಚಿತ ಎಂದು ಪ್ರಕಟಣೆಗೆ ಕಳುಹಿಸಿದರು. ತಾಯಿಯ ಹೆಸರನ್ನೇ ಇಟ್ಟಿದ್ದರೂ, ಸಂಪಾದಕರು ಅವರ ವಿವರವನ್ನು ಕೇಳಿದಾಗಲೂ, 'ನ'ಕಾರಾತ್ಮಕ ಉತ್ತರವನ್ನೇ ತಿಳಿಸಿದ್ದ. ನಂತರ 'ಚಕ್ರಧಾರಿ' ಎಂಬ ಕಾವ್ಯನಾಮದಿಂದ 'ಜೋಜೋ' ಎನ್ನುವ ವಿಚಾರಾತ್ಮಕ ಪ್ರಬಂಧವನ್ನು (ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದಂತೆ) ಬರೆದನು. ಮುಂದೆ ಇವರು 'ರಾಮಾಶ್ವಮೇಧ' ಕೃತಿಯನ್ನು 'ಮುದ್ದಣ' ಎಂಬ ಹೆಸರಿನಿಂದಲೇ ಬರೆದರು. ಆ ವೇಳೆಗೆ ಕಾವ್ಯ ಮಂಜರಿ ಸಂಪಾದಕರು 'ಕರ್ನಾಟಕ ಕಲಾನಿಧಿ' ಎಂಬ ಪತ್ರಿಕೆ ಪ್ರಾರಂಭಿಸಿದ್ದರು. 'ರಾಮಾಶ್ವಮೇಧ' ಕೃತಿಯನ್ನು ಪ್ರಕಟಣೆಗೆ ಅವರಿಗೆ ಕಳುಹಿಸಿದಾಗ, ಅವರು, ಹಿಂದಿನ ಮೂರು ಕೃತಿಗಳ ಶೈಲಿ, ವಿನ್ಯಾಸ ಪದಪ್ರಯೋಗಗಳಲ್ಲಿ ಸಾಮ್ಯತೆ ಇರುವುದರಿಂದ ಇವುಗಳನ್ನು ಒಬ್ಬರೇ ಬರೆದವರೆಂದೂ ಅದು ನೀವೇ ಇರಬಹುದೆಂದು ಪತ್ರ ಬರೆದರು. ಪತ್ರಕ್ಕೆ ಉತ್ತರ ಬರೆಯಲಿಲ್ಲ. ಆದರೂ 'ರಾಮಾಶ್ವಮೇಧ' ಪ್ರಕಟಣೆಗೆ ಸಿದ್ಧವಾಗತೊಡಗಿತು. ಮುದ್ದಣನ ತಂದೆ ತಾಯಿಯರು, ಶಿವಮೊಗ್ಗದ ಕಾಗೆಕೋಡುಮಗ್ಗಿ ಗ್ರಾಮದ 'ಕಮಲಳೊಂದಿಗೆ ಈತನ ವಿವಾಹ ಮಾಡಿದರು. ಹದಿಹರೆಯದ ಕಮಲ, ಒಡವೆ–ವಸ್ತ್ರಗಳಿಗೆ ಆಸೆ ಪಟ್ಟಾಗ ಅದನ್ನು ತೆಗೆದುಕೊಡಲಾಗದೆ, "ಎಳೆಯ ಹೆಂಡಿರ ಕೈಯಲ್ಲಿ ಸಿಕ್ಕು ನಲುಗುವ ಕವಿಗಳ ಬಾಳೇ ದೂಷ್ಯ" ಎಂದು ರಾಮಾಶ್ವಮೇಧದ ಕೃತಿಯಲ್ಲಿ ಅಸಹಾಯಕತೆ ತೋಡಿಕೊಂಡಿದ್ದಾರೆ. ಅಂದಿನ ಕಾಲದ ಕೆಮ್ಮು ಕಾಯಿಲೆ ಈತನಿಗೆ ಹತ್ತಿಕೊಂಡು, ಅದು ಕ್ಷಯ ರೋಗಕ್ಕೆ ತಿರುಗಿ, ಅತೀವ ಯಾತನೆಗೆ ಒಳಗಾದಾಗ ಚಿಕಿತ್ಸೆಗೂ ಹಣವಿಲ್ಲದೆ, ಹಸ್ತಪ್ರತಿಗಳನ್ನು ಶಿಷ್ಯ ರಾಜಗೋಪಾಲಕೃಷ್ಣನಿಗೆ ಕೊಡುತ್ತಾ "ನಿನಗೆ ತೋಚಿದಷ್ಟು ಹಣ ಕೊಡು" ಎಂದು ಬೇಡಿದ್ದರು. ಮಡದಿ ಮತ್ತು ಮಗ ರಾಧಾಕೃಷ್ಣ ನೋಡಲು ಬಂದಾಗ, ಅವರಿಗೆ ಈ ಕಾಯಿಲೆ ಅಂಟದಿರಲಿ ಎಂದು ಅವರನ್ನು ತವರಿಗೆ ಕಳುಹಿಸುತ್ತಾ "ನಾನು ಇವರನ್ನೂ ನೋಡುವುದು ಇದೇ ಕಡೆ ಬಾರಿಯೋ ಏನೋ" ಎಂದು ಮರುಗಿದ್ದನು, ಹಾಗೆಯೇ ಆಗಿತ್ತು. 1901ರ ಫೆಬ್ರವರಿ 16ರಂದು 31ರ ಹರೆಯದ ಮುದ್ದಣ ಕೊನೆಯುಸಿರೆಳೆದನು. ನಂತರ ಆತನ ಆಸ್ತಿಯೇ ಆಗಿದ್ದ ಹಸ್ತ ಪ್ರತಿಗಳು ಏನಾದವೋ ತಿಳಿಯಲಿಲ್ಲ. ಆತ ಗತಿಸಿದ 75 ವರ್ಷಗಳ ನಂತರ, ನಂದಳಿಕೆಯ ಬಾಲಚಂದ್ರರಾಯರು, 'ಮುದ್ದಣ ಸ್ಮಾರಕ ರೈತ ಸಂಘ'ವನ್ನು ಮುದ್ದಣ ಸ್ಮಾರಕ ಮಿತ್ರ ಮಂಡಳಿ ಎಂದು ಬದಲಾಯಿಸಿ ಆತನ ಹೆಸರನ್ನು ಚಿರಸ್ಥಾಯಿಗೊಳಿಸುವ ಪ್ರಯತ್ನದಲ್ಲಿ ತೊಡಗಿದರು. ಅಲ್ಲಿನ ಯುವಕರ ಪಡೆ ಇದಕ್ಕೆ ಸಜ್ಜುಗೊಂಡು ಮುದ್ದಣನ 125ನೇ ಜನ್ಮದಿನೋತ್ಸವವನ್ನು 1995ರಲ್ಲಿ ಸಂಸ್ಮರಣೆಯ ಶತಮಾನೋತ್ಸವವನ್ನು 2000ರಲ್ಲೂ ಆಚರಿಸಿದರು. ಮಿತ್ರಮಂಡಳಿಯ ಬೆಳ್ಳಿಹಬ್ಬದಂದು (2004) ನಂದಳಿಕೆಯ ನಂದನ ಪುಸ್ತಕ ಪ್ರಕಟಿಸಿದರು. ಪುತ್ತೂರಿನ ಕರ್ನಾಟಕ ಸಂಘ "ನಂದಿಳಿಕೆಯ ನಂದಾ ದೀಪಗಳು" ಕೃತಿಯನ್ನು 2000ರಲ್ಲಿ ಪ್ರಕಟಿಸಿತು. ಬೇಲೂರು ರಾಮಮೂರ್ತಿ ಅವರು "ಮಹಾಕವಿ ಮುದ್ದಣ" ಕೃತಿ ರಚಿಸಿದರು. ಉಡುಪಿಯ ಮುನ್ಸಿಪಾಲಿಟಿಯ ಮುಂದೆ 'ಮುದ್ದಣನ ಪುತ್ಥಳಿ' ಸ್ಥಾಪಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುದ್ದಣನ ಸಮಗ್ರ ಕಾವ್ಯವನ್ನು 'ಮುದ್ದಣ ಭಂಢಾರ' ಎಂದು ಪ್ರಕಟಿಸಿದೆ. 1969ರ ಜನ್ಮಶತಾಬ್ದಿಯಂದು ಸುಧಾ, ವಿಶ್ವಕರ್ನಾಟಕ ಪತ್ರಿಕೆಗಳು ಮುದ್ದಣನ ವಿಶೇಷಾಂಕಗಳನ್ನು ಪ್ರಕಟಿಸಿದವು. ಮೈಸೂರು ವಿಶ್ವವಿದ್ಯಾಲಯವು 'ಮುದ್ದಣ' ಎಂಬ ಕೃತಿಯನ್ನು ತ.ಸು. ಶಾಮರಾಯರಿಂದ ಬರೆಯಿಸಿ ಪ್ರಕಟಿಸಿದೆ. ಮುದ್ದಣನ ಹೆಸರಿನ 'ಅಂಚೆ ಲಕೋಟೆ', ಭಾರತೀಯ ಅಂಚೆ ಇಲಾಖೆ ಪ್ರಕಟಿಸಿದೆ. 1976ರಲ್ಲಿ 75ನೇ ಸಂಸ್ಮರಣೆಯಂದು ಸಾಹಿತ್ಯ ಕುಟೀರದಿಂದ 'ಮುದ್ದಣ ಪ್ರಶಸ್ತಿ' ಗ್ರಂಥವನ್ನೂ ವಿದ್ವಾನ್ ಟಿ. ಕೇಶವಭಟ್ಟ ಮತ್ತು ಕೆ.ಆರ್. ಗಣೇಶ್ ಅವರು ಸಂಪಾದಿಸಿದ್ದಾರೆ. ನಂದಳಿಕೆಯ ಮುದ್ದಣ ಸ್ಮಾರಕ ಭವನ, 1987ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ವತಿಯಿಂದ ನಿರ್ಮಾಣಗೊಂಡು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಡೆ ಅವರಿಂದ ಉದ್ಘಾಟನೆಗೊಂಡ ಸಮಾರಂಭದ ಅಧ್ಯಕ್ಷತೆಯನ್ನು ಕಡಲ ತೀರದ ಭಾರ್ಗವ ಶಿವರಾಮ ಕಾರಂತರು ವಹಿಸಿದ್ದರು. ಪರೋಪಕಾರಿ (Philantharpist) ಸೀತಮ್ಮ ಹೆಗ್ಡೆ ಅವರು ಸಭಾಂಗಣಕ್ಕೆ ಸ್ಥಳವನ್ನು ದಾನವಾಗಿ ನೀಡಿದ್ದರು. ಆಂಧ್ರಪ್ರದೇಶದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಕೃಷ್ಣರಾವ್ ಮತ್ತು ಮಕ್ಕಳು ನಂದಳಿಕೆಯಲ್ಲಿ ಆರು ಎಕರೆ ಭೂಮಿಯನ್ನು ಸರ್ಕಾರಕ್ಕೆ ಕೊಟ್ಟಿದ್ದು, ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಿಸಲಾಗಿದೆ. ಮುದ್ದಣ ಸ್ಮಾರಕ ಮಿತ್ರಮಂಡಳಿಯು, ಅಲ್ಲಿ ಉಳಿದ ಜಾಗದಲ್ಲಿ ಕ್ರೀಡಾ ತರಬೇತಿ ಕೇಂದ್ರ, ಕ್ರೀಡಾಂಗಣ ಮಾಡಲು ಒತ್ತಾಯಿಸುತ್ತಿದ್ದಾರೆ. ಮೂಡಬಿದರೆಯ ಕಾಂತವರ ಕನ್ನಡ ಸಂಘ, ಮುದ್ದಣ ಸಾಹಿತ್ಯ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡುತಿದ್ದಾರೆ. ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮುದ್ದಣನವರ ಹೆಸರಿನಲ್ಲಿ ಆಡಿಟೋರಿಯಂ ನಿರ್ಮಾಣಮಾಡಲಾಗಿದೆ. ಹೀಗಿದ್ದೂ ಜಿಲ್ಲಾಡಳಿತ, ಕವಿ ಮುದ್ದಣ ಸ್ಮಾರಕ ಭವನದ ಸಂರಕ್ಷಣೆಗೆ ನಿರ್ಲಕ್ಷ್ಯ ಮಾಡದೆ ಶೀಘ್ರ ಕ್ರಮವಹಿಸಬೇಕಾಗಿದೆ.

# ಉಪ್ಪಿನ ಸತ್ಯಾಗ್ರಹದೊಳಗಿನ ಸತ್ಯಾಗ್ರಹ

- ಇಂದಿರಾ ಕೃಷ್ಣಪ್ಪ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 'ಉಪ್ಪಿನ ಸತ್ಯಾಗ್ರಹ' ಅಥವ ದಾಂಡಿ ಮಾರ್ಚ್, ನಿರ್ಣಾಯಕವಾದ ಚಳುವಳಿಯಾಗಿದೆ. 1930ರ 12ನೇ ಮಾರ್ಚ್‌ರಂದು ಸಬರಮತಿ ಆಶ್ರಮದಿಂದ ಆರಂಭವಾಗಿ ಏಪ್ರಿಲ್ 6 ರಂದು ಅರಬ್ಬಿ ಸಮುದ್ರ ತೀರದ ದಾಂಡಿ ಎಂಬಲ್ಲಿ ಸಮುದ್ರದ ನೀರನ್ನು ತೆಗೆದು ಉಪ್ಪನ್ನು ತಯಾರಿಸುವುದು ಮತ್ತು ವಿತರಿಸುವುದರ ಮುಖಾಂತರ ಬ್ರಿಟಿಷರು ವಿಧಿಸಿದ್ದ ಉಪ್ಪಿನ ತೆರಿಗೆಯ ಕಾನೂನನ್ನು ಭಂಗ ಮಾಡುವುದಾಗಿತ್ತು.

## ಚಳುವಳಿಯ ಹಿನ್ನೆಲೆ

ಬ್ರಿಟಿಷ್ ಸರ್ಕಾರವು ಸಾಮಾನ್ಯ ಜನರು ಬಳಸುವ ಉಪ್ಪಿನ ಮೇಲೆ ಕರವನ್ನು ವಿಧಿಸಿ ಸರ್ಕಾರದ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿತ್ತು. ಇದು ಗಾಂಧಿ ಅವರ ಗಮನ ಸೆಳೆಯಿತು ಹಾಗೂ ಅವರು ಉಪ್ಪಿನ ಕರವನ್ನು ತಮ್ಮ ಅಹಿಂಸಾತ್ಮಕ ಚಳುವಳಿಯ ಭಾಗವಾಗಿ ಆಂದೋಲನ ನಡೆಸಲು ನಿರ್ಧರಿಸಿದರು. ಈ ತೆರಿಗೆಯನ್ವಯ ಬ್ರಿಟಿಷ್ ಸರ್ಕಾರದ ಹೊರತು ಯಾರೂ ಉಪ್ಪನ್ನು ತಯಾರಿಸುವಂತಿರಲಿಲ್ಲ. ಅಥವಾ ಮಾರುವಂತಿರಲಿಲ್ಲ. ಸಮುದ್ರ ತಟದಲ್ಲಿದ್ದ ನಾಗರಿಕರಿಗೆ ಸುಲಭವಾಗಿ ದೊರೆಯುವಂತಿದ್ದರೂ ಅವರು ಅದನ್ನು ಸರ್ಕಾರದಿಂದ ಕೊಂಡುಕೊಳ್ಳಬೇಕಾಗಿತ್ತು. ಇದಲ್ಲದೆ ಈ ತೆರಿಗೆಯು ಈ ಅತ್ಯವಶ್ಯಕ ಪದಾರ್ಥವನ್ನು ಜನಸಾಮಾನ್ಯರಿಗೆ ದುಬಾರಿಯನ್ನಾಗಿ ಮಾಡಿತ್ತು. ಹೀಗಾಗಿ ಈ ಕರದ ವಿರೋಧವು ಎಲ್ಲಾ ಧರ್ಮ, ವರ್ಗ ಮತ್ತು ಪ್ರಾಂತ್ಯದ




ದಾಂಡಿ ಸತ್ಯಾಗ್ರಹದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರೊಂದಿಗೆ ಸರೋಜಿನಿ ನಾಯ್ಡು



ಜನರನ್ನು ಹುರಿದುಂಬಿಸುವಂತಹದಾಗಿತ್ತು.

ಲಾಹೋರ್‌ನಲ್ಲಿ 1930ರಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಭಾರತದ ಸ್ವಾತಂತ್ರ್ಯ ಆಂದೋಲನವನ್ನು ನಿರ್ಣಾಯಕವಾಗಿ ಕೈಗೊಳ್ಳಬೇಕೆಂದೂ, ನೇತೃತ್ವವನ್ನು ಗಾಂಧಿ ಅವರು ವಹಿಸಬೇಕೆಂದು ತೀರ್ಮಾನಿಸಲಾಗಿತ್ತು. ಅದರಂತೆ 1930ರ ಜನವರಿ 26ನೇ ದಿನವನ್ನು ಸ್ವರಾಜ್ಯ ದಿನಾಚರಣೆಯಾಗಿ ಆಚರಿಸಲಾಯಿತು. ಮತ್ತು ಈ ಚಳುವಳಿಯನ್ನು ಗಾಂಧಿ ಅವರು ಹೇಗೆ ಮುಂದುವರೆಸುವರೆಂಬ ಬಗ್ಗೆ ಹೋರಾಟಗಾರರಿಗೂ ಮತ್ತು ಬ್ರಿಟಿಷರಿಗೂ ಆತಂಕವಿತ್ತು. ಗಾಂಧಿ ಅವರು, ಕಾರ್ಯಕರ್ತರನ್ನು ಆಶ್ರಮವಾಸಿಗಳನ್ನು ಹಾಗೂ ಜನರನ್ನು ಸತ್ಯ, ಅಹಿಂಸೆಯ ಮಾರ್ಗದಿಂದ "ಕಾನೂನು ಭಂಗ" ಮಾಡುವ ವಿಚಾರಗಳಲ್ಲಿ ತರಬೇತಿಗೊಳಿಸಿದರು. ಮತ್ತು ಸರ್ಕಾರ ಉಪ್ಪು ತೆರಿಗೆ ಪಾವತಿಸದವರನ್ನೂ, ಅನುಮತಿ ಇಲ್ಲದೆ ಉಪ್ಪು ತಯಾರಿಕೆ ಹಾಗೂ ಮಾರಾಟ ಮಾಡಿದವರಿಗೆ ಜೈಲು ಶಿಕ್ಷೆ ವಿಧಿಸಿದ್ದನ್ನು ಯಂಗ್ ಇಂಡಿಯಾ (ದಿ.06.03.1930)ದಲ್ಲಿ ಬರೆದರು. ಅಂದಿನ ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರಿಗೆ 02.03.1930ರಂದು ಬರೆದ ಪತ್ರದಲ್ಲಿ "ಎಲ್ಲರ ಆಹಾರದಲ್ಲಿ ಉಪ್ಪು ತೀರಾ ಅವಶ್ಯಕ, ಅದರ ಮೇಲೆ ಕರ ವಿಧಿಸುವುದರಿಂದ ಬಡಜನರಿಗೆ ತುಂಬಾ ಕಷ್ಟವಾಗುತ್ತದೆ. ಈ ತೆರಿಗೆಯನ್ನು ತೆಗೆದುಹಾಕಬೇಕು, ಯಾವ ಅಪಾಯಕರ ಕಾರ್ಯವನ್ನು ಕೈಗೊಳ್ಳಲು ಅನೇಕ ವರ್ಷಗಳಿಂದ ನಾನು ಹಿಂಜರಿಯುತ್ತಿದ್ದೇನೋ, ಅಂಥಹ ಸವಿನಯ ಕಾನೂನುಭಂಗ ಚಳುವಳಿಯನ್ನು



ಪ್ರಾರಂಭಿಸುವ ಮುನ್ನ, ನಿಮ್ಮ ಹತ್ತಿರ ಮನಸಾರೆ ಮಾರ್ಗ ವೈಷಣ ಮಾಡಬಯಸುತ್ತೇನೆ. ಇದಕ್ಕೆ ಸಾಧ್ಯವಾಗದಿದ್ದರೆ ಈ ತಿಂಗಳ 11ನೇ ದಿನದಲ್ಲಿ ಆಶ್ರಮದ ಸಹಪಾಠಿಗಳನ್ನು ಕರೆದುಕೊಂಡು ಉಪ್ಪಿನ ಶಾಸನ ವಿಧಿಯನ್ನು ಮುರಿಯಲು ಹೊರಡುವೆನು. ನನ್ನ ಉದ್ದೇಶ ಕೈಗೂಡದಂತೆ ಭಂಗ ಪಡಿಸಲು ನನ್ನನ್ನು ದಸ್ತಗಿರಿ ಮಾಡುವುದು ತಮ್ಮ ಕೈಯಲ್ಲಿದೆ ಎಂದು ನಾನು ಬಲ್ಲೆ. ನನ್ನ ತರುವಾಯ ಈ ಸತ್ಯಾಗ್ರಹವನ್ನು ಶಿಸ್ತಿನಿಂದ ಮುಂದುವರೆಸಲು ಸಹಸ್ರಾರು ಜನರು ಸಿದ್ಧರಾಗಿದ್ದಾರೆಂದು ಆಶಿಸಿದ್ದೇನೆ." ಎಂದು ತಿಳಿಸಿದರು ಈ ಪತ್ರಕ್ಕೆ ಉತ್ತರ ಬಾರದ್ದನ್ನು ಕಂಡು "ಮೊಳಕಾಲು ಊರಿ, ರೊಟ್ಟಿ ಬೇಡಿದರೆ ದೊರತದ್ದು ಕಲ್ಲು" ಎಂದು ಪತ್ರಿಕೆಯಲ್ಲಿ ಬರೆದರು. ದಾಂಡಿಯಾತ್ರೆಯ ಮಾರ್ಗ ಮತ್ತು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ತಂಡಗಳನ್ನು ನಿಗದಿಪಡಿಸಿದರು. ಒಟ್ಟು 79 ಜನರ ಈ ತಂಡದಲ್ಲಿ ಕರ್ನಾಟಕದಿಂದ ಮೈಲಾರ ಮಹಾದೇವ ಅವರೂ ಇದ್ದರು. ಒಟ್ಟು 25 ದಿನಗಳ ಈ ಯಾತ್ರೆಯಲ್ಲಿ 241 ಮೈಲಿ ದೂರ ಕ್ರಮಿಸಿ 26ನೇ ದಿನ ಅಂದರೆ ಏಪ್ರಿಲ್ 6ರಂದು ದಾಂಡಿಯಲ್ಲಿ ಉಪ್ಪಿನ ಕಾನೂನನ್ನು ಭಂಗಗೊಳಿಸುವುದೆಂದು ನಿರ್ಣಯಿಸಲಾಯಿತು. ಪ್ರತಿ ದಿನ 10.ಕಿ.ಮೀ. ನಡಿಗೆ, ಗ್ರಾಮ ವಾಸ್ತವ್ಯ, ಶಿಬಿರ ಪ್ರಾರ್ಥನೆ, ಜನರಿಗೆ ತಿಳುವಳಿಕೆ, ಸ್ವಚ್ಛತೆ, ಶಿಕ್ಷಣ, ವಾರಕ್ಕೊಮ್ಮೆ ವಿಶ್ರಾಂತಿ, ಇವು ಯಾತ್ರೆಯ ದಿನಚರಿಯಾಗಿ ನಿಗದಿಯಾಯಿತು.


## ಯಾತ್ರೆ ಮತ್ತು ಚಳುವಳಿ

ಈ ವಿಚಾರ, ದೇಶ ವಿದೇಶದ ಪತ್ರಿಕೆಗಳಲ್ಲಿ ಬಹು ಚರ್ಚಿತ ಸುದ್ದಿಯಾಯಿತು. ಅಮೇರಿಕಾದ ಪತ್ರಿಕಾ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆಗೆ ಗಾಂಧಿ ಅವರು "**I want world sympathy in the battle of right, against might**" ಎಂದುತ್ತರಿಸಿದ್ದರು. ಈ ಸತ್ಯಾಗ್ರಹದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಇಲ್ಲವೆಂದು ಅವರು ರಚನಾತ್ಮಕ ಕಾರ್ಯಗಳು ಮತ್ತು ವಿದೇಶಿ ವಸ್ತ್ರ ಬಹಿಷ್ಕಾರ, ಸಾರಾಯಿ ನಿಷೇಧದಲ್ಲಿ ತೊಡಗಬೇಕೆಂದು ನಿರ್ಣಯಿಸಲಾಗಿತ್ತು. ಆದರೆ ಈ ನಿರ್ಣಯವನ್ನು ಪ್ರಶ್ನಿಸಿ ಖುರ್ಷಿದಾ ಬೆಹನ್ (ದಾದಾಬಾಯಿ ನವರೋಜಿ ಅವರ ಮೊಮ್ಮಗಳು) ಗಾಂಧಿ ಅವರಿಗೆ ಪತ್ರ ಬರೆದು "ಮಹಿಳೆಯರಿಗೇಕೆ ಉಪ್ಪಿನ ಸತ್ಯಾಗ್ರಹದಲ್ಲಿ ಸೇರಲು ನಿರ್ಬಂಧಿಸುತ್ತಿದ್ದೀರಿ" ಎಂದು ಕೇಳಿದರು. ಮಾರ್ಗರೇಟ್



ಕಸಿನ್ಸ್ ಅವರು, "ಸ್ತ್ರೀ ಧರ್ಮ" ಪತ್ರಿಕೆಯಲ್ಲಿ ಲೇಖನ ಬರೆದು, ಈ ನಿರ್ಬಂಧವನ್ನು ವಿರೋಧಿಸಿದರು. ಮತ್ತು ಇಂಡಿಯಾದಲ್ಲಿ ನಡೆಯುವ ಯಾವುದೇ ಸಮಾವೇಶ, ಸಭೆ ಸಮಾರಂಭ, ಸತ್ಯಾಗ್ರಹಗಳು ಮಹಿಳೆಯರಿಲ್ಲದೆ ನಡೆಸಬಾರದೆಂದು ತಾಕೀತು ಮಾಡುತ್ತಾ, ಮಹಿಳೆಯರಿಗೆ ನಿರ್ಬಂಧ ವಿಧಿಸುವಂತಿಲ್ಲ ಎಂದು ಧ್ವನಿ ಎತ್ತಿದ್ದರು. ದುರ್ಗಾಬಾಯಿ ದೇಶ್‌ಮುಖ್ ಅವರೂ "ಮಹಿಳೆಯರಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಲು ಅವಕಾಶ ಮಾಡಲೇಬೇಕೆಂದು" ಆಗ್ರಹಿಸಿದರು. ಕಮಲಾದೇವಿ ಚಟ್ಟೋಪಾಧ್ಯಾಯ ಅವರು "ಮಹಿಳೆಯರನ್ನು ದೇಶದ ಅತ್ಯುನ್ನತ ಧ್ಯೇಯಕ್ಕಾಗಿ ಒಗ್ಗೂಡಲು ಕರೆಕೊಟ್ಟು, ಗಾಂಧಿ ಅವರ ಮಾತಿನಂತೆ ನಾವೆಲ್ಲರೂ ಸಂಘಟಿತರಾಗಿ ಸನ್ನದ್ಧರಾಗಿರುವಾಗ, ಅವರನ್ನು ಈ ಸತ್ಯಾಗ್ರಹದಿಂದ ಹೊರಗಿಡುವುದು, ಬೇರೆ ಕೆಲಸ ನಿರ್ವಹಿಸಲು ತಿಳಿಸುವುದು ಸರಿಯಲ್ಲ" ಇದರಿಂದ ಯುವತಿಯರ ಮನಸ್ಸುಗಳು ಕುದಿಯುತ್ತಿರುವುದನ್ನು ಮನಗಂಡು, ಗಾಂಧಿ ಅವರನ್ನು ದಾಂಡಿಯಾತ್ರೆಯ ಮಾರ್ಗಮಧ್ಯದಲ್ಲಿ 'ಜಂಬ್‌ಸಾರ್'ನಲ್ಲಿ ಭೇಟಿಯಾಗಿ ಪರಿಸ್ಥಿತಿಯನ್ನು ಗಂಭೀರವಾಗಿ ಮಂಡಿಸಿದರು. ಅಲ್ಲಿ ಜನರೊಂದಿಗೆ ಸತ್ಯಾಗ್ರಹದ ವಿಚಾರವನ್ನು ತಿಳಿಸುತ್ತಿದ್ದ ಗಾಂಧಿ ಅವರನ್ನು ಭೇಟಿ ಆಗಿ "ಮಹಿಳೆಯರನ್ನು ಏಕೆ ಸತ್ಯಾಗ್ರಹದಲ್ಲಿ ಸೇರಿಸಲಿಲ್ಲ, ಅವರೂ ಪರೋಕ್ಷ ಚಳುವಳಿಯಲ್ಲಿ ಮಾತ್ರವಲ್ಲದೆ ಪ್ರತ್ಯಕ್ಷ ಚಳುವಳಿಯಲ್ಲೂ ಏಕೆ ಭಾಗವಹಿಸಬಾರದೆಂದು" ಕಠಿಣವಾಗಿಯೇ ಕೇಳಿದ್ದರು. ಮಾತುಕತೆಯ ನಂತರ, "ಮಹಿಳೆಯರೂ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಬಹುದೆಂದು, ಈ ಕೂಡಲೇ ಗಾಂಧಿ ಅವರೂ ಮಹಿಳೆಯರಿಗೆ ಕರೆಕೊಡಬೇಕೆಂದೂ, ಕಮಲಾ ಅವರು ಸಂದೇಶಗಳನ್ನು ಹೊತ್ತು ಸಾಗಬೇಕೆಂದು" ನಿರ್ಣಯವಾಯಿತು.


ಮುಂದುವರಿಯುವುದು.....




## ಶ್ರೀ ನಾರಾಯಣ ರೆಡ್ಡಿ ಸ್ಮರಣೆಯ ನುಡಿ ನಮನ

"ನಾವು ಈ ಧಾರಿಣಿಯ ಸೇವಕರಾಗಿ ದುಡಿಯಬೇಕು. ಭೂಮಿಯ ಮಾಲೀಕರೆಂಬ ಅಹಂನಿಂದ ದುಡಿಯಬಾರದು" ಎಂಬ ಭೂಮಿತಾಯಿಯ ವಿನಮ್ರ ಸೇವಕರಂತೆ ದುಡಿದು ಸಾವಯವ ಕೃಷಿಯ ದ್ರೋಣರಾಗಿದ್ದ, ನಾರಾಯಣರೆಡ್ಡಿ ಅವರು ನಮ್ಮನಗಲಿ ಒಂದು ವರ್ಷ ಗತಿಸಿದೆ. ನಾಡೋಜ ನಾರಾಯಣ ರೆಡ್ಡಿ ಅವರು 'ದಿನಕ್ಕೊಂದು ಗಿಡ ನೆಡುವ', ನೆಟ್ಟ ಗಿಡಗಳ ಸಂಖ್ಯೆ ಹೇಳುವ, ಗಿಡಗಳನ್ನು ತಾಯಿಯಂತೆ ಪೂಜಿಸುವ, ಮನೆಮಂದಿಯೆಲ್ಲಾ ಈ ತತ್ವ ಪಾಲಿಸುವಂತೆ ಮಾಡಿದವರು. ಕೃಷಿ ಸಂತರಾಗಿದ್ದಾರೆ, ಗಾಂಧಿ ಭವನಕ್ಕೆ ಇವರು ಸದಸ್ಯರಾಗಿದ್ದು, ಗಾಂಧಿ ಭವನದ ಗೌರವವನ್ನು ಹಿರಿದಾಗಿಸಿದಂತಾಗಿತ್ತು. ಗಾಂಧಿ ಭವನದ ಒಂದು ಕಾರ್ಯಕ್ರಮದಲ್ಲಿ ಕೃಷಿ ಬಗ್ಗೆ ಮಾತನಾಡುತ್ತ, "ರೈತರು ಬೆಳೆ ಬೆಳಿ ಬಾರ್ದು, ಮಣ್ಣು ಬೆಳೆಯ ಬೇಕು. ಬೆಳೆ ತೆಗಿಯೋದು ಮಣ್ಣಿನಿಂದ, ಮಣ್ಣಿನಲ್ಲಿ ಜೀವಾಣು ಚೆನ್ನಾಗಿದ್ದರೆ, ಬೆಳೆಯೂ ಚೆನ್ನಾಗಿರುತ್ತೆ. ಮಣ್ಣಿನಲ್ಲಿ ಮೂರು ಅಂಶ ಕಡ್ಡಾಯವಾಗಬೇಕು. ಅದು "ಸಾವಯವ, ತೇವಾಂಶ, ಜೀವಾಂಶ", ಎಂದು ವಿವರಿಸಿದ್ದರು. ಜಪಾನಿನ ರೈತ "ಪುಕವೋಕನ" ಸಿದ್ಧಾಂತಗಳನ್ನೂ, ಕೃಷಿ ಅನುಭವಗಳನ್ನು ಆಧರಿಸಿ, ಕನ್ನಡದ ನೆಲದಲ್ಲಿ ಸಾವಯುವ ಕೃಷಿಯ ನೇಗಿಲ ಯೋಗಿಯಾದವರು ರೆಡ್ಡಿ ಅವರಾಗಿದ್ದಾರೆ. ಜೀವನದಲ್ಲಿ ಒಂದು ಬಾರಿ ಪುಕವೋಕರನ್ನು ನೋಡಬೇಕೆಂಬ ಹಂಬಲಹೊತ್ತ ಇವರನ್ನು ಕಾಣಲು ಅವರೇ ಬರುವಂಥಹ ಸಂದರ್ಭವೂ ಒದಗಿತ್ತು. ಪರಂಪರೆಯ ಕೃಷಿ ವಿಧಾನಗಳು ಮತ್ತು ಸರ್ಕಾರದ ಹೇಳಿದ ಎಲ್ಲಾ ವಿಧಾನಗಳನ್ನು ಅನುಸರಿಸಿದಾಗಲೂ ಮಣ್ಣಿನ ಫಲವತ್ತತೆ ಹೆಚ್ಚಾಗದೆ ಇದ್ದುದ್ದರ ಬಗ್ಗೆ ಇವರು ಚಿಂತಿಸಿ, ಮಣ್ಣನ್ನು ಫಲವತ್ತು ಮಾಡುವ ಬಗ್ಗೆ ಹೆಚ್ಚು ನಿಗಾವಹಿಸಿದರು. ಮಣ್ಣಿನ ಜೀವಾಣು ಸಶಕ್ತವಾಗಿದ್ದರೆ, ಮಣ್ಣ ಮೇಲಿನ ಜೀವಾಣುಗಳು ಸಬಲವಾಗಿರುತ್ತವೆ ಎಂದು ಹೇಳುತ್ತಿದ್ದರು. ಅವರ ಜಮೀನಿನಲ್ಲಿ ರಾಗಿ ಬೆಳೆ ಜೊತೆಗೆ ಸಮೃದ್ಧವಾದ ವೃಕ್ಷ ಸಂಪತ್ತು, ಜಾನುವಾರುಗಳೂ ಇದ್ದವು. ದೊಡ್ಡಬಳ್ಳಾಪುರದ ಮರೇನಹಳ್ಳಿಯ ನಾಲ್ಕು ಎಕರೆ ಜಮೀನು ಇವರ ಕರ್ಮಭೂಮಿ. ಅವರ ಈ ಭೂಮಾಯ್ತಿಯನ್ನು ನೋಡಲು, ಪುಟ್ಟ ಮಕ್ಕಳಿಂದ ಹಿಡಿದು ಕೃಷಿ ತಜ್ಞರು, ರೈತರು, ಸರ್ಕಾರದ ಅಧಿಕಾರಿಗಳು ಮತ್ತು ವಿಶ್ವವಿದ್ಯಾಲಯ ಹಾಗೂ ದೇಶ ವಿದೇಶದ ಜನರು ಬರುತ್ತಿದ್ದರು. ಎಲ್ಲರನ್ನೂ ಸಂತಸದಿಂದ ಬರಮಾಡಿಕೊಳ್ಳುತ್ತಾ, ಅವರು "ಸಾವಯವ ಕೃಷಿಯಂತೆ, ಸಾವಯವ ಬದುಕಾಗ ಬೇಕೆಂದು", ಅವರ ಕೃಷಿಪಥವನ್ನು, ಪ್ರಯೋಗಗಳನ್ನು ಬಹು ಅಕ್ಕರೆಯಿಂದ ತಿಳಿಸಿಕೊಡುತ್ತಿದ್ದರು. ಸರ್ಕಾರ ಇವರಿಗೆ 'ಪ್ರಗತಿಪರ ರೈತ', ಹಾಗೂ 'ಕೃಷಿ ತಜ್ಞ'ರೆಂಬ ರಾಷ್ಟ್ರ ಪುರಸ್ಕಾರವನ್ನು ಪ್ರಧಾನ ಮಾಡಿದೆ.

ದಣಿವರಿಯದ ಕೃಷಿಕ ನಾರಾಯಣ ಅವರು 84 ವರ್ಷ ವಯಸ್ಸಾಗಿದ್ದರೂ "ನೀವು ನನಗೆ ಬರಡು ನೆಲವನ್ನೇ ಕೊಡಿ, ಇನ್ನು 5 ವರ್ಷಗಳಲ್ಲಿ ಅಲ್ಲಿ ಸಮೃದ್ಧ ಬೆಳೆ ಬೆಳೆದು ತೋರಿಸುತ್ತೀನಿ ಅಂತ" ಸಾವಲುಗಳನ್ನೆಸುಯುತ್ತಿದ್ದ ಕಾಯಕಜೀವಿಯನ್ನು ಮತ್ತೆಲ್ಲಿ ಕಾಣುವುದು? "ಕೃಷಿ ನಾಶವೆಂದರೆ ದೇಶವೇ ನಾಶ" ಎಂಬ ಜೀವನ ಸಿದ್ಧಾಂತದೊಂದಿಗೆ ಬದುಕಿದ ನಾರಾಯಣರೆಡ್ಡಿ ಅವರ ಜೀವನ ಚರಿತ್ರೆಯನ್ನಾಧರಿಸಿದ 'ನೆಲದೊಡಲ ಚಿಗುರು'ಎಂಬ ಕೃತಿ 2013ರಲ್ಲಿ ಪ್ರಕಟವಾಗಿದೆ.




# KASTURBA

*- Usha Dhidhi*

*continued from the previous edition...*

Ba was particular about cleanliness. The brass pots and pans used in the kitchen had to be clean and shiny, if not so, the ashramites had to clean them again.

Ba was a very simple person by nature. Once she asked Bapu, "Why do you demand the Englishmen to leave India? Our nation is very large. Everyone can be accommodated." Bapu answered, "I do not want to sever the relationship with the Englishmen, but I want to change it. They can continue to live here, but not as our rulers, but as our fellow countrymen. Ba agreed to this answer and said, "You are right and they can continue to stay here as our fellow countrymen."

Once, Sarojini Naidu asked Gandhiji, "Who do you feel is the most beautiful woman?" Gandhiji answered, "Undoubtedly, it is Kasturba." Sarojini Naidu mentioned this to Ba. Very spontaneously Kasturba said, "Bapu never lies." William Fisher, a reporter of Life magazine wrote, "Among all the beautiful woman that I have seen in my life, Kasturba was the most beautiful. Her face emanated the radiance of the spirit of devotion and dedication."

Ba was a very resolute person. During incarceration and sickness, in spite of the danger of losing her life, she followed her rules diligently. When she was seriously ill, doctors felt that including meat soup in her diet alone would save her life. The doctors asked Gandhiji's permission for it. Gandhiji said, "If it is acceptable to her, you can give it to her." Ba deeply believed in Hindu religion. How could she agree to this? She said, "Human life is a rare gift. I do not want to make my body impure. I would rather accept death."



When Kasturba was sent to jail, the food in the jail was not suitable for her. She requested for fruits. Nobody paid attention to her request. Then she fasted for 3-4 days. On the fifth day, her request was granted. But the amount of fruits that was provided was insufficient. But she remained firm in her decision not to eat the food provided in the jail. And somehow she managed with whatever she got. When she was released after three months, she was very weak and emaciated.

Ba was not well educated, but being a Hindu woman she wanted to learn Githa and Ramayana. Bapu told Vinoba that Kasturba wanted to learn Githa and asked him whether he would be willing to spend daily 15-20 minutes to teach her. Vinoba agreed and said, "I will spend 24 minutes every day to teach her the 12th chapter of Githa." Gandhiji wanted to know why Vinoba had chosen the 12th chapter of Githa. Vinoba replied, "Ba's mind should not be burdened with various names and deep philosophical thoughts. The 12th chapter is about devotion and it is easy to understand."

*to be continued ....*

## ಪ್ರಾಚೀನ ಕರ್ನಾಟಕದ ಗಣಿತಜ್ಞರು

**2ನೇ ಬಾಸ್ಕರಾಚಾರ್ಯ** : ಈತನ 'ಸಿದ್ಧಾಂತ ಶಿರೋಮಣಿ' ಒಂದು ಬೃಹತ್ ಗ್ರಂಥವಾಗಿದ್ದು, ಅದರಲ್ಲಿ ನಾಲ್ಕು ಭಾಗಗಳಿವೆ. ಪಾಟೀ ಗಣಿತ (ಅಂಕ ಗಣಿತ), ಬೀಜ ಗಣಿತ, ಗ್ರಹ ಗಣಿತ ಮತ್ತು ಗೋಲಾಧ್ಯಾಯ. ಈ ನಾಲ್ಕು ಭಾಗಗಳ ಪೈಕಿ ಮೊದಲನೆಯದಾದ ಪಾಟೀ ಗಣಿತಕ್ಕೆ "ಲೀಲಾವತಿ" ಎಂದು ಹೆಸರು.

**ರಾಜಾದಿತ್ಯ** : ಈತನು 'ಅಂಕ ಗಣಿಗ ಶ್ರೇಡಿ' ವಿಷಯಕ್ಕೆ ಸಂಬಂದಿಸಿದಂತೆ ಹಲವಾರು ಲೇಖನಗಳನ್ನು ಬರೆದಿದ್ದಾನೆ. ಮುಖ್ಯವಾಗಿ ಈ ಕೃತಿಯಿಂದ ಆಗ ಬಳಕೆಯಲ್ಲಿದ್ದ ಗಣಿತ ವಿಧಾನ ಮಾತ್ರವಲ್ಲದೆ ಆಗಿನ ಸಾಮಾಜಿಕ ಪರಿಸ್ಥಿತಿ, ಪಾರಿಭಾಷಿಕ ಪದಗಳು, ಕನ್ನಡ ಭಾಷೆಯ ಸೊಗಡಿನ ಬಗ್ಗೆ ಪರಿಚಯಿಸುತ್ತದೆ.

**ತಿಮ್ಮರಸ** : ಶ್ರೀವತ್ಸ ಗೋತ್ರದ ಗಣಿತಜ್ಞನಾದ ಈತನು 'ಕ್ಷೇತ್ರ ಗಣಿತ' ಎಂಬ ಗ್ರಂಥವನ್ನು ಕನ್ನಡ ಪದ್ಯ ರೂಪದಲ್ಲಿ ರಚಿಸಿದ್ದಾನೆ. ಇದರಲ್ಲಿ ಅನೇಕ ಟೀಕೆ, ಟಿಪ್ಪಣಿಗಳು ಅಡಕವಾಗಿವೆ.

**ಮಹಾವೀರಾಚಾರ್ಯ** : ಖ್ಯಾತ ಗಣಿತಜ್ಞನಾದ ಈತನು ನೃಪತುಂಗ ಮಹಾರಾಜನ ಆಶ್ರಯದಲ್ಲಿ ಬಾಳಿ ಗಣಿತ ಶಾಸ್ತ್ರವನ್ನು ಬೆಳಗಿಸಿ, ಬಹಳ ಜನಪ್ರಿಯಗೊಳಿಸಿದನು.ಈತನ 'ಗಣಿತ ಸಾರ ಸಂಗ್ರಹ' ಎಂಬ ಸಂಸ್ಕೃತ ಗ್ರಂಥವು ದಕ್ಷಿಣ ಭಾರತದಲ್ಲಿ ಬಹಳ ಜನಪ್ರಿಯತೆಯನ್ನು ಪಡೆದಿತ್ತು.

# ನವ ಭಾರತ ನಿರ್ಮಾಪಕರು

- ರುದ್ರಪ್ಪ ಹನಗವಾಡಿ

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

## Ram Manohara Lohiya

Ram Manohar Lohiya (23 March 1910 – 12 October 1967) was an activist in the Indian independence movement and a socialist political leader. During the last phase of British rule in India, he worked with the Congress Radio which broadcast secretly from various places in Bombay until 1942. Lohiya lost to Nehru in 1962 general election, but entered Lok Sabha in 1963 by winning a by-poll.

Ram Manohar Lohiya was born on 23 March 1910 at Akbarpur, currently part of the state of Uttar Pradesh. His mother died in 1912, when he was just two years, and he was brought up by his father Hiralal who never remarried. In 1918 he accompanied his father to Bombay where he completed his high school education. He attended the Banaras Hindu University to complete his intermediate course. After standing first in matriculation in 1927, he then joined the Vidyasagar College, of Calcutta and in 1929, completed B.A. He decided to visit Frederick William University (today's Humboldt University of Berlin, Germany) prestigious educational institute in Britain to convey his view of British philosophy. He soon learnt German and received financial assistance based on his outstanding academic performance, studying national economy as his major subject as a doctoral student from 1929 to 1933. Lohiya wrote his Ph.D. thesis on the topic "Salt Taxation in India, focusing on Gandhi's socio-economic theory."

## National Movement

Lohiya was one of the founder of the Congress Socialist Party and editor of its mouthpiece "Congress Socialist." In 1936, he was selected by Jawaharlal Nehru as the secretary of the Foreign Affairs of the All India Congress Committee (A.I.C.C), he quit that responsibility in 1938, Lohiya started his own political standpoint by critically analysing the Gandhian leadership of the Congress and the Communists who poured into CSP. In June 1940, he was arrested and sentenced to jail term of two years for delivering anti-war speeches. After his release in 1941, Lohiya became one of the leading figure of the central committee which tried to organise the Quit India revolt, sparked by Gandhi in August 1942. He was again captured in May 1944 and tortured in Lahore Fort, high security prisonars, Lohia, together with Jayaprakash Narayan, was finally released on 11th April 1946.

## Political Career

As a member of the Congress Socialist Party Lohiya joined with that party when he left Congress. He remained a member of the Socialist Party when it fused in 1952 with the Kisan Majdoor Praja Party to form the Praja Socialist Party. Unhappy with the new party Lohiya led a split from it to reform the Socialist Party (Lohia) in 1956. He lost general election in 1962. In 1963 Lohiya became a member of the Lok Sabha after a by-election in Farrukhabad (Lok Sabha constituency). And in 1965 he merged the Socialist Party (Lohia) into the Samyukta Socialist Party. The two socialist fractions merged, split and re-merged several times. He won Lok Sabha general election of 1967 from Kannauj Lok Sabha constituency.


## Major writings in English

The Caste system, , Marx Gandhi and Socialism Guilty men of India's partition, Intervel during Politics, Language



ಯಶಸ್ಸಿನ ಕಥೆಗಳನ್ನು ಓದಬೇಡಿ, ಅಲ್ಲಿ ನಿಮಗೆ ಸಂದೇಶಗಳಷ್ಟೇ ಸಿಗುತ್ತವೆ. ಸೋಲಿನ ಕತೆಗಳನ್ನು ಓದಿ, ಅವುಗಳಲ್ಲಿ ಯಶಸ್ಸನ್ನು ಗಳಿಸಲು ಬೇಕಾದ ಉಪಾಯಗಳು ಸಿಗುತ್ತವೆ.

- ಡಾ. ಎ.ಪಿ.ಜೆ. ಅಬ್ದುಲ್ ಕಲಾಂ






## ಸ್ವಾತಂತ್ರ್ಯ ಹೋರಾಟಗಾರ – ಗಾಂಧಿ ನಿಕಟವರ್ತಿ – ಚತುರ್ವೇದಿ

ಶತಾಯುಷಿ ಗಾಂಧಿ ನಿಕಟವರ್ತಿ ಸುಧಾಕರ ಚತುರ್ವೇದಿ ಅವರು ದಿ. 21.02.2020ರಂದು ನಮ್ಮನ್ನಗಲಿದ್ದಾರೆ. ಬೆಂಗಳೂರಿನ ನಿವಾಸಿಯಾಗಿದ್ದ ಸುಧಾಕರ್ ಅವರು, ಬಾಲಕನಾಗಿದ್ದಾಗಲೇ (13ನೇ ವಯಸ್ಸಿನಲ್ಲಿ) ಗುರುಕುಲದಲ್ಲಿ ಶಿಕ್ಷಣ ಪಡೆಯಲು ಹರಿದ್ವಾರಕ್ಕೆ ತೆರಳಿದ್ದರು. ಸ್ವಾಮಿ ಶ್ರದ್ಧಾನಂದರ ಶಿಷ್ಯರಾಗಿ – ಭಾರತ ಕಟ್ಟುವ ಕೆಲಸದಲ್ಲಿ ತೊಡಗಿಕೊಂಡರು. "ಅಳುತ್ತಾ ನಿನ್ನ ಬಾಗಿಲಿಗೆ ಬರುವವರನ್ನು ನಗುವಂತೆ ಮಾಡಿ ಕಳುಹಿಸು" ಎಂಬ ಗುರುವಾಕ್ಯವನ್ನು ಅಕ್ಷರಶಃ ಪಾಲಿಸಿದರು. ಗಾಂಧಿ ಅವರ ಸಖ್ಯದ ನಂತರ ಅವರಿಂದ "ಕರ್ನಾಟಕೀ" ಎಂದು ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಿದ್ದರು. ಮೂಢನಂಬಿಕೆ, ಜಾತಿಭೇದವನ್ನೂ, ಅಸ್ಪೃಶ್ಯತೆಯನ್ನು ಖಂಡಿಸುತ್ತಾ ವೈಚಾರಿಕತೆಯನ್ನು ಪ್ರಚಾರ ಮಾಡುತ್ತಿದ್ದರು. ಗಾಂದಿ ಅವರಿಗೆ ಕನ್ನಡದಲ್ಲಿ ಸಹಿ ಮಾಡಲು ಮತ್ತು ಕೆಲವು ಕನ್ನಡ ಪದಗಳ ಉಚ್ಛಾರಣೆಯನ್ನು ಹೇಳಿಕೊಟ್ಟಿದ್ದರು. ಜಲಿಯನ್‌ವಾಲ್ ಬಾಗ್ ಹತ್ಯಾಕಾಂಡದಲ್ಲಿ ಮಡಿದ ಸಾವಿರಾರು ಜನರ ಅಂತ್ಯ ಸಂಸ್ಕಾರವನ್ನು ನಡೆಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ 12 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿಯನ್ನು ನಯವಾಗಿ ನಿರಾಕರಿಸುತ್ತಾ "ದೇಶ ಸೇವೆಗೆ ಕೂಲಿ ಬೇಕೇ?" ಎಂದಿದ್ದರು.

ಇಪ್ಪತ್ತೆಂಟನೇ ವಯಸ್ಸಿಗೆ 4 ವೇದಗಳ ವಿದ್ವತ್ ಪಡೆದು ಇವರ "ಚತುರ್ವೇದಿ" ಎಂಬ ವಂಶ ನಾಮವನ್ನು ಅನ್ವರ್ಥಗೊಳಿಸಿದ್ದರು. ಲಾಹೋರ್ ವಿಶ್ವವಿದ್ಯಾಲಯದಲ್ಲಿ ಅಲ್ಪಾವಧಿ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ ಹೀಗೆ ಹಲವು ಭಾಷೆಗಳ ತಜ್ಞರಾಗಿದ್ದ ಇವರು ವೇದಗಳ ಕುರಿತು 40ಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದಾರೆ. ವೇದತರಂಗ ಮತ್ತು ವೇದ ಪ್ರಕಾಶ ಎಂಬ ಮಾಸಿಕ ಪ್ರಕಟಗೊಳ್ಳಲು ಕಾರಣಕರ್ತರಾದರು. ಆರ್ಯ ಸಮಾಜ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಕರ್ನಾಟಕ ಸರ್ಕಾರ ಇವರಿಗೆ ಗಾಂಧಿ ಸೇವಾ ಪ್ರಶಸ್ತಿಯನ್ನು ಪ್ರಧಾನ ಮಾಡಿ ಗೌರವಿಸಿದೆ.

## A-111 year old to be oldest man

A 111-year-old former engineer in the UK is set to be confirmed as the world's oldest man after the recent death of a Japanese man who was 112, PTI reports from London.

Bob Weighton, who was born on March 29, 1908, is expected to be named as the new record-holder following the death of Chitetsu Watanabe on Sunday, the BBC reported. The 112-year-old Watanabe died just days after being awarded a Guinness World Records certificate. Weighton said: "I don't really feel satisfied because it means someone else has died." Guinness World Records said it was currently investigating the title for the oldest living man following the death of Watanabe. .

Deccan Herald : 28.2.2020

**ಇವೆರಡು ವರದಿಯನ್ನು ಓದಿದಾಗ, ಜಗತ್ತಿನ ಅತ್ಯಂತ ಹಿರಿಯಜ್ಜ 112 ವರ್ಷದ ಘಚಿಣಚಿಟಿಚಿಛಿ ಎಂದು ಘೋಷಿಸಲು ಗಟುಣಜಜ ಖುಟಿಜರಠಟ ಸನ್ನದ್ಧವಾಗಿರುವುದು ಕಂಡು ಬರುತ್ತದೆ. ಆದರೆ ಸ್ವಾತಂತ್ರ್ಯ ಸೇನಾನಿ ಕರ್ನಾಟಕದ ಸುಧಾಕರ ಚತುರ್ವೇದಿ ಅವರು 123ನೇ ವಯಸ್ಸಿನಲ್ಲಿ ನಿಧನರಾಗಿರುವುದರಿಂದ ಇವರೇ ಜಗತ್ತಿನ ಹಿರಿಯಜ್ಜ ಎಂದು ಹೇಳುಬಹುದಾಗಿದೆ. ಈ ವಿಷಯದಲ್ಲಿ 'ಯುಕೆ'ಯೊಂದಿಗೆ ಪತ್ರ ವ್ಯವಹರಿಸಲು ಕ್ರಮಕೈಗೊಳ್ಳೋಣ**



### ವಿಸ್ಮಯ

ಫೆಬ್ರವರಿ ತಿಂಗಳಲ್ಲಿ 29 ದಿನಗಳು ಬರುವಂಥಹ ವರ್ಷಗಳನ್ನು ವಿಶ್ವದ ಹಲವು ದೇಶಗಳಲ್ಲಿ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಅವರಲ್ಲಿ ಶತಾಯುಷಿ ಡೋರಿಸ್ ಕ್ಲೈಫ್, ಇಂಗ್ಲೇಂಡಿನ ಪೋರ್ಟ್ಸ್‌ಮೌತ್‌ನವರಾಗಿದ್ದು, ತನ್ನ ನೂರು ವರ್ಷಗಳ ಜೀವಿತಾವಧಿಯಲ್ಲಿ 25 ಬಾರಿ ಮಾತ್ರ ಜನ್ಮದಿನಾಚರಣೆ ಮಾಡಿಕೊಂಡಿದ್ದಾರೆ. ಏಕೆಂದರೆ ಅವರು ಫೆಬ್ರವರಿ 29ನೇ ದಿನಾಂಕದಂದು ಹುಟ್ಟಿದ್ದರಿಂದ ಆ 29 ದಿನಗಳು ಬರುವ ವರ್ಷಗಳಲ್ಲಿ ಮಾತ್ರ ಹುಟ್ಟುಹಬ್ಬ ಆಚರಿಸಿಕೊಂಡರು. ಇವರ ಜೀವನ ಸಂಗಾತಿ ನಿಧನದ ಬಳಿಕ ಮಗಳು – ಅಳಿಯನೊಂದಿಗೆ ವಾಸವಿದ್ದರು. ಮಗಳೂ ನಿಧನಳಾದ ಕಾರಣ ಏಕಾಂಗಿಯಾಗಿ ವಾಸಿಸುವ ಇವರು, ಬೆಳಗಿನ ನಡಿಗೆ, ವ್ಯಾಯಾಮವೇ ನನ್ನ ದೀರ್ಘಾಯುಷ್ಯದ ಗುಟ್ಟು ಎನ್ನುವರು. ಇವರ ಈ ವಿಶಿಷ್ಠ ಹುಟ್ಟುಹಬ್ಬವನ್ನು ಇದೇ ವರ್ಷದ ಫೆಬ್ರವರಿ 29ರಂದು ಅವರ ಕುಟುಂಬದವರು ಆಯೋಜಿಸಿದ್ದು ಶತಾಯುಷಿ ಸಂತಸದಿಂದ ಪಾಲ್ಗೊಂಡರು.

# ಗಾಂಧಿ ಭವನದ ಕಾರ್ಯಕ್ರಮಗಳು

1. ರಾ.ಸೇ.ಯೋ. ರಾಜ್ಯ ಕೋಶ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಗಾಂಧಿ ಭವನ ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ದಿ.10-12 ಫೆಬ್ರವರಿ 2020ರಂದು 3 ದಿನಗಳ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಗಣನಾಥಶೆಟ್ಟಿ ಎಕ್ಕಾರು, ರಾಜ್ಯ ಸಂಯೋಜನಾಧಿಕಾರಿ, ರಾ.ಸೇ.ಯೋ., ಮುಖ್ಯ ಅತಿಥಿಗಳಾಗಿ ಡಾ. ಸುದರ್ಶನ್, ಆರೋಗ್ಯ ಅಧಿಕಾರಿ, ಬಿಬಿಎಂಪಿ, ಅಧ್ಯಕ್ಷತೆಯನ್ನು ಡಾ. ವಸಂತ ಶೆಟ್ಟಿ, ಸಹಾಯಕ ರಿಜಿಸ್ಟ್ರಾರ್, ರಾ.ಸೇ.ಯೋ. ವಹಿಸಿದ್ದರು. ಇದೇ ಸಮಾರಂಭದಲ್ಲಿ ಗಾಂಧಿ ಭವನದ ಗೌ. ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ, ಶ್ರೀ ಮನೋಜ್ ಸೆಬಾಸ್ಟಿಯನ್, ರಾಜ್ಯ ಸಲಹೆಗಾರರು, ಯುನಿಸೆಫ್, ಡಾ. ಪೂರ್ಣಿಮಾ ಜೋಗಿ, ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ ಇವರುಗಳನ್ನು ಸನ್ಮಾನಿಸಲಾಯಿತು.


2, ಶೇಷಾದ್ರಿಪುರಂ ಕಾಲೇಜು ರಾ.ಸೇ.ಯೋ. ಘಟಕ, ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಕೋಶ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಂಯುಕ್ತಾಶ್ರಯದಲ್ಲಿ ದಿ. 10.2.2020ರಂದು ಬೆಂಳೂರಿನಿಂದ ನಾಗರಹೊಳೆಗೆ ಕಾಡುಗಳನ್ನು ರಕ್ಷಿಸಿ ಜೀವಗಳನ್ನು ಉಳಿಸಿ ಜಾಗೃತಿ ಅಭಿಯಾನದ ಮೂರು ದಿನಗಳ ಸೈಕಲ್ ಜಾಥಾ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗೌ. ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಡಾ. ಗಣನಾಥಶೆಟ್ಟಿ ಎಕ್ಕಾರು, ರಾಜ್ಯ ಸಂಪರ್ಕಾಧಿಕಾರಿ, ರಾ.ಸೇ.ಯೋ., ಡಾ. ಪೂರ್ಣಿಮಾ ಜೋಗಿ, ಕಾರ್ಯಕ್ರಮ ಅನುಷ್ಠಾನಾಧಿಕಾರಿ, ಪ್ರತಾಪ ಲಿಂಗಯ್ಯ, ರಾ.ಸೇ.ಯೋ. ಭಾಗವಹಿಸಿದ್ದರು.

3. ದಿ. 10-11, ಫೆಬ್ರವರಿ 2020 ರಂದು ಶ್ರೀರಂಗಪಟ್ಟಣದಲ್ಲಿ ಪಶ್ಚಿಮವಾಹಿನಿ ಸರ್ವೋದಯ ಮೇಳ ಹಾಗೂ ವಿಚಾರಗೋಷ್ಠಿ ಆಯೋಜಿಸಲಾಗಿತ್ತು. ಜಿ.ಬಿ. ಶಿವರಾಜು, ಟ್ರಸ್ಟಿ, ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಪ್ರತಿಷ್ಠಾನ ಇವರು ಮೇಳದ ಅಧ್ಯಕ್ಷತೆ ವಹಿಸಿದ್ದರು.ಹೆಚ್.ಎಸ್. ದೊರೆಸ್ವಾಮಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಶಿಕ್ಷಣ ನೀತಿಯ ಕುರಿತು ಮತ್ತು ರಾಜಕೀಯ ನೈತಿಕತೆ ಗೋಷ್ಠಿಯಲ್ಲಿ ಬಿ.ಎಮ್. ಹನೀಫ್, ಸಹ ಸಂಪಾದಕರು, ಪ್ರಜಾವಾಣಿ, ವಿಷಯ ಮಂಡನೆ ಮಾಡಿದ್ದರು.

4. ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಕೋಶ ಯುವ ಸಬಲೀಕರಣ ಇಲಾಖೆ ಹಾಗೂ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಇವರ ಸಂಯುಕ್ತಾಶ್ರಯದಲ್ಲಿ ದಿ. 28.02.2020ರಂದು ಚನ್ನಪಟ್ಟಣದಲ್ಲಿ ಯುವಜನ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು. ಸಮ್ಮೇಳನಾಧ್ಯಕ್ಷರಾಗಿ ಕೃಷ್ಣ ಹಾನ್‌ಬಾಳ್ ಅವರಿದ್ದರು. ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಗಾಂಧಿ ಭವನದ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ವಹಿಸಿದ್ದರು. ಸಮ್ಮೇಳನದಲ್ಲಿ ಪುಸ್ತಕ ಬಿಡುಗಡೆ,ಕವಿಗೋಷ್ಠಿ, ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪಿ.ಡಿ. ರಾಜು, ಎಂ.ಎನ್. ಸತ್ಯನಾರಾಯಣ, ಡಾ. ನಮನ ಚಂದ್ರು,, ಡಾ. ನಾಗೇಶ್ ವಿ. ಬೆಟ್ಟಕೋಟೆ, ಟಿ.ವಿ. ಗಿರೀಶ್, ಅನಿಕೇತನ ಮಾಯಣ್ಣ, ರುದ್ರಪ್ಪ ಹನಗವಾಡಿ, ಸಿ.ಪಿ. ಶರತ್ ಚಂದ್ರ, ಎಸ್. ರಾಮಲಿಂಗೇಶ್ವರ, (ಸಿಸಿರಾ) ಅವರು ಭಾಗವಹಿಸಿದ್ದರು.

5. ದಿ.01.03.2020ರಂದು ಗ್ರಾಮ ಸೇವಾ ಸಂಘ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ ಸಹೋಯೋಗದೊಂದಿಗೆ 'ಮಹಿಳೆ ಮತ್ತು ಕಾಯಕ – ಕಾಣದ ಕೆಲಸ ಹೇಳಿದ ಕಥೆ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪೌರತ್ವ ನೋಂದಣೆ ವಿರುದ್ಧ ಹೋರಾಟ, ಮಹಿಳೆಯರ ಆರ್ಥಿಕ ಪರಿಸ್ಥಿತಿ ಕುರಿತು ವಿಶ್ಲೇಷಿಸಲಾಯಿತು. ಕಾರ್ಯಕ್ರಮದಲ್ಲಿ ಜಯಾ ಮೆಹ್ತಾ, ಸಿ. ಮೋಟಮ್ಮ, ಎಂ.ಡಿ. ಪಲ್ಲವಿ, ಮೋಕ್ಷಮ್ಮ ಮತ್ತು ಎಚ್.ಎಸ್. ಅನುಪಮಾ ಅವರು ಭಾಗವಹಿಸಿದ್ದರು.

6. 2020ರ ಮಾರ್ಚ್ 1 ರಿಂದ 5, ರವರೆಗೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸಬಲೀಕರಣ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಕಸ್ತೂರ್‌ಬಾ ಗಾಂಧಿ ಟ್ರಸ್ಟ್, ಬಾರತೀಬೈಲು, ಮೂಡಿಗೆರೆಯಲ್ಲಿ ರಾಜ್ಯ ಮಟ್ಟದ ಮಹಾತ್ಮ ಗಾಂಧೀ ತತ್ವ ಪ್ರಣೀತ ಯುವಜನ ಶಿಬಿರ ಆಯೋಜಿಸಲಾಗಿತ್ತು. ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವ ಜನತೆ, ಮದ್ಯ ವ್ಯಸನಮುಕ್ತ ಸಮಾಜಕ್ಕಾಗಿ ಯುವ ಜನತೆ ಮತ್ತು ಕಸ್ತೂರ್‌ಬಾ ಮತ್ತು ಗಾಂಧಿ ಪುತ್ಥಳಿ ಮತ್ತು ಮಂಟಪದ ಉದ್ಘಾಟನೆ ಹಾಗೂ ಶ್ರಮದಾನ ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಸಿ.ಟಿ. ರವಿ, ಸಚಿವರು, ಶೋಭಾ ಕರಂದ್ಲಾಜೆ, ಲೋಕಸಭಾ ಸದಸ್ಯರು ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ನೆರವೇರಿಸಿದರು, ಅಧ್ಯಕ್ಷತೆಯನ್ನು ಕುಮಾರಸ್ವಾಮಿ, ಶಾಸಕರು ಅವರು ವಹಿಸಿದ್ದರು. ವಿಶೇಷ ಉಪನ್ಯಾಸವನ್ನು ಡಾ. ಬಿ.ಎಲ್. ಶಂಕರ್, ಮಾಜಿ ಸಭಾಪತಿಗಳು ಮತ್ತು ಡ. ಪೂರ್ಣಿಮಾ ಜೋಗಿ, ರಾಸೇ.ಯೋ. ಇವರುಗಳು ನೀಡಿದರು. ಕಾರ್ಯಕ್ರಮದಲ್ಲಿ ಆರ್. ಚೇತನ್, ಪೋಲೀಸ್ ವರಿಷ್ಠಾಧಿಕಾರಿಗಳು, ಡಾ. ಗಣನಾಥಶೆಟ್ಟಿ ಎಕ್ಕಾರು, ರಾ.ಸೇ.ಯೋ. ಎಂ.ಕೆ. ಪ್ರಾಣೇಶ್, ವಿಧಾನ ಪರಿಷತ್ ಸದಸ್ಯರು, ರೋಹಿಣಿ ಕೆ. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ರಮೇಶರ್, ಶಾಮಣ್ಣ ಬಣಕಲ್, ವಿ.ಎನ್. ತಿಪ್ಪನಗೌಡ, ಡಾ. ಉಷಾ ಅಬ್ರಾಲ್, ಪ್ರೊ. ಬಿ.ಸಿ. ಬಸವರಾಜಪ್ಪ, ಬಿ.ಎ. ಜಯರಾಮೇಗೌಡ, ಹೆಚ್.ಕೆ. ವಿಶ್ವನಾಥ್, ಬಿ.ಕೆ. ಶಶಿಕಾಂತ್, ಬಿ.ಯು. ಮಹೇಂದ್ರ, ಶಮಿಉಲ್ಲಾ ಷರೀಫ್ ಅವರು ಭಾಗವಹಿಸಿದ್ದರು.




ದಿ. 10.2.2020ರಂದು ಬೆಂಗಳೂರಿನಿಂದ "ನಾಗರಹೊಳೆಗೆ ಕಾಡುಗಳನ್ನು ರಕ್ಷಿಸಿ ಜೀವಗಳನ್ನು ಉಳಿಸಿ" ಜಾಗೃತಿ ಅಭಿಯಾನದ ಮೂರು ದಿನಗಳ ಸೈಕಲ್ ಜಾಥಾ ಆಯೋಜಿಸಲಾಗಿತ್ತು. ಚಿತ್ರದಲ್ಲಿ ಡಾ. ಗಣನಾಥಶೆಟ್ಟಿ ಎಕ್ಕಾರು, ರಾಜ್ಯ ಸಂಪರ್ಕಾಧಿಕಾರಿ, ರಾಸೇಯೋ, ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕಾರ್ಯದರ್ಶಿ, ಇಂದಿರಾ ಕೃಷ್ಣಪ್ಪ, ಡಾ. ಪೂರ್ಣಿಮಾ ಜೋಗಿ, ರಾ.ಸೇ.ಯೋ. ಅವರುಗಳು ವಿಧ್ಯಾರ್ಥಿಗಳ ಸೈಕಲ್ ಜಾಥಕ್ಕೆ ಚಾಲನೆ ನೀಡಿದರು.



2020ನೇ ಫೆಬ್ರವರಿ 27ರಂದು ಮೈಸೂರಿನಲ್ಲಿ ಆಯೋಜಿಸಲಾಗಿದ್ದ, ಗಾಂಧಿ ಸಾಹಿತ್ಯ ಪ್ರದರ್ಶನ ಮತ್ತು ಮಾರಾಟದಲ್ಲಿ



ದಿ.01.03.2020ರಂದು ಗ್ರಾಮ ಸೇವಾ ಸಂಘ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ ಸಹೋಯೋಗದೊಂದಿಗೆ 'ಮಹಿಳೆ ಮತ್ತು ಕಾಯಕ – ಕಾಣದ ಕೆಲಸ ಹೇಳಿದ ಕಥೆ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಯಾ ಮೆಹ್ತಾ, ಮಾಜಿ ಸಚಿವೆ ಸಿ. ಮೋಟಮ್ಮ, ಎಂ.ಡಿ. ಪಲ್ಲವಿ, ಮೋಕ್ಷಮ್ಮ ಅವರು ಉದ್ಘಾಟನೆಯಲ್ಲಿ ಪಾಲ್ಗೊಂಡಿದ್ದರು.



ದಿ. 10–11, ಫೆಬ್ರವರಿ 2020 ರಂದು ಶ್ರೀರಂಗಪಟ್ಟಣದಲ್ಲಿ ಪಶ್ಚಿಮವಾಹಿನಿ ಸರ್ವೋದಯ ಮೇಳದಲ್ಲಿ, ಪ್ರೊ. ಬಸವರಾಜಪ್ಪ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹೆಚ್.ಎಸ್. ದೊರೆಸ್ವಾಮಿ, ಪ್ರೊ. ಜಿ.ಬಿ. ಶಿವರಾಜು, ಪ್ರೊ. ಕರೀಮುದ್ದೀನ್ ಚಿತ್ರದಲ್ಲಿದ್ದಾರೆ



ದಿ. 28.02.2020 ರಂದು ಚನ್ನಪಟ್ಟಣದಲ್ಲಿ ನಡೆದ ಯುವಜನ ಸಮ್ಮೇಳದ ಉದ್ಘಾಟನಾ ಸಮಾರಂಭದ ಚಿತ್ರದಲ್ಲಿ ಡಾ. ರಾಮಲಿಂಗೇಶ್ವರ (ಸಿಸಿರಾ), ರುದ್ರಪ್ಪ ಹನಗವಾಡಿ, ಅನಿಕೇತನ ಮಾಯಣ್ಣ, ಕೃಷ್ಣ ಹಾನ್‌ಬಾಳ್, ನಾಗೇಶ್ ಬೆಟ್ಟಕೋಟೆ ಗಾಂಧಿ ಭವನದ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಟಿ.ವಿ. ಗಿರೀಶ್‌ಅವರು ಭಾಗವಹಿಸಿದ್ದರು.




2020ನೇ ಮಾರ್ಚ್ 1 ರಿಂದ 5 ರವರೆಗೆ ಕಸ್ತೂರ್‌ಬಾ ಗಾಂಧಿ ಟ್ರಸ್ಟ್, ಬಾರತೀಬೈಲು, ಮೂಡಿಗೆರೆಯಲ್ಲಿ ರಾಜ್ಯ ಮಟ್ಟದ ಮಹಾತ್ಮ ಗಾಂಧೀ ತತ್ವ ಪ್ರಣೀತ ಯುವಜನ ಶಿಬಿರದಲ್ಲಿ ಶ್ರೀಮತಿ ಶೋಭಾ ಕರಂದ್ಲಾಜೆ, ಲೋಕಸಭಾ ಸದಸ್ಯರು ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ನೆರವೇರಿಸಿದರು, ಕುಮಾರಸ್ವಾಮಿ, ಶಾಸಕರು ಎ.ಎನ್. ತಿಪ್ಪನಗೌಡ, ಉಪಾಧ್ಯಕ್ಷರು, ಕ.ಗಾಂ.ಸ್ಮಾ.ನಿ. ಡಾ. ಉಷಾ ಅಬ್ರಾಲ್ ಮತ್ತು ಟ್ರಸ್ಟ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು.

## ಸ್ವಾತಂತ್ರ್ಯಹೋರಾಟಗಾರ ಎಚ್.ಎಸ್.ದೊರೆಸ್ವಾಮಿಗೆ ನಿಂದನೆ

# ಶಾಸಕ ಯತ್ನಾಳ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಧರಣಿ

ಬೆಂಗಳೂರು, ಫೆ.27: ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರನ್ನು ಪಾಕ್ ಏಜೆಂಟ್ ಎಂದು ಆಪಾದಿಸುವ ಮೂಲಕ ಉದ್ಧಟತನ ತೋರಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾಹಿತಿಗಳು, ಚಿಂತಕರು, ಹೋರಾಟಗಾರರು ಆಗ್ರಹಿಸಿದ್ದಾರೆ.

ಗುರುವಾರ ನಗರದ ಗಾಂಧೀ ಭವನ ಬಳಿ ಹೋರಾಟಗಾರರು, ಚಿಂತಕರು, ಸಾಹಿತಿಗಳು ಧರಣಿ ನಡೆಸಿ ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ, ಗಾಂಧೀ ತತ್ವಗಳಲ್ಲಿ ನಂಬಿಕೆಯಿಟ್ಟುಕೊಂಡಿರುವ ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಹಿರಿಯರಾದ ದೊರೆಸ್ವಾಮಿ ನಾಡಿನ ಸಾಕ್ಷಿಪ್ರಜ್ಞೆಯಾಗಿದ್ದಾರೆ ಎಂದು ಹೇಳಿದರು.



ದೊರೆಸ್ವಾಮಿಯು ನಾಡಿನ ಅನೇಕ ಸಾಮಾಜಿಕ ಸಮಸ್ಯೆಗಳ ವಿರುದ್ಧ, ಬಡವರ, ಶೋಷಿತರ ಧ್ವನಿಯಾಗಿ ಚಳವಳಿ ನಡೆಸುತ್ತಿದ್ದಾರೆ. ಅಂತಹ ವ್ಯಕ್ತಿಯನ್ನು ಪಾಕಿಸ್ತಾನದ ಏಜೆಂಟ್ ಹಾಗೂ ನಕಲಿ ಹೋರಾಟಗಾರ ಎಂದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ದೊರೆಸ್ವಾಮಿ ಅವರನ್ನು ಟೀಕಿಸುವಂತಹ ಕೀಳುಮಟ್ಟಕ್ಕೆ ಯತ್ನಾಳ್ ಇಳಿದಿರುವುದು ಅವರ ಮನಃಸ್ಥಿತಿಯನ್ನು ತೋರಿಸುತ್ತದೆ. ನಿರ್ಗತಿಕರು, ಬಡವರು, ಶೋಷಿತರ ಪರವಾಗಿ ಇಳಿ ವಯಸ್ಸಿನಲ್ಲಿಯೂ ಬೀದಿಗಿಳಿದು ಹೋರಾಟ ನಡೆಸುವ ದೊರೆಸ್ವಾಮಿ ನಾಡಿನ ಆಸ್ತಿಯಾಗಿದ್ದಾರೆ. ಅವರ ಹೋರಾಟಗಳು ಹಾಗೂ ಚಳವಳಿಗಳಿಂದ ಶೋಷಿತರಿಗೆ ಎಷ್ಟೋ ವಿಷಯಗಳಲ್ಲಿ ನ್ಯಾಯ ದೊರೆತಿದೆ ಎಂದರು.

ಹಿರಿಯ ನಟ ಮುಖ್ಯಮಂತ್ರಿ ಚ[illegible] ಮಾತನಾಡಿ, ದೊರೆಸ್ವಾಮಿ ಅಂತಹ ಹಿ[illegible] ವಿರುದ್ಧ ಹೇಳಿಕೆ ನೀಡಿರುವ ಯತ್ನಾಳ್ ಕೂ[illegible] ಕ್ಷಮೆ ಕೇಳಬೇಕು. ಮುಂದೆ ಇಂತಹ ಹೇಳಿ[illegible] ನೀಡದಂತೆ ಎಚ್ಚರ ವಹಿಸಬೇಕು. ಇಲ್ಲ[illegible] ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರ[illegible] ಹೋರಾಟ ಮಾಡಬೇಕಾಗುತ್ತದೆ ಎಂದು ಎ[illegible] ನೀಡಿದರು.

ಧರಣಿಯಲ್ಲಿ ಮಾಜಿ ಸಚಿವ ಬಿ.ಟಿ.ಲ[illegible] ನಾಯಕ್, ಸಿಪಿಎಂ ಮುಖಂಡ ಜಿ.[illegible] ನಾಗರಾಜ್, ಕರ್ನಾಟಕ ರಾಜ್ಯ ರೈತ ಸಂಘ ಹ[illegible] ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇ[illegible] ಗಾಂಧೀ ಸ್ಮಾರಕ ನಿಧಿಯ ವೂಡೇ ಪಿ.ಕೃಷ್ಣ ಸೇ[illegible] ಮತ್ತಿತರರಿದ್ದರು.

ವಾರ್ತಾಭಾರತಿ : 28.02.2[illegible]

## ಗಾಂಧಿ ಪಥದಲ್ಲೊಂದು ಗಾಂಧಿ ಪುಸ್ತಕಲೋಕ



[illegible] ಗಾಂಧಿ ಪುಸ್ತಕ [illegible] ಸುಮಾರು 46 [illegible] ಗಾಂಧಿ [illegible]

ಮಾರ್ಗ, ಬಳ್ಳಿಯ ಜೀವನ, ಬಾ ಎಂಡ್ ಬಾಪು, ಫಮ್ ಯಾದವ್ ಮುಂದಿರ್ ಮುಂತಾದ ಪುಸ್ತಕಗಳನ್ನು ಮಳಿಗೆಯಲ್ಲಿ ಕಾಣಬಹುದು.

ಗಾಂಧಿಯ ಜೀವನ ಪಥ, ಅವರ ಜೀವನದಲ್ಲಿ ಎದುರಾದ ಸಂದರ್ಭಗಳ ಬಗ್ಗೆ ಅವರೇ ಬರೆದುಕೊಂಡಿರುವ ಪುಸ್ತಕಗಳ ಕನ್ನಡ ಹಾಗೂ ಇಂಗ್ಲಿಷ್ ಅವತರಣಿಕೆಗಳು ಮಳಿಗೆಯಲ್ಲಿವೆ. ಇದನ್ನು ಹೊರತುಪಡಿಸಿ ವಿವಿಧ ಚಿಂತಕರು ಗಾಂಧೀಜಿ ಬಗ್ಗೆ ಬರೆದಿರುವ ಪುಸ್ತಕಗಳೂ ಇವೆ.

ಪುಸ್ತಕ ಮಾರಾಟದ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಮಳಿಗೆ ಮಾಲೀಕರು, ವ್ಯಾಪಾರ ಚೆನ್ನಾಗಿ ಆಗುತ್ತಿದೆ ಎಂದಿದ್ದಾರೆ. ಈಗಷ್ಟೇ ಉತ್ಸವ ಶುರುವಾಗಿರುವುದರಿಂದ ಮುಂದಕ್ಕೆ ವ್ಯಾಪಾರ ಹೆಚ್ಚಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಸರ್ವೋದಯ ದಿನಾಚರಣೆಯಲ್ಲಿ ಜಗದೀಶ್ ಕೊಪ್ಪ

# ಗಾಂಧಿ ಎಂದರೆ ಜೀವನ ವಿಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧಿ ಎಂದರೆ ಕೇವಲ ವ್ಯಕ್ತಿಯಲ್ಲ, ಶಕ್ತಿಯೂ ಅಲ್ಲ, ಅದೊಂದು ಜೀವನ ವಿಧಾನ' ಎಂದು ಲೇಖಕ ಎನ್. ಜಗದೀಶ್ ಕೊಪ್ಪ ಅಭಿಪ್ರಾಯಪಟ್ಟರು.

ಗಾಂಧಿ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸರ್ವೋದಯ ದಿನಾಚರಣೆ, ಸೇವಾ ಯೋಜನೆ ಕಾರ್ಯಾಗಾರ ಮತ್ತು ಗಾಂಧಿ ಚಿಂತಕರೊಂದಿಗೆ ಸಂವಾದದಲ್ಲಿ ಅವರು ಮಾತನಾಡಿದರು.

'ಹಿರಿಯರು ಗಾಂಧಿಯನ್ನು ಆರಾಧನೆಯ ನೆಲೆಯಲ್ಲಿ ನೋಡಿಕೊಂಡು ಬಂದಿದ್ದು, ನಮ್ಮ ತಲೆಮಾರಿನವರು ಗಾಂಧಿಯನ್ನು ಮುಂದಿನ ಪೀಳಿಗೆಗೆ ಹೇಗೆ ತಲುಪಿಸುವ ಬಗ್ಗೆ ಆಲೋಚನೆ ನಡೆಸಿಕೊಂಡು ಬಂದಿದ್ದೇವೆ' ಎಂದರು.

'ಕುಟುಂಬದೊಳಗೇ ಸಾಕಷ್ಟು ನೋವಿದ್ದರೂ, ಅದನ್ನು ಹೊರ ಜಗತ್ತಿಗೆ ತೋರಿಸಿಕೊಳ್ಳದೆ ಇಡೀ ಸ್ವಾತಂತ್ರ್ಯ ಹೋರಾಟದ ಭಾರವನ್ನು ಗಾಂಧಿ ಹೊತ್ತಿದ್ದರು. ಅವರನ್ನು ನಾವು ವಿವಿಧ ಆಯಾಮಗಳಲ್ಲಿ ಅರ್ಥ ಮಾಡಿಕೊಳ್ಳಬೇಕಿದೆ. ಆಗ ಮಾತ್ರ ಈವರೆಗೂ ನಮಗೆ ದಕ್ಕದ ಮಹಾತ್ಮ ದಕ್ಕುತ್ತಾರೆ' ಎಂದು ಹೇಳಿದರು.




ಗಾಂಧಿ ಸೇವಾಕರ್ತರಾದ ಪುಟ್ಟಮ್ಮ ರುದ್ರಮುನಿಯಪ್ಪ (ಗೌರವ ಪುರಸ್ಕಾರ), ಎನ್.ಜಗದೀಶ್ ಕೊಪ್ಪ (ಜಯಶ್ರೀ ಟ್ರಸ್ಟ್ ಪುರಸ್ಕಾರ), ಸರ್ವೋದಯ ಕಾರ್ಯಕರ್ತರಾದ ನಾಮದೇವ ಶೆಣೈ (ಗೌರವ ಪುರಸ್ಕಾರ), ಶಂಕರ ಉತ್ತೂರ (ಗೌರವ ಪುರಸ್ಕಾರ) ಅವರನ್ನು ಗೌರವಿಸಲಾಯಿತು. ಹಿರಿಯ ಗಾಂಧಿವಾದಿ ಚೆನ್ನಮ್ಮ ಹಳ್ಳಿಕೇರಿ (ಕುಳಿತವರು ಐದನೇ ಅವರಿಂದ) ಡಾ.ರಾಮಲಿಂಗೇಶ್ವರ (ನಿಂತವರಲ್ಲಿ ಮೂರನೆಯವರು), ಕರ್ನಾಟಕ ಮತ್ತು ಸ್ವಾತಂತ್ರ್ಯ ಹೋರಾಟಗಾರ ಪಾಟೀಲ ಪುಟ್ಟಪ್ಪ, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಉಪಾಧ್ಯಕ್ಷ ತಿಪ್ಪಣ್ಣಗೌಡ, ಸ್ವಾಮಿ ಶಾಂತಿವ್ರತಾನಂದ, ವೂಡೇ ಪಿ. ಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂತಿವ್ರತಾನಂದ ಮಾತನಾಡಿ, 'ಶಿಕ್ಷಣ ಎಂಬುದು ಸಾಧನೆ ಮತ್ತು ಸಾಧನ ಎಂದು ಗಾಂಧೀಜಿ ಹೇಳುತ್ತಿದ್ದರು. ಆದರೆ, ಇಂದಿನ ಶಿಕ್ಷಣ ಹೊಟ್ಟೆ ಬಟ್ಟೆಗೆ ಸೀಮಿತವಾಗಿದೆ. ಗಾಂಧೀಜಿ ಬದುಕಿನ ಕುರಿತು 100 ಸಂಪುಟಗಳಿವೆ. ಅದರಲ್ಲಿ ಒಂದು ಸಂಪುಟವನ್ನಾದರೂ ಓದುವ ಪ್ರಯತ್ನವನ್ನು ನಾವೆಲ್ಲರೂ ಮಾಡುತ್ತಿಲ್ಲ. ಉತ್ತಮ ಜೀವನ ರೂಪಿಸಿಕೊಳ್ಳಲು ಇಂತವರ ಜೀವನವನ್ನು ಓದಬೇಕು. ಗಾಂಧೀಜಿ ಅವರ ಒಂದೆರಡು ಸಂದೇಶಗಳನ್ನು ನಾವು ಅಳವಡಿಸಿಕೊಂಡರೆ ಸಾರ್ಥಕ ಬದುಕು ನಡೆಸಬಹುದು' ಎಂದು ಹೇಳಿದರು.

ಬಾಪು ಪ್ರಪಂಚ ಸಂಚಿಕೆ ಜತೆಗೆ 5 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಗಾಂಧಿ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

Mon, 10 February 2020



ಕಾಡುಗಳನ್ನು ರಕ್ಷಿಸಿ ಜೀವಗಳನ್ನು ಉಳಿಸಿ ಘೋಷಣೆಯಡಿ ಶೇಷಾದ್ರಿಪುರ ಕಾಲೇಜು ಎನ್ಎಸ್ಎಸ್ ಘಟಕದಿಂದ ಹಮ್ಮಿಕೊಂಡಿದ್ದ ಬೆಂಗಳೂರು- ನಾಗರಹೊಳೆ ಸೈಕಲ್ ಜಾಥಾಗೆ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಚಾಲನೆ ನೀಡಿದರು. ಎನ್ಎಸ್ಎಸ್ ರಾಜ್ಯ ಸಂಪರ್ಕಾಧಿಕಾರಿ ಡಾ.ಗಣನಾಥ ಶೆಟ್ಟಿ ಎಕ್ಕಾರು, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಪೂರ್ಣಿಮಾ ಜೋಗಿ ಮತ್ತಿತರರು ಇದ್ದರು.


# ಮಹಾತ್ಮ ಗಾಂಧೀಜಿ ಜಗತ್ತಿನ ನಾಯಕ

## ಕಸ್ತೂರಿಬಾ ಗಾಂಧಿ ರಾಷ್ಟ್ರೀಯ ಪ್ರತಿಷ್ಠಾನದ ಧರ್ಮದರ್ಶಿ ಶಿವರಾಜ್ ಅಭಿಮತ

■ ವಿಕ ಸುದ್ದಿಲೋಕ ಶ್ರೀರಂಗಪಟ್ಟಣ

[illegible] ಅನಂತಕುಮಾರ್ ಹೆಗಡೆ [illegible] ಗಾಂಧೀಜಿ ಕುರಿತು [illegible] ಮಾತನಾಡಿರುವು[illegible] ಮುಚ್ಚಿಕೊಳ್ಳಲು ಕೇಂದ್ರ ಸರಕಾರ ಆನ್‌ಲೈನ್‌ನಲ್ಲಿ ಗಾಂಧಿ ಕುರಿತು [illegible] ಜಾರಿಗೆ ತರುವ [illegible]. ಗಾಂಧಿಯನ್ನು ಎಂದಿಗೂ [illegible] ಸಾಧ್ಯವಿಲ್ಲ. ಗಾಂಧೀಜಿ ದೇಶದ ನಾಯಕನಷ್ಟೇ ಅಲ್ಲ, ಇಡೀ ಜಗತ್ತಿನ ನಾಯಕ ಎಂದು ಕಸ್ತೂರಿಬಾ ಗಾಂಧಿ ರಾಷ್ಟ್ರೀಯ ಪ್ರತಿಷ್ಠಾನದ ಧರ್ಮ ದರ್ಶಿ ಬಿ.ಟಿ.ಶಿವರಾಜ್ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ [illegible] ಸರ್ವೋದಯ ಮೇಳ ಅಂಗವಾಗಿ [illegible] 'ರಾಜಕೀಯದಲ್ಲಿ ನೈತಿಕತೆ' ವಿಚಾರಗೋಷ್ಠಿಯಲ್ಲಿ ಮಾತನಾಡಿದರು. [illegible]



[illegible]

## 'ಮಹಿಳೆ ಮತ್ತು ಕಾಯಕ–ಕಾಣದ ಕೆಲಸ, ಕೇಳದ ಕಥೆ' ಸಮಾವೇಶದಲ್ಲಿ ಆರ್ಥಿಕ ತಜ್ಞೆ ಜಯಾ ಮೆಹ್ತಾ ಅಭಿಪ್ರಾಯ

# 'ಮಹಿಳೆಯರ ಆರ್ಥಿಕ ಪರಿಸ್ಥಿತಿ ಇನ್ನೂ ಚಿಂತಾಜನಕ'



[illegible]

# ಬಾಪು ಪ್ರಪಂಚ

ಗಾಂಧಿಜೀ ಅವರ ಜೀವನ, ತತ್ವ ಸಿದ್ಧಾಂತಗಳನ್ನು ಮತ್ತು ಅವರ ಕುರಿತಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಓದುಗರಿಗೆ ಪರಿಚಯ ಮಾಡಿಕೊಡುವುದು ಬಾಪು ಪ್ರಪಂಚ ಮಾಸ ಪತ್ರಿಕೆಯ ಮುಖ್ಯ ಆಶಯವಾಗಿದೆ. ಗಾಂಧೀಜಿ ಅವರ ಕುರಿತಾದ ವಿಚಾರ ಸಂಕಿರಣ, ಸಂವಾದ, ಚರ್ಚೆ, ವಿಶೇಷ ಶಿಬಿರಗಳು, ಕಾರ್ಯಚಟುವಟಿಕೆಗಳ ಮೂಲಕ ಗಾಂಧಿಜೀ ಅವರ ಸಿದ್ಧಾಂತಗಳ ವಿಶ್ವಮಟ್ಟದ ಅನುಸಂಧಾನಗಳನ್ನು ಯುವಜನತೆಗೆ ನೀಡುವುದು ಬಾಪು ಪ್ರಪಂಚದ ಉದ್ದೇಶವಾಗಿದೆ. ಇಂದಿನ ಯುವ ಜನತೆ, ಗಾಂಧಿಜೀ ಅವರ ಜೀವನ ಮತ್ತು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ಮಹದಾಸೆಯನ್ನು ಪತ್ರಿಕೆ ಹೊಂದಿದೆ.

- ಓದುಗರು ತಮ್ಮ ಅಭಿಪ್ರಾಯಗಳು, ಸಲಹೆಗಳು, ಸೂಚನೆಗಳನ್ನು ಪತ್ರಗಳ ಮುಖಾಂತರ ಅಥವಾ ಇಮೇಲ್ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು.
  ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–56001, ದೂರವಾಣಿ : 080–22261967, 9738605799, gandhibhavanbangalore@gmail.com. gandhibhavanabengaluru@gmail.com ನೀಡಬಹುದು.
- ಗಾಂಧೀಜಿ ಅವರ ವಿಚಾರಗಳ ಕುರಿತ ಲೇಖನಗಳು, ವಿಶೇಷ ಸಂಗತಿಗಳು, ಚಿತ್ರಗಳು ಇತ್ಯಾದಿಗಳನ್ನು ಓದಗರು ನೀಡಬಹುದು. ಅವುಗಳನ್ನು ಪ್ರಕಟಿಸುವ ಆಯ್ಕೆ ಸಂಪಾದಕರದ್ದಾಗಿರುತ್ತದೆ.
- ಲೇಖನಗಳಲ್ಲಿ ಅಳವಡಿಸಬಹುದಾದ ಚಿತ್ರಗಳನ್ನೂ ಕಳುಹಿಸಬಹುದು ಹಾಗೂ ನೆರವು ಪಡೆದ ಅಕರಗಳನ್ನು ಸೂಚಿಸುವುದು. ಸಂಪರ್ಕಕ್ಕಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು, ಪೂರ್ಣ ವಿಳಾಸವನ್ನು ಕಡ್ಡಾಯವಾಗಿ ಕಳುಹಿಸುವುದು
- ಜಾಹೀರಾತುಗಳಿಗೆ ಸಂಪರ್ಕ : ಸಹ ಕಾರ್ಯದರ್ಶಿ : 9738605799
  ಕಾರ್ಯನಿರ್ವಹಣಾಧಿಕಾರಿ : 9980307286

## BAPU PRAPANCHA

Bapu Prapancha magazine is published with an objective to spread the life, thoughts, and principles of Gandhi. Seminars, symposia, discussions, camps, and various special activities conducted and internaitonal level researches done reflecting ideas and thoughts are published in this magazine. And this is intended to create to an urge among the youth and students to take him as an ideal in their life.

- Readers are requested to give their opinions, suggestions and viewpoints to the following address and email. Karnataka Gandhi Smaraka Nidhi, Gandhi Bhavana, Kumara Park East, Bengaluru-56001, Ph: 080-22261967, 9738605799;
  gandhibhavanbangalore@gmail.com; gandhibhavanbengaluru@gmail.com.
- Readers are also requested to send articles, special events, important anecdotes or any other information related to Gandhi and Gandhian thoughts. Responsibility to select such matter solely lies with the editor of the magazine.
- Readers shall also providephotos or illustration related their articles, if an . They shall also mention the references, if any, and send their complete address and phone numbers (mandatory).
- For advertisements please contact: Joint Secretary, Ph: 9738605799/ Executive Officer : 9980307286

# ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು




## Tariff rates for Advertisement in Bapu Prapancha Kannada English Monthly Magzine

| Sl.no. | Particulars | Rates (Rs) |
|---|---|---|
| 1 | Half Page (Black & White) | 1,000.00 |
| 2 | Full Page (Black & White) | 2,000.00 |
| 3 | Half Page (Extra) | 2,000.00 |
| 4 | Full Page (Colour) | 4,000.00 |
| 5 | 2nd Cover Page | 5,000.00 |
| 6 | 3rd Back Cover Page | 5,000.00 |
| 7 | Back Cover Page | 10,000.00 |

ಚಂದಾದಾರರಾಗಲು ಈ ಕೆಳಗಿನಂತೆ ಅರ್ಜಿಯನ್ನು ಭರ್ತಿಮಾಡಿ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು

ಹೆಸರು ______________________________

ವಿಳಾಸ ______________________________

______________________________ ನಗರ ______________

ಪಿನ್‌ಕೋಡ್ ______________ ಜಿಲ್ಲೆ ______________ ರಾಜ್ಯ ______________

ಮೊಬೈಲ್ ನಂ. ______________ ಸ್ಥಿರ ದೂರವಾಣಿ ______________

ಹೊಸದಾಗಿ ಚಂದಾದಾರರು ☐ ನವೀಕರಣ ☐

ಗೌರವ ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.- 560001
ಫೋನ್: 080-22261967

## ಬಾಪು ಪ್ರಪಂಚ ಮಾಸಿಕ : ಚಂದಾ ವಿವರ

| ಚಂದಾ ಅವಧಿ | ಚಂದಾ | ರಿಯಾಯಿತಿ ದರ | ದೊರಕುವ ಸಂಚಿಕೆಗಳು |
|---|---|---|---|
| ಬಿಡಿ ಪ್ರತಿ | 20/- | | 1 |
| 1 ವರ್ಷಕ್ಕೆ | 240/- | 170 | 13 |
| 2 ವರ್ಷಕ್ಕೆ | 480/- | 400/- | 26 |
| 3 ವರ್ಷಕ್ಕೆ | 720/- | 630/- | 39 |

- ಚಂದಾ ಹಣವನ್ನು ಡಿಡಿ ಅಥವಾ ಆನ್‌ಲೈನ್ ಮುಖಾಂತರ ಕಾರ್ಯದರ್ಶಿ, ಗಾಂಧಿ ಭವನ ಇವರ ಹೆಸರಿನಲ್ಲಿ ಕಳುಹಿಸುವುದು
- ಬ್ಯಾಂಕ್ ಮಾಹಿತಿ ಖಾತೆ ಸಂಖ್ಯೆ 0788101000778 ಕೆನರಾ ಬ್ಯಾಂಕ್, ಮಾಧವನಗರ ಶಾಖೆ, ಬೆಂಗಳೂರು, IFSC ಸಂಖ್ಯೆ CNRB0000788
- ಚಂದಾ ಕಳುಹಿಸುವ ವಿಳಾಸ : ಕಾರ್ಯದರ್ಶಿ, ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಬೆಂಗಳೂರು.- 56001, ಫೋನ್: 080-22261967
  ಕಚೇರಿಯೊಡನೆ ವ್ಯವಹರಿಸುವಾಗ ಡಿಮ್ಯಾಂಡ್ ಡ್ರಾಫ್ಟ್ ಕಳುಹಿಸಿದ ದಿನಾಂಕವನ್ನು ಚಂದಾದಾರರು ನಮೂದಿಸಬೇಕು. ಯಾವುದೇ ಮಾಹಿತಿಗಾಗಿ ಸಂಪರ್ಕಿಸಿ :
  ಸಹ ಕಾರ್ಯದರ್ಶಿ : 9738605799, ಕಾರ್ಯನಿರ್ವಹಣಾಧಿಕಾರಿ : 9980307286

ಪಾವತಿ: ಬ್ಯಾಂಕಿನ ಹೆಸರು ______________ ಡಿಡಿ ಸಂಖ್ಯೆ ______________

ಮೊತ್ತ ______________ ದಿನಾಂಕ ______________

ನೆಟ್ ಬ್ಯಾಂಕ್ ವಿವರ ______________________________

ಚಂದಾದಾರರ ಹೆಸರು ಮತ್ತು ಸಹಿ

ದಿನಾಂಕ

## To Suscribe please fill the below form

Name ______________________________

Address ______________________________

______________________________ City ______________

Pincode ______________ District ______________ State ______________

Mobile No. ______________________ Landline ______________________

New Membership ☐ Renewal ☐

Hon. Secretary, Gandhi Bhavana, Kumarapark East, Bengaluru - 560001

## Bapu Prapancha Subscripation Detail

| Subscription period | Subscription Amount | Discount | Issues |
|---|---|---|---|
| Single Copy | 20/- | | 1 |
| One year | 240/- | 170/- | 13 |
| Two years | 480/- | 400/- | 26 |
| Three years | 720/- | 630/- | 39 |

- For Subscription, D/D Should be in favour of Secretary, Gandhi Bhavana, Bengaluru
- Bank Details : A/c No. 0788101000778 Canara Bank
  Madhavanagara Branch, Bengaluru, IFSC No. CNRB0000788.
- For Subscription please write to Secretary, Gandhi Bhavana, Kumarapark East Bengaluru - 560001, Ph : 080 - 22261967 with following details.
  For any comunication please contact our Assistant Secretary : 9738605799
  Executive officer : 9980307286.

Payment : Name of the Bank ______________________ D/D. No. ______________

Amount ______________________ Date ______________

Netbanking Detail ______________________________

Subscriber's name & Signature

Date

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RN No: KRBIL/2019/77950
Bapu Prapancha Date of Publication : 15th March posted on 20th March at Bengaluru - 560001
Registered Reg. No. KARBIL/2019/77950 Total Pages : 28+4 Cover pages




## ಪಂಜೆ ಮಂಗೇಶರಾಯರು : (1874 - 1937)

ನವೋದಯ ಕವಿ ಪಂಜೆ ಮಂಗೇಶರಾಯರು 1874ರ ಫೆಬ್ರವರಿ 22ರಂದು ದಕ್ಷಿಣ ಕನ್ನಡದ ಬಂಟ್ವಾಳದಲ್ಲಿ ಜನಿಸಿದ್ದರು. ಮನೆಮಾತು ಕೊಂಕಣಿ ಆದರೂ, ಕನ್ನಡ ಭಾಷಾಭಿವೃದ್ಧಿಗೆ ಇವರ ಕೊಡುಗೆ ಅಪಾರ. ಬಂಟ್ವಾಳದಲ್ಲಿ ಪ್ರಾಥಮಿಕ ಶಾಲೆ, ಮಂಗಳೂರಿನಲ್ಲಿ ಪ್ರೌಢಶಾಲೆ, ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಮೆಟ್ರಿಕ್ ಶಿಕ್ಷಣ. ನಂತರ ಮಂಗಳೂರು ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಮಂಗೇಶರಾಯರು ಅಧ್ಯಾಪಕರಾಗಿ ಕಾಸರಗೋಡಿಗೆ ಸೇರಿದ ಆರಂಭದಲ್ಲಿ ಮಕ್ಕಳಿಗೆ ಶಾಲೆಯಲ್ಲಿ ಪಾಠಗಳಲ್ಲಿ ಆಸಕ್ತಿ ಮುಡಿಸಲು "ನಾಗರ ಹಾವೇ, ಹಾವೊಳು ಹೂವೆ, ಎಲ್ಲಿಯ ನಿನ್ನಯ ಠಾವೆ" ಪದ್ಯವನ್ನು ಬರೆದು, ಹಾಡಿಸಿ, ಸಂಭ್ರಮಿಸುತ್ತಿದ್ದರು. ಹೀಗೆ ಮಕ್ಕಳಿಗೆ ರಂಜಿಸುತ್ತಾ ಪಾಠ ಹೇಳುವ ಬಾಲ ಸಾಹಿತ್ಯ ಮಂಡಲ ಸ್ಥಾಪಿಸಿದರು. ಇದು ಪ್ರಾಥಮಿಕ ಶಾಲಾ ಪಠ್ಯದಲ್ಲಿ ಪದ್ಯವಾಗಿ ಶತಮಾನಗಳ ಕಾಲದವರೆಗೂ ಇದ್ದಿತು. ಉಡುಪಿಯ ಶ್ರೀನಿವಾಸ ಚಾರ್ಯರ ಸಂಪರ್ಕದಿಂದಾಗಿ ಯಕ್ಷಗಾನ, ತಾಳ ಮದ್ದಳೆಯಲ್ಲಿ ಇವರಿಗೆ ಆಸಕ್ತಿ ಬೆಳೆಯಿತು. 1915ಲ್ಲಿ ಮಂಗಳೂರಿಗೆ ವರ್ಗಾವಣೆಗೊಂಡು ಅಲ್ಲೇ ನೆಲೆಸಿದಾಗ, ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುತ್ತಿದ್ದರು. ನಂತರ ಕೊಡಗಿಗೆ ವರ್ಗಾವಣೆ ಆಯಿತು. ಅಲ್ಲಿನ ಪ್ರಕೃತಿ ಸೌಂದರ್ಯ ಇವರನ್ನು ಮನಸೂರೆಗೊಂಡಿತ್ತು. ಆಗ ಅವರು "ಎಲ್ಲಿ ಭೂರಮೆ, ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ..... ಅಲ್ಲೇ ಕೊಡಗಿನ ಬೀಡಲಾ" ಎಂಬ ಸುಂದರ ಕವಿತೆ ಬರೆದರು. ಇದೂ ಸಹ ಪ್ರೌಢಶಾಲಾ ಕನ್ನಡ ಪಠ್ಯದಲ್ಲಿ ಸುಮಾರು 25 ವರ್ಷಗಳವರೆಗೆ ಇದ್ದಿತು. ಈ ಗೀತೆ ಕೊಡಗಿನ ಜನರ ಸ್ವಾಭಿಮಾದ ಪ್ರೀತಿಯ ಸ್ಫೂರ್ತಿಯ ಗೀತೆ ಆಗಿದ್ದರಿಂದ ಕೊಡಗಿನ ನಾಡಗೀತೆಯನ್ನಾಗಿ ಮಾಡಿದ್ದಾರೆ. ಇಲ್ಲೇ ಅವರು "ಕೋಟಿ ಚೆನ್ನಯ್ಯ" ನಾಟಕವನ್ನು ಬರೆದರು. ಇವರ ಕವನಗಳು ಬೆನಗಲ್ ರಾಮರಾಯರು ಪ್ರಕಟಿಸುತ್ತಿದ್ದ "ಸುವಾಸಿನಿ" ಪತ್ರಿಕೆಯಲ್ಲಿ ಪ್ರಕಟವಾಗುತ್ತಿತ್ತು. 1934ರಲ್ಲಿ ರಾಮರಾಯರಿಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಇವರಿಗೆ ಸಂದಿದೆ. ದಕ್ಷಿಣ ಕನ್ನಡದ ಸುಬ್ರಹ್ಮಣ್ಯದ 'ಪಂಜದ' ಪುಟ್ಟ ಹಳ್ಳಿಯ ದಂಪತಿಗಳಾದ ರಾಮಪ್ಪಯ್ಯ ಮತ್ತು ಶಾಂತದುರ್ಗ ಅವರ ಮಗನಾದ ಮಂಗೇಶ್ ಅವರಿಗೆ 'ಪಂಜೆ' ಎಂಬ ಹೆಸರು ರೂಢ ನಾಮವಾಗಿ ಸೇರಿಕೊಂಡಿತ್ತು. ಪುತ್ತೂರಿನ ಭವಾನಿಯೊಂದಿಗೆ ಇವರ ವಿವಾಹ, 1894ರಲ್ಲಿ ಇವರು ಬಿ.ಎ. ಪದವಿ ಪಡೆಯುವ ಮುನ್ನವೇ ನಡೆದಿತ್ತು. ಇವರ ಮಕ್ಕಳ ಸಾಹಿತ್ಯದಲ್ಲಿನ ಕೃಷಿಯನ್ನು ಅಪಾರವಾಗಿ ಮೆಚ್ಚಿದ ಕುವೆಂಪು ಅವರು "ಹಾಲು ಸಕ್ಕರೆ ಸೇರಿ ನೀವಾದಿರಾಚಾರ್ಯ, ನಡೆಯ ಮಡಿಯಲೆ ನುಡಿಯ ಸವಿಯಲಿ, ನಿಮ್ಮ ಬಗೆ ಹಸುಳೆ ನಗು, ನಿಮ್ಮ ಕಳೆಯೊಲುಮೆ ಹಗೆತನಕ್ಕೆ ಹಗೆ, ಕಪ್ಪುರಕ್ಕೆ ಮತ್ತೆ ಸಾಹಿತ್ಯಕ್ಕೆ ಸೌಂಧರ್ಯ ಸಂಗಮಿಸಿದಂತೆ" ಎಂದು ಹಾಡಿ ಹೊಗಳಿದ್ದಾರೆ. ಇಂಥಹ ನಿಷ್ಕಲ್ಮಶ ಹೃದಯದ ಮೇರು ಕವಿ 1937ರ ಅಕ್ಟೋಬರ್ 25ರಂದು ಕಾಲವಶರಾದರು.



## ಮುಳಿಯ ತಿಮ್ಮಪ್ಪಯ್ಯ : (1888 - 1950)

ಕವಿ, ವಿಮರ್ಶಕ ಮುಳಿಯ ತಿಮ್ಮಪ್ಪಯ್ಯನವರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಮುಳಿಯ ಗ್ರಾಮದಲ್ಲಿ. ತಂದೆ ಕೇಶವಭಟ್ಟರು, ತಾಯಿ ಮೂಕಾಂಬಿಕಾ. ಮನೆಯಲ್ಲಿಯೇ ಕುಳಿತು ಕಲಿತದ್ದು ಸಂಸ್ಕೃತ. ಸಂಸ್ಕೃತಾಭ್ಯಾಸವನ್ನು ಮುಂದುವರೆಸಲು ತಿರುವಾಂಕೂರು, ಹಾಗೂ ಮೈಸೂರಿಗೆ ಪ್ರಯಾಣ. ಮೈಸೂರಿನ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗ. ಇಲ್ಲೆ ಕೆಲಕಾಲ ಸಂಗೀತಾಭ್ಯಾಸವನ್ನೂ ಮಾಡಿದರು. 1911ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಉದ್ಯೋಗ ಪ್ರಾರಂಭ. ನಂತರ 1918ರಲ್ಲಿ ಸೇಯಿಂಟ್ ಅಲೋಷಿಯಸ್ ಕಾಲೇಜಿನಲ್ಲಿ ಅಧ್ಯಾಪಕವೃತ್ತಿ. 1948ರಲ್ಲಿ ನಿವೃತ್ತಿ. ಮುದ್ದಣನ ರಾಮಾಶ್ವಮೇಧ ಚೌಕಟ್ಟಿನಲ್ಲಿ ಮೂಡಿ ಬಂದ ಕೃತಿ 'ಚಂದ್ರಾವಳಿ ವಿಲಾಸ.' ಭಾಗವತದಲ್ಲಿ ಬರುವ ಶಂಭಾಸುರನ ಕಥೆಯಾಧಾರಿತ ಹಳೆಗನ್ನಡದ ಛಂದಸ್ಸಿನಲ್ಲಿ ಮೂಡಿ ಬಂದದ್ದು 'ಸೊಬಗಿನ ಬಳ್ಳಿ.' ಕರ್ಣನ ಕುರಿತಾದ ಗದ್ಯ ಕಥನ ನಡೆಯನಾಡು-ಮಹಾಭಾರತದ ಕಥೆ ಆಧಾರಿತ. ಪ್ರೇಮಪಾಶವೆಂಬ ಮತ್ತೊಂದು ಕೃತಿ, ನೀತಿ ವಾಕ್ಯ ಆಧಾರಿತ ಕಾಲ್ಪನಿಕ ಕಥನ ಕಾವ್ಯ. ಬಾಲ್ಯದಿಂದಲೇ ತೊರವೆ ರಾಮಾಯಣಕ್ಕೆ ಮಾರು ಹೋಗಿ ರಚಿಸಿದ ಕೃತಿ 'ನವನೀತ ರಾಮಾಯಣ'. ಪಶ್ಚಾತ್ತಾಪ ಮತ್ತು ವೀರ ಬಂಕೇಯ ಎಂಬ ಎರಡು ಕಾದಂಬರಿ ರಚನೆ. 'ಪಶ್ಚಾತ್ತಾಪ' ಸಾಮಾಜಿಕ ಕಾದಂಬರಿ. 'ವೀರ ಬಂಕೇಯ' ಐತಿಹಾಸಿಕ ವಸ್ತುವುಳ್ಳ ಕಾದಂಬರಿ. ದಕ್ಷಿಣ ಕನ್ನಡ ಜಿಲ್ಲೆಯವರಾದ್ದರಿಂದ ಯಕ್ಷಗಾನ ಸೆಳೆತದಿಂದ ತಪ್ಪಿಸಿಕೊಳ್ಳಲಾಗಿಲ್ಲ. ಪಾರ್ತಿಸುಬ್ಬ ಯಕ್ಷಗಾನ ವಿಮರ್ಶಾ ಗ್ರಂಥ ರಚನೆ. 'ಸೂರ್ಯಕಾಂತಿ ಕಲ್ಯಾಣ' ಯಕ್ಷಗಾನ ಪ್ರಸಂಗ ಕೃತಿ. 'ಹಗಲಿರುಳು' ಇವರು ರಚಿಸಿದ ನಾಟಕ. ಪ್ರಕಟಿಸಿದ ಮತ್ತೆರಡು ಕೃತಿ 'ಆದಿಪುರಾಣ ಸಂಗ್ರಹ' ಮತ್ತು 'ಸಮಸ್ತ ಭಾರತ' ಸಾರ. ಪಂಪನನ್ನು ಕುರಿತ ಸಂಶೋಧನಾ ಕೃತಿ 'ನಾಡೋಜ ಪಂಪ.' ಇದರ ಜೊತೆಗೆ ಇವರ ಉಪನ್ಯಾಸಗಳು ಹಾಗೂ ಲೇಖನಗಳು ಗ್ರಂಥ ರೂಪದಲ್ಲಿ ಪ್ರಕಟಗೊಂಡಿವೆ. ಕನ್ನಡದ ಏಳಿಗೆಗಾಗಿ 'ಕನ್ನಡ ಕೋಗಿಲೆ' ಎಂಬ ಪತ್ರಿಕೆಯನ್ನು ಹೊರತಂದರು. ಸುಮಾರು ಐದು ವರ್ಷಕಾಲ ಅದರ ಸಂಪಾದಕತ್ವ. ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗ ನಿಕಟ ಸಂಪರ್ಕ. 1931ರಲ್ಲಿ ಕಾರವಾರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯ ಗೌರವ ಪಡೆದಿದ್ದಾರೆ.



## ಪು.ತಿ. ನರಸಿಂಹಾಚಾರ್ : (1905 ಮಾರ್ಚ್ 17)

ಪು.ತಿ.ನರಸಿಂಹಾಚಾರ್ ಅವರು ವಿದ್ವಾಂಸ, ಸಾಹಿತಿ ಮತ್ತು ಗೀತನಾಟಕಕಾರರಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತರಾಗಿದ್ದಾರೆ.. ನವೋದಯ ಸಾಹಿತ್ಯದ ಮೊದಲ ತಲೆಮಾರಿನ ಹಲವು ಹಿರಿಯ ಸಾಹಿತಿಗಳಾದ ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಕೆ.ಎಸ್. ನರಸಿಂಹಸ್ವಾಮಿಯಂತಹ ಸಾಲಿಗೆ ಸೇರಿದವರಾಗಿದ್ದಾರೆ. ಪು.ತಿ.ನ. ಎಂಬುದು ಪುರೋಹಿತ ತಿರುನಾರಾಯಣ ನರಸಿಂಹಾಚಾರ್ ಎಂಬ ಹೆಸರಿನ ಸಂಕ್ಷಿಪ್ತ ರೂಪ. ಪು.ತಿ.ನ. ಅವರು - ಹಣತೆ, ಮಾಂದಳಿರು, ಶಾರದ ಯಾಮಿನಿ, ಗಣೇಶ ದರ್ಶನ, ರಸ ಸರಸ್ವತಿ, ಮಲೆ ದೇಗುಲ, ಹೃದಯ ವಿಹಾರಿ, ಇರುಳು ಮೆರುಗು, ಹಳೆ ಬೇರು ಹೊಸ ಚಿಗುರು, ಎಂಬತ್ತರ ನಲುಗು, ರಥಸಪ್ತಮಿ, ನಿರೀಕ್ಷೆ, ಹಣತೆಯ ಹಾಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪು.ತಿ.ನ. ಅವರು ಕವಿ ಮಾತ್ರವಲ್ಲದೆ ಉತ್ತಮ ಗೀತನಾಟಕಕಾರರೂ ಆಗಿದ್ದಾರೆ. ಇವರ ಒಂಬತ್ತು ಗೀತನಾಟಕಗಳಲ್ಲಿ ಗೀತರೂಪಕಗಳೂ ಸೇರಿವೆ. ಅವುಗಳು ಕ್ರಮವಾಗಿ - ಗೋಕುಲ ನಿರ್ಗಮನ, ಶ್ರೀಹರಿಚರಿತೆ, ಅಹಲ್ಯೆ, ಸತ್ಯಾಯನ ಹರಿಶ್ಚಂದ್ರ, ವಿಕಟಕವಿ ವಿಜಯ, ಶಬರಿ, ಹಂಸದಮಯಂತಿ, ಹರಿಣಾಭಿಸರಣ, ದೀಪಲಕ್ಷ್ಮಿ, ಶ್ರೀಹರಿಚರಿತೆ ಈ ನಾಟಕಗಳಲ್ಲಿ ಗೋಕುಲ ನಿರ್ಗಮನ, ಅಹಲ್ಯೆ, ಬಿ.ವಿ. ಕಾರಂತರ ಪ್ರಯತ್ನದಿಂದ ರಂಗಪ್ರಯೋಗ ಕಂಡಿವೆ. ಇವರು ಗೀತರೂಪಕ ನಾಟಕಕಾರರಾಗುವುದಕ್ಕೆ ಕಾವ್ಯ ಮತ್ತು ಸಂಗೀತ ಮೇಳೈಸಿಕೊಂಡ ಕನ್ನಡದ ಏಕೈಕ ರಚನಕಾರರಾಗಿದ್ದುದೇ ಕಾರಣವಾಗಿದೆ. ರಾಮಾಚಾರಿಯ ನೆನಪು, ಈಚಲು ಮರದ ಕೆಳಗೆ, ಗೋಕುಲಾಷ್ಟಮಿ, ಭೀತಿ ಮೀಮಾಂಸೆ, ಧೇನುಕೋಪಾಖ್ಯಾನ, ಮಸಾಲೆದೋಸೆ, ಪ್ರಬಂಧಗಳು ಅವರ ಹಾಸ್ಯ ಪ್ರಸನ್ನತೆ, ಮಾತುಗಾರಿಕೆಯಿಂದ ಕೂಡಿವೆ. ಮಹಾಪ್ರಸ್ಥಾನ, ಕನ್ನಡ ಭಗವದ್ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪು.ತಿ.ನ. ಇವರಿಗೆ ಪದ್ಮಶ್ರೀ, ಪಂಪಪ್ರಶಸ್ತಿ, ನಾಡೋಜ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಡಿ.ಲಿಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಸಂದಿವೆ. ಅವರು ಗತಿಸಿದಾಗ ಅವರಿಗೆ ತೊಂಬತ್ತೊಮ್ರು ವರ್ಷ ವಯಸ್ಸಾಗಿತ್ತು.

ಇವರಿಗೆ, ______________________________

If undelivered please return to:
Hon. Secretary, Karnataka Gandhi Smaraka Nidhi, Gandhi Bhavana, Kumara Park Post
Bengaluru - 560001,Ph: 080 22261967, Email : gandhibhavanabengaluru@gmail.com

Printed at Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049